ನವೆಂಬರ್ 2021

ಸಂಚಿಕೆ 1

ಬೆಂಗಳೂರು ಇತಿಹಾಸ ವೈಭವ

ಸಿಂಗಾಪುರ



The Mythic Society
Founded 1909

ಬೆಂಗಳೂರು ಇತಿಹಾಸ ವೈಭವ

ನವೆಂಬರ್ 2021, ಸಂಚಿಕೆ 1 (ಸಿಂಗಾಪುರ)



ದಿ ಮಿಥಿಕ್ ಸೊಸೈಟಿ ಶಾಸನಗಳ 3ಡಿ ಡಿಜಿಟಲ್ ಸಂರಕ್ಷಣಾ ಯೋಜನೆಯ ತಂಡ :

ಮೇಲಿನ ಸಾಲು
ಶಶಿಕುಮಾರ ನಾಯ್ಕ ಕೆ.ಸಿ.
ಡಾ. ಮಧುಸೂದನ ಎಂ.ಎನ್.
ಡಾ. ಭೈರಪ್ಪ ಎಂ.ಜಿ.

ಕೆಳಗಿನ ಸಾಲು
ಪಿ.ಎಲ್.ಉದಯ ಕುಮಾರ್
ಡಾ. ಆರ್.ಯುವರಾಜು

ಮತ್ತು
ಆರ್ಟೆಕ್ ಸ್ಪೇಸ್ ಸ್ಪೈಡರ್



ಸಂಪರ್ಕಕ್ಕಾಗಿ

ದಿ ಮಿಥಿಕ್ ಸೊಸೈಟಿ

ಪಿ.ಎಲ್.ಉದಯ ಕುಮಾರ್
98452 04268

ಡಾ. ಪಿ.ಜಯಸಿಂಹ
94480 03909

3dscanning.mythicsociety@gmail.com

The Mythic Society
Inscription Stones of Bangalore

@MythicSociety

ಸಿಂಗಾಪುರ ನಿವಾಸಿಗಳು

ಮೋಹನ್ ನಾಯಕ್
63601 26704

ಎಸ್.ವಿ. ಶ್ರೀನಿವಾಸ್
9060404969

ನಿಮ್ಮ ಪ್ರತಿಕ್ರಿಯೆಯನ್ನು ತಿಳಿಸಲು

https://bit.ly/singapura_kan

ಮೊದಲ ಮಾತು

ದಿ ಮಿಥಿಕ್ ಸೊಸೈಟಿಯ ಶಾಸನಗಳ 3ಡಿ ಡಿಜಿಟಲ್ ಸಂರಕ್ಷಣಾ ಯೋಜನೆಯ ತಂಡವು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳ (ಅವಿಭಜಿತ ಬೆಂಗಳೂರು ಜಿಲ್ಲೆ) ಬಡಾವಣೆಗಳು ಮತ್ತು ಹಳ್ಳಿಗಳ ಸ್ಥಳೀಯ ಇತಿಹಾಸವನ್ನು "ಬೆಂಗಳೂರು ಇತಿಹಾಸ ವೈಭವ" ಎಂಬ ಸರಣಿ ಮಾಲಿಕೆಗಳಲ್ಲಿ ರಚಿಸಲಿದೆ. ಈ ಸರಣಿ ಮಾಲಿಕೆಗಳನ್ನು ರಚಿಸಲು ಶಿಲಾಶಾಸನಗಳನ್ನು ಆಧುನಿಕ ತಂತ್ರಜ್ಞಾನದ ಮೂಲಕ ಪಡೆದ ಶಾಸನದ ನೈಜ ಪಾಠದ ಸಹಾಯದಿಂದ ವಸ್ತುನಿಷ್ಠವಾದ ಸ್ಥಳೀಯ ಇತಿಹಾಸವನ್ನು ರಚಿಸಲಿದೆ. **ಪ್ರಸ್ತುತ ಸಂಚಿಕೆಯಲ್ಲಿ 'ಸಿಂಗಾಪುರ'ದ ಇತಿಹಾಸವನ್ನು ಶಾಸನಗಳ ಹಿನ್ನೆಲೆಯಲ್ಲಿ ಮತ್ತು ಇನ್ನಿತರೆ ಪೂರಕ ಆಧಾರಗಳನ್ನು ಬಳಸಿಕೊಂಡು ರಚಿಸಲಾಗಿದೆ.**

ಸ್ಥಳೀಯ ಇತಿಹಾಸಕ್ಕೆ ಶಾಸನಗಳು ಅತ್ಯಮೂಲ್ಯವಾದ ಐತಿಹಾಸಿಕ ಮಾಹಿತಿಯನ್ನು ಒದಗಿಸುತ್ತವೆ. ಆದರೆ ಸಾಮಾನ್ಯ ಜನರಿಗೆ ಅವುಗಳ ಮೌಲ್ಯ ಹಾಗೂ ಮಹತ್ವದ ಬಗ್ಗೆ ಹೆಚ್ಚಿನ ತಿಳುವಳಿಕೆ ಇರುವುದಿಲ್ಲ. ಈ ತಿಳುವಳಿಕೆಯ ಕೊರತೆ ಹಾಗೂ ತೀವ್ರಗತಿಯ ನಗರೀಕರಣದ ಪ್ರಭಾವವು ಅಮೂಲ್ಯವಾದ ಶಾಸನ ಪರಂಪರೆಯ ವಿನಾಶಕ್ಕೆ ಕಾರಣವಾಗಿದೆ. ಆದ್ದರಿಂದ **ದಿ ಮಿಥಿಕ್ ಸೊಸೈಟಿ**ಯ 3ಡಿ ಶಾಸನಗಳ ಯೋಜನಾ ತಂಡವು ನಮ್ಮ ಪರಂಪರೆಯ ಭಾಗವಾಗಿರುವ ಈ ಶಾಸನಗಳನ್ನು ಸಂರಕ್ಷಿಸುವ ಮೂಲ ಆಶಯವನ್ನು ಹೊಂದಿದೆ. ಇದಕ್ಕಾಗಿ **ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಲ್ಲಿ ಕಂಡುಬರುವ 1500 ಕ್ಕೂ ಹೆಚ್ಚು ಶಿಲಾ ಶಾಸನಗಳನ್ನು ಹೈ-ರೆಸಲ್ಯೂಶನ್ 3ಡಿ ಸ್ಕ್ಯಾನಿಂಗ್ ಮಾಡುವ ಮೂಲಕ ಡಿಜಿಟಲ್ ಸಂರಕ್ಷಣೆ ಕಾರ್ಯವನ್ನು ಮಾಡಲಾಗುತ್ತಿದೆ.**

ಡಿಜಿಟಲ್ ಸ್ಕ್ಯಾನಿಂಗ್ ನಂತರ 3ಡಿ ಮಾಡೆಲ್ ಗಳನ್ನು ಬಳಸಿಕೊಂಡು ನಮ್ಮ ತಂಡ ಹಾಗೂ ಶಾಸನತಜ್ಞರ ತಂಡವು ಈ ಶಾಸನಗಳ ಪಠ್ಯವನ್ನು ಪುನರ್ ಅಧ್ಯಯನ ಮಾಡುತ್ತಿದೆ. ಮುಖ್ಯವಾಗಿ ಈ ಯೋಜನೆಯ ವ್ಯಾಪ್ತಿಗೆ ಒಳಪಡುವ ಮೇಲೆ ಹೆಸರಿಸಿದ ಮೂರೂ ಜಿಲ್ಲೆಗಳ ದಾಖಲಾದ ಒಟ್ಟು 1500 ಶಾಸನಗಳಲ್ಲಿ ಶೇಕಡ 80ರಷ್ಟನ್ನು **ಕರ್ನಾಟಕದ ಶಾಸನ ಪಿತಾಮಹ ಬೆಂಜಮಿನ್ ಲೂಯಿಸ್ ರೈಸ್** ರವರು **ಎಪಿಗ್ರಾಫಿಯ ಕರ್ನಾಟಿಕ ಸಂಪುಟ 09 (1905)**ರಲ್ಲಿ ಸಂಪಾದಿಸಿದ್ದಾರೆ. ದಾಖಲಾದ ಈ ಶಾಸನಗಳು ಮಾತ್ರವಲ್ಲದೇ ದಾಖಲಾಗದ ಎಷ್ಟೋ ಶಾಸನಗಳು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ದೊರೆಯುತ್ತಿದ್ದು, ಇವುಗಳನ್ನು ಸಹ ಅಧ್ಯಯನಕ್ಕೆ ಅಳವಡಿಸಿಕೊಂಡಿದ್ದೇವೆ. ಕ್ಷೇತ್ರಕಾರ್ಯದಲ್ಲಿ ಗುರುತಿಸಿದ ಎಲ್ಲಾ ಶಾಸನಗಳನ್ನು **ಗೂಗಲ್ ಮ್ಯಾಪ್ ನಲ್ಲಿ (https://bit.ly/inscriptionblr)** ಸೇರಿಸಲಾಗಿದೆ.

ಈ ಮೊದಲು ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಸ್ಥಳೀಯ ಇತಿಹಾಸ ಲೇಖನಗಳನ್ನು ವ್ಯವಸ್ಥಿತವಾಗಿ ಪ್ರಕಟಿಸಿರುವುದು ವಿರಳ. ವ್ಯವಸ್ಥಿತವಾಗಿ ಪ್ರಕಟಿಸಿದ ಕೆಲವೇ ಕೆಲವು ಲೇಖನಗಳು 'ವಿದ್ವತ್ಪೂರ್ಣ ನಿಯತಕಾಲಿಕೆ'ಗಳಲ್ಲಿ ಹಾಗೂ ಇನ್ನೂ ಕೆಲವು ಲೇಖನಗಳು ಗ್ರಂಥಾಲಯಗಳಲ್ಲಿರುವ ಅಪರೂಪದ ಪುಸ್ತಕಗಳಲ್ಲಿದ್ದು ಕೆಲವರು ಮಾತ್ರ ಅವುಗಳನ್ನು ಓದಲು ಸಾಧ್ಯವಾಗಿದೆ. ಆದ್ದರಿಂದ ಸಾಮಾನ್ಯ ಜನರಿಗೆ ತಮ್ಮ ಸ್ಥಳೀಯ ನೈಜ ಇತಿಹಾಸವನ್ನು ತಿಳಿಯಲು ಸಾಧ್ಯವಾಗಿಲ್ಲ ಎಂದೇ ಹೇಳಬಹುದು. ಹಾಗಾಗಿ ನಮ್ಮ ತಂಡವು ಈ ಪರಿಸ್ಥಿತಿಯನ್ನು ಸುಧಾರಿಸಲು ಬಯಸುತ್ತದೆ. ಅಂದರೆ ಈ **ಸರಣಿ ಮಾಲಿಕೆ** ಮೂಲಕ ಸ್ಥಳೀಯ ಇತಿಹಾಸವನ್ನು ಸ್ಥಳೀಯ ನಿವಾಸಿಗಳಿಗೆ ತಲುಪಿಸುವ ಮೂಲ ಗುರಿಯನ್ನು ಹೊಂದಿದ್ದೇವೆ. ಇತಿಹಾಸಕಾರ **ಎ.ಎಸ್.ಅಲ್ತೇಕರ್** ರವರು 1927ರಲ್ಲಿ ಹೇಳಿರುವ ಈ ಮಾತುಗಳನ್ನು ನಮ್ಮ ತಂಡವು ಸಂಪೂರ್ಣವಾಗಿ ಒಪ್ಪುತ್ತದೆ[1]:

1 Altekar , A S. A History of Village Communities in Weswtern India. University of Bombay Economics Series No. 5, 1927. p-26

"It is indeed high time for scholars to realize that real and reliable history of the (India's) past can be reconstructed not by wide generalizations but by intense research, province by province, century by century....epigraphic evidence shows quite clearly how dangerous it is to draw general conclusions applicable to India as a whole from data supplied by the smritis of one province or the inscriptions of another".

ಕನ್ನಡ ಅನುವಾದ: "ಭಾರತದ ಗತಕಾಲದ ನೈಜ ಮತ್ತು ವಿಶ್ವಾಸಾರ್ಹ ಇತಿಹಾಸವನ್ನು ಸರಳೀಕರಿಸಕೂಡದು. ಒಂದು ಪ್ರಾಂತ್ಯದ ಸ್ಮೃತಿಗಳು (ಜನಪದ/ದಂತಕಥೆ/ಸಾಹಿತ್ಯ...) ಅಥವಾ ಶಾಸನಗಳಿಂದ ಒದಗಿಸಿದ ಆಧಾರಗಳಿಂದ ಇಡೀ ಭಾರತಕ್ಕೆ ಅನ್ವಯವಾಗುವ ತೀರ್ಮಾನಗಳನ್ನು ತೆಗೆದುಕೊಳ್ಳುವುದು ತಪ್ಪು ಎನ್ನುವುದಕ್ಕೆ ಶಾಸನಗಳು ಉತ್ತರಿಸುತ್ತವೆ. ಆದರೆ ತೀವ್ರ ಸಂಶೋಧನೆಯಿಂದ ಪ್ರಾಂತ್ಯದಿಂದ ಪ್ರಾಂತ್ಯಕ್ಕೆ, ಶತಮಾನದಿಂದ ಶತಮಾನಕ್ಕೆ ಇತಿಹಾಸವನ್ನು ಪುನರ್ ನಿರ್ಮಾಣ ಮಾಡಬಹುದೆಂದು ವಿದ್ವಾಂಸರು ಅರಿತುಕೊಳ್ಳುವ ಸಮಯ ಈಗ ಬಂದಿದೆ".

ಸ್ಥಳೀಯ ಇತಿಹಾಸವನ್ನು ಸ್ಥಳೀಯರಿಗೆ ತಿಳಿಸದಿದ್ದರೆ ಅದನ್ನು ಐತಿಹಾಸಿಕ ಪ್ರಮಾದವೆಂದೇ ನಾವು ಭಾವಿಸುತ್ತೇವೆ. ಆದ್ದರಿಂದ ಈ ಲೇಖನಗಳನ್ನು ವಿಶೇಷವಾಗಿ ಸ್ಥಳೀಯ ನಿವಾಸಿಗಳನ್ನು ಗಮನದಲ್ಲಿಟ್ಟುಕೊಂಡು ರಚಿಸಲಾಗಿದೆ. ಇವರಲ್ಲಿ ಮಕ್ಕಳು, ವಿದ್ಯಾರ್ಥಿಗಳು ಅಥವಾ ವಯಸ್ಕರು ಯಾರಾದರೂ ಆಗಿರಬಹುದು. **ಮಕ್ಕಳಿಗೂ ಅರ್ಥವಾಗಬೇಕೆಂಬ ದೃಷ್ಟಿಯಿಂದ ಈ ಲೇಖನವನ್ನು ರಚಿಸಿದ್ದರೂ ಸಹ ಇಲ್ಲಿ ಪ್ರಸ್ತುತ ಪಡಿಸಲಾದ ಮಾಹಿತಿಯ ಸಂಶೋಧನಾ ಗುಣಮಟ್ಟ ಮತ್ತು ಆಳ ಸತ್ಯಾಸತ್ಯತೆಯಿಂದ ಕೂಡಿದ್ದು** ಈ ವಿಚಾರದಲ್ಲಿ ಯಾವುದೇ ರಾಜಿಯನ್ನು ಮಾಡಿಕೊಳ್ಳುವುದಿಲ್ಲ. ಮಕ್ಕಳಿಗೂ ಈ ಲೇಖನವನ್ನು ಅರ್ಥಮಾಡಿಕೊಳ್ಳಲು ಮತ್ತು ಆನಂದಿಸಲು ಸಾಧ್ಯವಾದರೆ, ವಿದ್ವಾಂಸರಲ್ಲದೆ, ಹೆಚ್ಚಿನ ಶಿಕ್ಷಣವಿಲ್ಲದ ಗ್ರಾಮಸ್ಥರು ಹಾಗೂ ಇನ್ನಿತರ ವಿವಿಧ ವಲಯದ ಜನ ಸಮುದಾಯಕ್ಕೆ ಇತಿಹಾಸವನ್ನು ತಿಳಿಸಬಹುದು ಎಂಬುದು ನಮ್ಮ ಬಲವಾದ ನಂಬಿಕೆ.

ಈ ಇತಿಹಾಸ ಲೇಖನಗಳನ್ನು ಅಂತರ್ಜಾಲದಲ್ಲಿ (Internet) ಮುಕ್ತವಾಗಿ ಅಪ್ ಲೋಡ್ ಮಾಡಲಾಗುತ್ತಿದೆ. ಅಂದರೆ **Facebook, Whatsapp, Twitter** ಹಾಗೂ ಇನ್ನಿತರ ಮಾಧ್ಯಮಗಳಲ್ಲಿ ಹಂಚಲಾಗುತ್ತದೆ. ಸಾಮಾಜಿಕ ಮಾಧ್ಯಮಗಳನ್ನು ಬಳಸುವ ಯಾರು ಬೇಕಾದರೂ ಈ ಲೇಖನಗಳನ್ನು ಓದಬಹುದು. '**ದಿ ಮಿಥಿಕ್ ಸೊಸೈಟಿ**'ಯು ತನ್ನ ಹೆಚ್ಚು ಮೆಚ್ಚುಗೆ ಪಡೆದ '**ಕ್ವಾರ್ಟರ್ಲಿ ಜರ್ನಲ್ ಆಫ್ ದಿ ಮಿಥಿಕ್ ಸೊಸೈಟಿ**'ಯಲ್ಲಿ (**QJMS**) ಮತ್ತು ಇತರೆ ಮುದ್ರಣ ಸ್ವರೂಪಗಳಲ್ಲಿ ಈ ಲೇಖನಗಳನ್ನು ಪ್ರಕಟಿಸುತ್ತದೆ. ಈ ಲೇಖನಗಳಲ್ಲಿನ ಮಾಹಿತಿಯು ಶಾಸನಗಳ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸಲು ಮತ್ತು ಸ್ಥಳೀಯ ವಿಷಯಗಳ ಕುರಿತು ಹೆಚ್ಚಿನ ಸಂಶೋಧನೆ ಮತ್ತು ಪರಿಶೋಧನೆಯನ್ನು ಕೈಗೊಳ್ಳಲು ಸಹಾಯ ಮಾಡುತ್ತದೆ ಎಂದು ನಾವು ಭಾವಿಸುತ್ತೇವೆ. ಆದುದರಿಂದ ಈ ಲೇಖನಗಳನ್ನು ಮುಕ್ತವಾಗಿ ಹಂಚುತ್ತಿದ್ದೇವೆ. ಆದರೆ **CC BY 4.0** ಪರವಾನಗಿ ನಿಯಮಕ್ಕೆ ಅನುಗುಣವಾಗಿರುತ್ತವೆ.

ದಿ ಮಿಥಿಕ್ ಸೊಸೈಟಿಯ ಶಾಸನಗಳ 3ಡಿ ಡಿಜಿಟಲ್ ಸಂರಕ್ಷಣಾ ಯೋಜನೆಯ ತಂಡ

ಪಿ. ಎಲ್. ಉದಯ ಕುಮಾರ್
ಡಾ. ಭೈರಪ್ಪ ಎಂ.ಜಿ.
ಡಾ. ಮಧುಸೂದನ ಎಂ.ಎನ್.
ಡಾ. ಆರ್. ಯುವರಾಜು
ಶಶಿಕುಮಾರ ನಾಯ್ಕ ಕೆ.ಸಿ.



ಕೃತಜ್ಞತೆಗಳು

ಸಿಂಗಾಪುರದ ಶಾಸನವನ್ನು ಗುರುತಿಸಲು ಮತ್ತು ಸಂರಕ್ಷಿಸಲು ಬೆನ್ನುಲುಬಾಗಿ ನಿಂತ ಸ್ಥಳೀಯರಾದ **ಮೋಹನ್ ನಾಯಕ್** ಮತ್ತು **ಎಸ್.ವಿ.ಶ್ರೀನಿವಾಸ್ ಹಾಗೂ ಶಾಸನವನ್ನು ದೇವಾಲಯದ ಆವರಣಕ್ಕೆ ಸಂರಕ್ಷಿಸಲು ಸಹಕಾರ ನೀಡಿದ ಆದಿತ್ಯ ಹನುಮರೆಡ್ಡಿಯರಿಗೆ ಮತ್ತು ಅವರ ಕುಟುಂಬವರ್ಗದವರೆಲ್ಲರಿಗೂ**, ಸಿಂಗಾಪುರ ವರದರಾಜ ದೇವಾಲಯದ ಅರ್ಚಕರಾದ **ದತ್ತಾತ್ರೇಯ** ಅವರಿಗೆ, ಹಾರೋಹಳ್ಳಿ ಶಾಸನದ ಸ್ಕ್ಯಾನ್ ಮಾಡಲು ಮತ್ತು ಭೌತಿಕವಾಗಿ ಸಂರಕ್ಷಿಸಲು ಸಹಾಯ ಮಾಡಿದ **ಹೆಚ್.ಎನ್. ನಾರಾಯಣ ರೆಡ್ಡಿ** ಹಾಗೂ **ಹೆಚ್.ಸತ್ಯನಾರಾಯಣ** ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಲೇಖನದಲ್ಲಿ ಬಳಸಿರುವ ಸಿಂಗಾಪುರ, ಹಾರೋಹಳ್ಳಿ, ಚಿಕ್ಕಬೆಟ್ಟಹಳ್ಳಿ ಶಾಸನಗಳ ಪಾಠಗಳನ್ನು ಮರು ಓದಿ, ಲೇಖನದ ಕರಡನ್ನು ತಿದ್ದಿ ಸಲಹೆಗಳನ್ನು ನೀಡಿ ಸಹಕರಿಸಿದ ಶಾಸನ ತಜ್ಞರಾದ **ಪ್ರೊ. ಕೆ.ಆರ್. ನರಸಿಂಹನ್** ಅವರಿಗೆ ಹಾಗೂ ಶಾಸನ ಲೇಖನದ ಕರಡನ್ನು ಓದಿ ಸಲಹೆ ನೀಡಿದ ಶಾಸನ ತಜ್ಞರಾದ **ಡಾ. ಪಿ.ವಿ.ಕೃಷ್ಣಮೂರ್ತಿ** ಅವರಿಗೆ ಹಾಗೂ ಶಿಲ್ಪಶಾಸ್ತ್ರದ ವಿವರಣೆಗೆ ಸಲಹೆ ನೀಡಿದ **ಡಾ. ಶಲ್ವಪಿಳ್ಳೈ ಅಯ್ಯಂಗಾರ್** ಅವರಿಗೂ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಶಾಸನ ಲೇಖನದ ಕರಡನ್ನು ಓದಿ ಸಲಹೆ ನೀಡಿದ **ಜೆ.ಎನ್. ಜಗನ್ನಾಥ್, ಸಿಂಗಾಪುರ ಮಹೇಶ್, ಮೋಹನ್ ನಾಯಕ್** ಹಾಗೂ **ದು.ಗು.ಲಕ್ಷ್ಮಣ್** (ದಿ ಮಿಥಿಕ್ ಸೊಸೈಟಿ) ಮತ್ತು **ಡಾ. ಪಿ.ಜಯಸಿಂಹ** (ದಿ ಮಿಥಿಕ್ ಸೊಸೈಟಿ) ಅವರಿಗೆ ಪ್ರೀತಿಪೂರ್ವಕ ಧನ್ಯವಾದಗಳು.

ನಮ್ಮ ಶಾಸನ ಅಧ್ಯಯನಕ್ಕೆ ಸೂಕ್ತ ಡಿಜಿಟಲ್ ಚಿತ್ರಗಳನ್ನು ತಯಾರಿಸಲು ಸ್ವತಂತ್ರ ಹಾಗೂ ಮುಕ್ತ ತಂತ್ರಾಂಶವಾದ (FOSS-Free Open Source Software) **ಮೆಷ್ ಲ್ಯಾಬ್** ಅನ್ನು ಬಳಸಿದ್ದು, ಇದನ್ನು ಅಭಿವೃದ್ಧಿಪಡಿಸಿದ ಇಟಲಿಯ **Istituto di Scienza e Tecnologie dell'Informazione** ಅವರಿಗೆ ಕೃತಜ್ಞತೆಗಳು. ಲೇಖನ ತಯಾರಿಸಲು ಮುಕ್ತ ತಂತ್ರಾಂಶವಾದ **ಮಿಡಿಯಾವಿಕಿ**ಯನ್ನು ಬಳಸುತ್ತಿದ್ದು, ಈ ತಂತ್ರಾಂಶವನ್ನು ನಮ್ಮ ಕಂಪ್ಯೂಟರ್ ಮೇಲೆ ಅಳವಡಿಸಿಕೊಟ್ಟ **ಹೆಚ್.ಎಲ್.ಓಂಶಿವಪ್ರಕಾಶ್** ಅವರಿಗೆ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಶಾಸನವನ್ನು 3ಡಿ ಡಿಜಿಟಲ್ ಸಂರಕ್ಷಣೆ ಮಾಡಲು ಅನುಮತಿ ನೀಡಿ ಸದಾ ಬೆನ್ನುಲುಬಾಗಿ ನಿಂತಿರುವ **ಕರ್ನಾಟಕ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ**ಗಳ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರೆಲ್ಲರಿಗೂ ಪ್ರೀತಿಪೂರ್ವಕ ಧನ್ಯವಾದಗಳು.


ದಿ ಮಿಥಿಕ್ ಸೊಸೈಟಿಯ ಗೌರವ ಕಾರ್ಯದರ್ಶಿಗಳಾದಂತಹ **ವಿ. ನಾಗರಾಜ್** ಅವರಿಗೆ, ಆಡಳಿತ ಮಂಡಳಿಯ ಸದಸ್ಯರಾದ **ಎಂ.ಆರ್. ಪ್ರಸನ್ನಕುಮಾರ್** ಅವರಿಗೆ, ಸಂಶೋಧಕರಾದ **ಡಾ. ಪಿ.ಜಯಸಿಂಹ** ಅವರಿಗೆ ಸಂಸ್ಥೆಯ ಎಲ್ಲಾ ಆಡಳಿತ ಮಂಡಳಿಯ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರೆಲ್ಲರಿಗೂ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.



ಹೆಚ್. ಎಲ್. ಓಂಶಿವಪ್ರಕಾಶ್



ಹೆಚ್.ಎನ್. ನಾರಾಯಣ ರೆಡ್ಡಿ



ಪ್ರೊ. ಕೆ.ಆರ್. ನರಸಿಂಹನ್



ಹೆಚ್. ಸತ್ಯನಾರಾಯಣ



ಡಾ. ಪಿ.ವಿ. ಕೃಷ್ಣಮೂರ್ತಿ



ಮೋಹನ್ ನಾಯಕ್

MeshLab

MediaWiki

ಪರಿವಿಡಿ



15



19




26

ಸಿಂಗಾಪುರದ ಇತಿಹಾಸ ವೈಭವ



ಶಾಸನಗಳು ಹಾಗೂ ದೇವಾಲಯದ ಆಧಾರದಿಂದ ಸಿಂಗಾಪುರವು ಸುಮಾರು 500 ವರ್ಷಗಳಷ್ಟು ಪುರಾತನವಾದುದು. ಇದೊಂದು ಶ್ರೀವೈಷ್ಣವರ ಪವಿತ್ರ ಧಾರ್ಮಿಕ ಕ್ಷೇತ್ರವಾಗಿದ್ದರಿಂದ, ಇಲ್ಲಿ ರಾಮಾನುಜ ಕೂಟವನ್ನು ಸ್ಥಾಪಿಸಿ, ಹಲವು ಸಾಮಾಜಿಕ ಕಾರ್ಯಗಳು ನಡೆಸುತ್ತಿದ್ದರು. ಇಂದು ವರದರಾಜ ಸ್ವಾಮಿ ಎಂದು ಕರೆಯುವ ದೇವಾಲಯವು ಶಾಸನೋಕ್ತ ತಿರುವೆಂಗಳನಾಥ ದೇವಾಲಯವಾಗಿದೆ. ಇಲ್ಲಿನ ಕೆರೆಯೂ ಸಹ ಸುಮಾರು ಐದುನೂರು ವರ್ಷದ ಹಳೆಯದೇ ಆಗಿದ್ದು ಇದು ಜನರಿಗೆ, ಪಶು-ಪಕ್ಷಿಗಳಿಗೆ, ಜೀವ-ಜಂತುಗಳಿಗೆ ಜೀವನಾಡಿಯೇ ಆಗಿತ್ತು.

ಸಿಂಗಾಪುರದ ಮೊದಲ ಉಲ್ಲೇಖವು **ಸಾ.ಶ. 1524 ನವಂಬರ್ 26** ಆಗಿದ್ದು, ಈ ದಿನವನ್ನು "**ಸಿಂಗಾಪುರ ದಿನ**" ಎಂದು ವರ್ಷಕ್ಕೊಮ್ಮೆ ಆಚರಿಸುವುದರ ಮೂಲಕ ತಮ್ಮ ಊರಿನ ಗತ ವೈಭವವನ್ನು ನೆನಪು ಮಾಡಿಕೊಳ್ಳಬೇಕಾಗಿದೆ.



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಶಾಸನಗಳ ಡಿಜಿಟಲ್ ಚಿತ್ರಗಳು

ಸಿಂಗಾಪುರವು ಐತಿಹಾಸಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಮಹತ್ವ ಪಡೆದಿರುವ ಪ್ರದೇಶವಾಗಿದೆ ಎಂಬುದಕ್ಕೆ ಇಲ್ಲಿ ಸಿಕ್ಕಿರುವ ಸುಮಾರು 500 ವರ್ಷಗಳಷ್ಟು ಹಳೆಯದಾದ ಶಾಸನಗಳು ಮತ್ತು ದೇವಾಲಯ ಸಾಕ್ಷಿಯಾಗಿವೆ. ಅಲ್ಲದೆ, ಸುಮಾರು ಮೂರು ಸಾವಿರ ವರ್ಷಗಳಷ್ಟು ಪುರಾತನವಾದ ಜನವಸತಿ ಪ್ರದೇಶವಾಗಿತ್ತು ಎಂಬುದು ಸುತ್ತಮುತ್ತಲ ಪ್ರದೇಶದಲ್ಲಿ ಸಿಕ್ಕಿರುವ ಶಿಲಾಯುಗದ ನೆಲೆಗಳು, ಆಯುಧಗಳು ಮತ್ತು ರೋಮನ್ ನಾಣ್ಯಗಳಿಂದ ತಿಳಿದು ಬರುತ್ತದೆ. ಶಾಸನಗಳ ಆಧಾರದಿಂದ ಈ ಪ್ರದೇಶವು ಶ್ರೀವೈಷ್ಣವರ ಮುಖ್ಯ ಕೇಂದ್ರಗಳಲ್ಲಿ ಒಂದಾಗಿದ್ದು, ಇಲ್ಲಿ ವಿಶೇಷವಾಗಿ ರಾಮಾನುಜ ಕೂಟವನ್ನು ಸ್ಥಾಪಿಸಿ, ಸಾಮಾಜಿಕ ಕಾರ್ಯಗಳನ್ನು ನಡೆಸುವುದರ ಮೂಲಕ ಇದೊಂದು ಪವಿತ್ರ ಧಾರ್ಮಿಕ ಕ್ಷೇತ್ರವಾಗಿ ಬೆಳೆದಿತ್ತು. ಇಷ್ಟು ಮಾತ್ರವಲ್ಲದೆ ಇಲ್ಲಿನ ವರದರಾಜಸ್ವಾಮಿ ದೇವಾಲಯವಿರುವ ಬೆಟ್ಟಕ್ಕೆ 1524 ರಲ್ಲಿಯೇ ತಿರುಮಲೆ ಎಂದು ಕರೆದಿರುವುದು ಇನ್ನೂ ವಿಶೇಷ.

ಈ ಲೇಖನದಲ್ಲಿ ಮುಖ್ಯವಾಗಿ ಶಾಸನಗಳು ಮತ್ತು ಅದರ ಪರಿಚಯ, ದೇವಾಲಯದ ವಾಸ್ತುಶಿಲ್ಪಗಳಲ್ಲದೆ, ಸಿಂಗಾಪುರವನ್ನು ನಿರ್ಮಿಸಿರಬಹುದಾದ ಸಿಂಗಪ್ಪನಾಯಕನ ಬಗ್ಗೆ ಮತ್ತು ಸುತ್ತಮುತ್ತಲ ಗ್ರಾಮಗಳೊಂದಿಗೆ ಸಿಂಗಾಪುರ ಹೊಂದಿರುವ ಸಂಬಂಧವನ್ನು ಕುರಿತು ಚರ್ಚಿಸಲಾಗಿದೆ.

ಆಧುನಿಕ ಸಿಂಗಾಪುರದ ಕಿರು ಪರಿಚಯ


ಸಿಂಗಾಪುರ ಎಂದಾಕ್ಷಣ ನೆನಪಿಗೆ ಬರುವುದು ವಿದೇಶದ ಸಿಂಗಾಪುರ. ಆದರೆ ಈ ನಮ್ಮ ಬೆಂಗಳೂರಿನಲ್ಲಿರುವ ಸಿಂಗಾಪುರವು ಮೆಜೆಸ್ಟಿಕ್ ಬಸ್ ನಿಲ್ದಾಣದಿಂದ ಸುಮಾರು 17 ಕಿ.ಮೀ. ಹಾಗೂ ಯಲಹಂಕ ಉಪನಗರದಿಂದ ಸುಮಾರು 3 ಕಿ.ಮೀ ದೂರದಲ್ಲಿದ್ದು, ಇದು 13°04'42.7"N 77°32'13.9"E ಅಕ್ಷಾಂಶ-ರೇಖಾಂಶವನ್ನು ಹೊಂದಿದೆ. ಹಾಗೂ ಬೆಂಗಳೂರಿನಲ್ಲಿರುವ ಐತಿಹಾಸಿಕ ಬಡಾವಣೆಗಳಲ್ಲಿ ಇದು ಸಹ ಒಂದಾಗಿದೆ.

ಭೌಗೋಳಿಕ ವ್ಯಾಪ್ತಿ

ಬೆಂಗಳೂರು ಉತ್ತರ ಲೋಕಸಭಾ ಮತ್ತು ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಸೇರಿರುವ ಸಿಂಗಾಪುರ ಪ್ರಸ್ತುತ ಬಿ.ಬಿ.ಎಂ.ಪಿ.ಯ ಕುವೆಂಪುನಗರ ವಾರ್ಡ್ ಸಂಖ್ಯೆ 11 ರ ವ್ಯಾಪ್ತಿಗೆ ಒಳಪಟ್ಟಿದೆ. ಇದಕ್ಕೂ ಮೊದಲು ಬ್ಯಾಟರಾಯನಪುರ ನಗರ ಸಭೆ (1996-2006) ಮತ್ತು ದೊಡ್ಡಬೆಟ್ಟಹಳ್ಳಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ (1996 ಕ್ಕೆ ಮೊದಲು) ಸೇರಿತ್ತು.

ಸಿಂಗಾಪುರಕ್ಕೆ ಸಂಬಂಧಿಸಿದಂತೆ ಮೊಟ್ಟ ಮೊದಲ ಉಪಲಬ್ಧವಿರುವ **1915ರ ನಕ್ಷೆಯ ಪ್ರಕಾರ,** 2 ಕೆರೆ, 1

1915ರ ಸಿಂಗಾಪುರದ ಭೂ ಕಂದಾಯ ಇಲಾಖೆಯ ನಕ್ಷೆ



ಕುಂಟೆ, 8 ಬಾವಿಗಳು, 3 ಹಳ್ಳಗಳು, 5 ಗುಡ್ಡಗಳಿಂದ ಕೂಡಿದ ಈ ಗ್ರಾಮವು ರಾಮಚಂದ್ರಪುರ, ಜಾರಕ ಬಂಡೆ ಕಾವಲು, ಚಿಕ್ಕಬೆಟ್ಟಹಳ್ಳಿ, ಲಕ್ಷ್ಮಿಪುರ, ಅಬ್ಬಿಗೆರೆ ಗ್ರಾಮಗಳೊಂದಿಗೆ ಗಡಿಯನ್ನು ಹಂಚಿಕೊಂಡಿತ್ತು.[1] ಆಗ ಸಿಂಗಾಪುರವು ಒಂದು ಕಂದಾಯ ಗ್ರಾಮವಾಗಿ ಸುಮಾರು **7 ಕಿ.ಮೀ ಸುತ್ತಳತೆ ಹಾಗೂ 815 ಎಕರೆ (3.3 ಚ.ಕಿ.ಮೀ) ಭೂಪ್ರದೇಶ** ಹೊಂದಿತ್ತು.

1915ರ ಸಿಂಗಾಪುರ ಗ್ರಾಮದ 815 ಎಕರೆ (3.3 ಚ.ಕಿ.ಮೀ) ಪ್ರದೇಶದಲ್ಲಿ ಇಂದು ವರದರಾಜನಗರ, ವಿನಾಯಕ ನಗರ, ಕುವೆಂಪುನಗರ 1 ಮತ್ತು 2ನೇ ಹಂತ, ಲಕ್ಕಪ್ಪ ಬಡಾವಣೆ, ಕಾನ್ಶಿರಾಮ್ ನಗರ, ಜಾಲಹಳ್ಳಿ, ಭಾರತೀಯ ವಾಯುಸೇನಾ ಕೇಂದ್ರ, ಶ್ರೀನಿಕೇತ್ ಬಡಾವಣೆ, ಎನ್.ಮೂರ್ತಿ ಬಡಾವಣೆ, ಸಿಂಹಾದ್ರಿ ಬಡಾವಣೆ, ಸಿಂಗಾಪುರ ಲೇಔಟ್ ಇನ್ನೂ ಮುಂತಾದ ಹೊಸ ಹೊಸ ಬಡಾವಣೆಗಳು ಹುಟ್ಟಿಕೊಂಡಿವೆ.

1 Government of Karnataka. *Revenue Maps Online.* n.d. https://www.landrecords.karnataka.gov.in/service3/ward.aspx (accessed September 30, 2021).

ಜನಸಂಖ್ಯೆ

ಸಿಂಗಾಪುರದ ಮೊಟ್ಟಮೊದಲ ಜನಸಂಖ್ಯಾ ದಾಖಲೆಯಾದ **1871ರ ಜನಗಣತಿ ಪ್ರಕಾರ** ಗ್ರಾಮದಲ್ಲಿ 34 ಮನೆಗಳಿದ್ದು, 60 ಜನ ಗಂಡಸರು ಮತ್ತು 73 ಜನ ಹೆಂಗಸರು ವಾಸಿಸುತ್ತಿದ್ದರು.[2] **1871ರಲ್ಲಿ ಕೇವಲ 133 ಜನಸಂಖ್ಯೆ**ಯನ್ನು ಹೊಂದಿದ್ದ ಈ ಗ್ರಾಮವು ಪ್ರಸ್ತುತ 40,000ಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿದ ಬೃಹತ್ ಬಡಾವಣೆಯಾಗಿ ಬೆಳೆದಿದೆ.

ಸಂಸ್ಥೆಗಳು

1. ಸಿಂಗಾಪುರ ಬಡಾವಣೆಗೆ ಹೊಂದಿಕೊಂಡಂತೆ **ಭಾರತೀಯ ವಾಯುಸೇನಾ ತರಬೇತಿ ಕೇಂದ್ರ**ವಿದ್ದು, ಇದು 1600 ಎಕರೆ ಯಲ್ಲಿದೆ. ಅದರಲ್ಲಿ ಸುಮಾರು ಭೂಭಾಗ ಸಿಂಗಾಪುರ ಕಂದಾಯ ಗ್ರಾಮದ್ದಾಗಿದೆ. ಇದು ಭಾರತದಲ್ಲೇ ಅತಿದೊಡ್ಡ ತರಬೇತಿ ಕೇಂದ್ರಗಳಲ್ಲಿ ಒಂದಾಗಿದ್ದು, ಭಾರತೀಯ ವಾಯುಸೇನೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶೇಕಡ 60-70ರಷ್ಟು ಜನರು ಇಲ್ಲಿ ತರಬೇತಿ ಪಡೆದವರಾಗಿರುವುದು ಗಮನಾರ್ಹ.[3]

2 Lindsay, Major. A. W. C., Mysore Commission, *Supplement to Mysore General Census, Appendices A To H of 1871* (Bangalore, Mysore Government Press, 1875), P70 http://lsi.gov.in/library/handle/123456789/5996

3 Archana Nathan, "Where young lads turn into men", *The Hindu Bangalore Edition, 29 February, 2012.* https://www.thehindu.com/news/cities/bangalore/where-young-lads-turn-into-men/article2946149.ece



ಭಾರತೀಯ ವಾಯುಸೇನಾ ಕೇಂದ್ರ, ಜಾಲಹಳ್ಳಿ



ಎರಡನೇ ಮಹಾಯುದ್ಧದಲ್ಲಿ (1943) ಬಂಧಿಸಿದ ಇಟಲಿ ಸೈನಿಕರ ಬಿಡಾರ, ಜಾಲಹಳ್ಳಿ,
(ಚಿತ್ರಕೃಪೆ - ಇಂಟರ್ ನ್ಯಾಷನಲ್ ರೆಡ್ ಕ್ರಾಸ್ ಫೋಟೋ ಆರ್ಕೈವ್ಸ್)

ವಾಯುಸೇನಾ ತರಬೇತಿ ಕೇಂದ್ರವಾಗುವ ಮೊದಲು ಇದು 2ನೇ ಮಹಾಯುದ್ಧದ (1941-45) ಸಮಯದಲ್ಲಿ ಬ್ರಿಟೀಷರು ಉತ್ತರ ಆಫ್ರಿಕಾದಲ್ಲಿ ಸುಮಾರು 22,000 ಇಟಲಿಯ ಸೈನಿಕರನ್ನು ಬಂಧಿಸಿ,[4] ಅವರನ್ನು ಸಿಂಗಾಪುರ ಮತ್ತು ಜಾಲಹಳ್ಳಿ ಪ್ರದೇಶಗಳಲ್ಲಿ ತಂದು ಬಿಟ್ಟರು. ಈ ಬಂಧಿತ ಸೈನಿಕರಿಗೆ ಮೊದಲು ಬಿಡಾರಗಳನ್ನು ನಿರ್ಮಿಸಿ ನಂತರ ಹೆಂಚಿನ ಮನೆಗಳನ್ನು ನಿರ್ಮಿಸಿದ್ದರು ಹಾಗೂ ಇಲ್ಲಿ ಬಂಧಿತರಿಗಾಗಿಯೇ ಚರ್ಚ್, ಪ್ರತ್ಯೇಕ ಚಲಾವಣಾ ನಾಣ್ಯ ವ್ಯವಸ್ಥೆ ಹಾಗೂ ಸ್ಮಶಾನಗಳಿದ್ದವು. ನಂತರ ಬ್ರಿಟೀಷರು ಇಲ್ಲಿ ಸುಮಾರು 9000 ಹಾಸಿಗೆಯ ಸಾಮರ್ಥ್ಯವುಳ್ಳ ದೊಡ್ಡ ಆಸ್ಪತ್ರೆಯನ್ನು (ಬ್ರಿಟೀಷ್ ಹಾಸ್ಪಿಟಲ್ ಟೌನ್) ಸ್ಥಾಪಿಸಿದರು.[5] ಆಗ ಇದು ವಿಶ್ವದಲ್ಲೇ ಅತೀ ದೊಡ್ಡ ಆಸ್ಪತ್ರೆಯೆಂದೇ ಖ್ಯಾತಿ ಪಡೆದಿತ್ತು. ನಂತರ ಇದನ್ನು ಬ್ರಿಟೀಷರು Royal Air Force (RAF) ತರಬೇತಿ ಕೇಂದ್ರವಾಗಿ ಮಾಡಿಕೊಂಡರು. ಸ್ವಾತಂತ್ರ್ಯ ನಂತರ ಭಾರತ ಸರ್ಕಾರವು ಈ ಪ್ರದೇಶವನ್ನು ಭಾರತೀಯ ವಾಯುಸೇನಾ ತರಬೇತಿ ಕೇಂದ್ರವನ್ನಾಗಿ ಪರಿವರ್ತಿಸಿತು.

2. ಸಿಂಗಾಪುರ ಸಮೀಪದ ಗುಡ್ಡದ ಮೇಲಿನ ಸುಮಾರು 20 ಎಕರೆಯು **ಬಿ.ಡಬ್ಲ್ಯೂ.ಎಸ್.ಎಸ್.ಬಿ** ಇಲಾಖೆಗೆ ಸೇರಿದ್ದು, ಇಲ್ಲಿನ ಒಂದು ಎಕರೆ ಜಾಗದಲ್ಲಿ ನೆಲಮಟ್ಟದ ಜಲಾಶಯವನ್ನು (Ground Level Reservoir) ನಿರ್ಮಿಸುತ್ತಿದ್ದಾರೆ. ಇದು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಮೂರನೇ ಹಂತದ ಕಾಮಗಾರಿಯಾಗಿದ್ದು, ಈ ಮೂಲಕ 110 ಹಳ್ಳಿಗಳಿಗೆ ನೀರನ್ನು ಒದಗಿಸುವ ಯೋಜನೆಯಾಗಿದೆ. ಇದು ಬೃಹತ್ ಬೆಂಗಳೂರಿನ ನೀರಿನ ಪೂರೈಕೆಯ ಅತಿ ಮುಖ್ಯವಾದ ಯೋಜನೆಗಳಲ್ಲಿ ಒಂದು.[6]

4 Moore B and Fedorowich K, *The British Empire and its Italian Prisoners of War, 1940–1947* (Studies in Military and Strategic History), Palgrave Macmillan, repr., January 2002

5 Raina, B. L., *Official History Of The Indian Armed Forces In The Second World War - 1939-45* (Administration), Combined Inter Services Historical Section India & Pakistan, 1953, 353https://archive.org/details/in.ernet.dli.2015.119524/page/n353/mode/2up?q=hospital+town

6 *Japan International Cooperation Agency (JICA) and NJS Consultants Co., LTD.(NJS), Bengaluru Water Supply and Sewerage Project (Phase 3) In The State of Karnataka, India. Final Report, November 2017.* https://openjicareport.jica.go.jp/pdf/12300356_01.pdf







1. ಎರಡನೇ ಮಹಾಯುದ್ಧದಲ್ಲಿ (1943) ಬಂಧಿಸಿದ ಇಟಲಿ ಸೈನಿಕರಿಗಿದ್ದ ಹೆಂಚಿನ ಮನೆ
2. ಸೈನಿಕರ ಬಿಡಾರಗಳು 3. ಕಾರಾಗೃಹದಲ್ಲಿ ಅಂತ್ಯಸಂಸ್ಕಾರ



ಇಟಲಿಯ ಬಂಧಿತ ಸೈನಿಕರು ಬಳಸುತ್ತಿದ್ದ ಕರೆನ್ಸಿ

ಸಂಸ್ಕೃತಿ

ಇಂದು ಆಧುನಿಕವಾಗಿ ಬೆಳೆದಿರುವ ಸಿಂಗಾಪುರ ಬಡಾವಣೆಯು ಪೂರ್ವಿಕರ ಆಚರಣೆ ಮತ್ತು ಸಂಪ್ರದಾಯಗಳನ್ನು, ಹಬ್ಬ-ಹರಿದಿನ, ಜಾತ್ರೆಯನ್ನು ಇಂದಿಗೂ ನಡೆಸಿಕೊಂಡು ಬರುತ್ತಿರುವುದನ್ನು ಕಾಣಬಹುದು. ಇಲ್ಲಿ ಮೂರು ವರ್ಷಗಳಿಗೊಮ್ಮೆ ಜಾತ್ರೆಯನ್ನು (ಊರ ಹಬ್ಬ) ಮಾಡುವ ಸಂಪ್ರದಾಯವಿದ್ದು, ಈ ಜಾತ್ರೆ ಸಮಯದಲ್ಲಿ ಪ್ರಮುಖವಾಗಿ ಚಪ್ಪಲಮ್ಮ, ನಡ್ಲಿಯಮ್ಮ, ಮುತ್ಯಾಲಮ್ಮ, ಸುಗ್ಗಲಮ್ಮ, ದೊಡ್ಡಮ್ಮ, ದನದ ಮಾರಿಯಮ್ಮ, ಮಾರಮ್ಮ, ಮುನೇಶ್ವರ, ಆಂಜನೇಯ, ಗರುಡಕಂಬದ ಆಂಜನೇಯ, ಪೂಜಮ್ಮ, ಅಣ್ಣಮ್ಮ ಮುಂತಾದ ದೇವರುಗಳಿಗೆ ಆರತಿಗಳನ್ನು ಮಾಡುತ್ತಾರೆ.

ಸಿಂಗಾಪುರದ ಚರಿತ್ರೆಗೆ ಐತಿಹಾಸಿಕ ಆಧಾರಗಳು

ಸಿಂಗಾಪುರದ ಸ್ಥಳೀಯ ಇತಿಹಾಸ ರಚನೆಗೆ ಈ ಕೆಳಗಿನ ಆಧಾರಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

1. ಮೂರು ಶಾಸನಗಳು
   i. ಸಿಂಗಾಪುರದಲ್ಲಿ ಇತ್ತೀಚೆಗೆ ಹೊಸ ಶೋಧವಾದ ಸಾಮಾನ್ಯ ಶಕ (ಸಾ.ಶ.) **1528ರ ನಲಪನಾಯ್ಕನ ಶಾಸನ**
   ii. ಹಾರೋಹಳ್ಳಿಯ ಸಾ.ಶ. **1530ರ ಕ್ರಿಷ್ಣಪ್ಪ ನಾಯಕನ ರಾಮಾನುಜಕೂಟದ ಶಾಸನ**
   iii. ಚಿಕ್ಕಬೆಟ್ಟಹಳ್ಳಿಯ ಸಾ.ಶ. **1524ರ ಸಿಂಗಪ್ಪ ನಾಯಕನ ರಾಮಾನುಜಕೂಟದ ಶಾಸನ**
2. ಸಿಂಗಾಪುರದಲ್ಲಿರುವ ಸುಮಾರು **500 ವರ್ಷ ಹಳೆಯದಾದ ವರದರಾಜಸ್ವಾಮಿ ದೇವಾಲಯ**
3. ಶಿಲಾಯುಗದ ನೆಲೆಗಳು - **ಜಾಲಹಳ್ಳಿಯ ಸೂಕ್ಷ್ಮಶಿಲಾ ಯುಗದ ಆಯುಧ ತಯಾರಿಕಾ ಕಾರ್ಖಾನೆ**
4. ಯಶವಂತಪುರದಲ್ಲಿ ದೊರಕಿದ **ರೋಮನ್ ನಾಣ್ಯಗಳು**



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಹಾರೋಹಳ್ಳಿಯ ಕ್ರಿಷ್ಣಪ್ಪನಾಯಕನ ರಾಮಾನುಜ ಕೂಟದ ಶಾಸನ



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಸಿಂಗಾಪುರದಲ್ಲಿ ಇತ್ತೀಚೆಗೆ ಶೋಧವಾದ ನಲಪನಾಯ್ಕನ ಶಾಸನ



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಚಿಕ್ಕಬೆಟ್ಟಹಳ್ಳಿಯ ಸಿಂಗಪ್ಪ ನಾಯಕನ ರಾಮಾನುಜ ಕೂಟದ ಶಾಸನ



ಸಿಂಗಾಪುರದ ವರದರಾಜ ದೇವಾಲಯದ
ಆವರಣದಲ್ಲಿರುವ ಅಪ್ರಕಟಿತ ಶಾಸನ

ಸಿಂಗಾಪುರದ ನಲಪನಾಯ್ಕನ ಶಾಸನ

ಸಿಂಗಾಪುರದ ಸಮೀಪದ ಚಿಕ್ಕಬೆಟ್ಟಹಳ್ಳಿ, ಹಾರೋಹಳ್ಳಿಯಲ್ಲಿ ದೊರೆತ ಶಾಸನಗಳಲ್ಲಿ ತಿರುವೆಂಗಳನಾಥ ದೇವರಿಗೆ ದಾನ ನೀಡಿರುವುದರ ಜೊತೆಗೆ ಸಿಂಗಾಪುರದ ಹೆಸರಿನ ಉಲ್ಲೇಖವನ್ನು ಮಾಡಲಾಗಿದೆ. ಆದರೆ ಸಿಂಗಾಪುರದಲ್ಲಿ 2017 ವರೆಗೆ ಯಾವುದೇ ಶಾಸನಗಳು ದೊರೆತಿರಲಿಲ್ಲ. ಇತ್ತೀಚಿನ ಹಲವು ಶೋಧಕಾರ್ಯ ಹಾಗೂ ಬಡಾವಣೆಯ ನಿವಾಸಿಗಳ ಸಹಕಾರದಿಂದ ಹೊಸ ಶಾಸನವಿರುವುದನ್ನು ಪತ್ತೆ ಹಚ್ಚಲಾಗಿದೆ. ಈ ಶಾಸನವು ಇದುವರೆಗೂ ಎಲ್ಲಿಯೂ ಪ್ರಕಟವಾಗಿರುವುದಿಲ್ಲ. ಆದ್ದರಿಂದ ಈ ಲೇಖನದ ಮೂಲಕ ಈ ಶಾಸನವನ್ನು ಪ್ರಕಟಿಸಲಾಗುತ್ತಿದ್ದು, ಇದು ಸಿಂಗಾಪುರದ ಇತಿಹಾಸಕ್ಕೆ ಹೊಸ ವೈಭವವನ್ನು ತಂದುಕೊಟ್ಟಿದೆ.

ಶಾಸನದ ಶೋಧ

ಸಿಂಗಾಪುರದ ಮೋಹನ್ ನಾಯಕ್ ಅವರು 2017ರ ಆಸುಪಾಸಿನಲ್ಲಿ Facebookನಲ್ಲಿ ಚಿಕ್ಕಬೆಟ್ಟಹಳ್ಳಿಯ ಶಾಸನದ ವಿವರಣೆ ನೀಡುತ್ತಿರುವ ವಿಡಿಯೋವೊಂದನ್ನು ನೋಡಿ, ಅದರಲ್ಲಿ ಸಿಂಗಾಪುರದ ವಿಷಯವಿರುವುದನ್ನು ಗಮನಿಸಿ ಕುತೂಹಲಗೊಂಡು ವಿಡಿಯೋದಲ್ಲಿ ಮಾಹಿತಿ ನೀಡುತ್ತಿದ್ದ ಪಿ. ಎಲ್. ಉದಯ ಕುಮಾರ್ ಅವರನ್ನು ಸಂಪರ್ಕಿಸಲು ಚಿಕ್ಕಬೆಟ್ಟಹಳ್ಳಿಗೆ ಬಂದು, ಉದಯ ಕುಮಾರ್ ಅವರ ವಿವರ ಪಡೆದು ಕರೆ ಮಾಡಿ ತಮ್ಮ ಬಡಾವಣೆಯಲ್ಲಿ ಶಾಸನವಿರುವುದನ್ನು ತಿಳಿಸಿದರು.

ಇದಾದ ಮೇಲೆ ಮೋಹನ್ ನಾಯಕ್ ಅವರು ಪ್ರತಿನಿತ್ಯವೂ ಪಿ.ಎಲ್. ಉದಯ ಕುಮಾರ್ ರವರಿಗೆ ಕರೆ ಮಾಡಿ ತಮ್ಮ ಊರಿನ ಶಾಸನ ಪಾಠವನ್ನು ಓದಲು ಕರೆಯುತ್ತಿದ್ದರು. 31-ಡಿಸೆಂಬರ್-2017 ರಂದು ಇಬ್ಬರೂ ಸೇರಿ ಶಾಸನವಿದ್ದ ತೋಟದ ಒಳಗೆ ಹೋಗಿ ಶಾಸನವನ್ನು ನೋಡುತ್ತಿರುವಾಗ ತೋಟದ ಸೆಕ್ಯುರಿಟಿ ಗಾರ್ಡ್ ಬಂದು ಇಬ್ಬರಿಗೂ ಆವಾಜ್ ಹಾಕಿ ಹೊರ ಹೋಗಲು ಹೇಳಿ ತಮ್ಮ ಮಾಲೀಕನ ಮಗನಾದ ಆದಿತ್ಯ ಹನುಮರೆಡ್ಡಿ ಅವರಿಗೆ ಕರೆ ಮಾಡಿ ಉದಯ ಕುಮಾರ್ ರವರಿಗೆ ಫೋನ್ ಕೊಟ್ಟರು. ಉದಯ ಕುಮಾರ್ ಅವರು ಆದಿತ್ಯರವರೊಂದಿಗೆ ಮಾತನಾಡುತ್ತಾ ಶಾಸನವನ್ನು ನೋಡಿ ಹೋಗುತ್ತೇವೆ ಅಷ್ಟೇ ಎಂದು ತಿಳಿಸಿದರು. ಆಗ ಆದಿತ್ಯರವರು ಈ ದಿನ ಬೇಡ, ಇನ್ನೊಂದು ದಿನ ನಾನೂ ಕೂಡ ಅಲ್ಲೇ ಇರುತ್ತೇನೆ. ಆ ಸಮಯದಲ್ಲಿ ನೀವು ಬನ್ನಿ ಎಂದು ತಿಳಿಸಿದರು. ಆಗ ಉದಯ್ ಕುಮಾರ್ ಹಾಗೂ ಮೋಹನ್ ನಾಯಕ್ ಒಪ್ಪಿ ಹೊರಬಂದರು.

ಇದಾದ ನಂತರ 13-ಜನವರಿ-2018 ರಂದು ತೋಟದ ಮಾಲೀಕರಾದ ಆದಿತ್ಯ ಹನುಮರೆಡ್ಡಿ ಅವರ ಅನುಮತಿ ಪಡೆದು ಶಾಸನದ ಸ್ಥಳಕ್ಕೆ ಬಂದು ಶಾಸನದ ಫೋಟೋಗಳನ್ನು ತೆಗೆದು ಶಾಸನ ತಜ್ಞರಾದ ಪ್ರೊ.ಕೆ.ಆರ್. ನರಸಿಂಹನ್ ಅವರಿಗೆ ಓದಲು ಕಳಿಸಿದರು.

ಈ ಶಾಸನಕಲ್ಲು ಇಲ್ಲಿಗೆ ಹೇಗೆ ಬಂತು? ಎಂದು ಮಾಲೀಕರಿಗೆ ಕೇಳಿದಾಗ ತೋಟದ ಎದುರಿಗೆ ಕೆರೆ ಏರಿ ಮೇಲಿದ್ದ ಶಾಸನವನ್ನು ರಸ್ತೆ ಮಾಡುವಾಗ (ಸುಮಾರು 70ರ ದಶಕದಲ್ಲಿ) ಪಕ್ಕಕ್ಕೆ ತಳ್ಳಿದ್ದರು. ಈ ಶಾಸನಕಲ್ಲು ಅನಾಥವಾಗಿ ಬಿದ್ದಿರುವುದನ್ನು ಗಮನಿಸಿ, ಮರುಗಿ ಪರಂಪರೆ ನಾಶವಾಗುವುದನ್ನು ತಡೆಯಲು ಆದಿತ್ಯ ಹನುಮರೆಡ್ಡಿ ಅವರ ತಾತನವರಾದ ಎಸ್.ಸಿ.ವೆಂಕಟೇಶ್ ಅವರು ತಮ್ಮ ತೋಟದಲ್ಲಿ ತಂದಿಟ್ಟರು. ತಂದಿಟ್ಟಿದ್ದ ಶಾಸನಕ್ಕೆ ಆದಿತ್ಯ ಹನುಮರೆಡ್ಡಿರವರ ಅಜ್ಜಿಯಾದ ಶ್ರೀಮತಿ ಲಕ್ಷ್ಮಿವೆಂಕಟೇಶ್



ಶಾಸನವನ್ನು ಸಾಗಿಸುವುದಕ್ಕೆ ಸಿದ್ಧತೆ ಮಾಡುತ್ತಿರುವ ಸಿಂಗಾಪುರದ ಗ್ರಾಮಸ್ಥರು

ಅವರು ಹಬ್ಬ-ಹರಿದಿನಗಳಲ್ಲಿ ಪೂಜೆ ಮಾಡುತ್ತಿದ್ದರೆಂದು ಹೇಳಿದರು. ನಂತರ 2020ರಲ್ಲಿ ಈ ಶಾಸನವನ್ನು ವರದರಾಜ ಸ್ವಾಮಿ ದೇವಾಲಯದ ಆವರಣದಲ್ಲಿಡುವುದೇ ಸೂಕ್ತವೆಂದು ತಿಳಿಸಿದಾಗ ಆದಿತ್ಯ ಹನುಮರೆಡ್ಡಿ ಮತ್ತು ಅವರ ತಮ್ಮ ಅಭಿಷೇಕ್ ಹನುಮರೆಡ್ಡಿ ಶಾಸನ ಸ್ಥಳಾಂತರಕ್ಕೆ ಒಪ್ಪಿದರು.

ಶಾಸನದ ಕಾಲ

ಶಾಸನವು ಇಂದಿನ ಇಂಗ್ಲೀಷ್ ಕಾಲಮಾನದ (ಜೂಲಿಯನ್) ಪ್ರಕಾರ **1528-ಜೂನ್-17ರ ಕಾಲದ್ದಾಗಿದೆ. (ಶಾಸನದಲ್ಲಿರುವ ಭಾರತೀಯ ಕಾಲಮಾನ ಸರ್ವಧಾರಿ ಸಂವತ್ಸರದ ಆಷಾಡ ಶುದ್ಧ ೧)**

ಶಾಸನದ ಸಂರಕ್ಷಣೆ

ಭೌತಿಕ ಸಂರಕ್ಷಣೆ

2018 ರಲ್ಲಿ ನೋಡಿದ್ದ ಶಾಸನವನ್ನು ಸಾಗಿಸಲು ತೋಟದ ಮಾಲೀಕರ ಮನವೊಲಿಸುವುದಕ್ಕೆ ಎರಡು ವರ್ಷಗಳ ಕಾಲ ಸಮಯ ಬೇಕಾಯಿತು. 13-ಸೆಪ್ಟೆಂಬರ್-2020ರ ಭಾನುವಾರದಂದು ಗ್ರಾಮಸ್ಥರಾದ ಮೋಹನ್ ನಾಯಕ್, ಎಸ್.ಎಂ.ನಾಗರಾಜು, ಎಸ್.ವಿ.ಶ್ರೀನಿವಾಸ್, ಟಿ.ಅಜಯ ಕುಮಾರ್, ಎಸ್.ಜಿ.ಶೇಖರ್, ಎಸ್.ಸಿ.ಮಂಜುನಾಥ್, ಎಸ್.ಕೆ.ವೆಂಕಟೇಶ್, ಎಸ್.ಎಂ.ಶ್ರೀನಿವಾಸ್ ಅವರು ಶಾಸನವನ್ನು ಸಿಂಗಾಪುರದಲ್ಲಿನ ವರದರಾಜ ದೇವಾಲಯದ ಆವರಣಕ್ಕೆ ಸ್ಥಳಾಂತರಿಸಿದರು.[7] ಹೀಗೆ ಸಾಗಿಸಿರುವ ಶಾಸನವನ್ನು ತಾತ್ಕಾಲಿಕವಾಗಿ ಜೂನ್ 2021 ರಂದು ಗ್ರಾಮಸ್ಥರ ಸಹಕಾರದಿಂದ ದೇವಾಲಯದ ಆವರಣದಲ್ಲಿ ಪೂರ್ವಾಭಿಮುಖವಾಗಿ ನಿಲ್ಲಿಸಲಾಗಿದ್ದು (GPS - 13°04'42.7"N 77°32'13.9"E), ಈ ಶಾಸನ ಕಲ್ಲನ್ನು ದೇವಾಲಯದ ಆವರಣದಲ್ಲಿ ಜಗತಿಯ ಮೇಲೆ ಕೂರಿಸಿ, ಪಕ್ಕದಲ್ಲಿ ಶಾಸನದ ಪೂರ್ಣ ಮಾಹಿತಿಯುಳ್ಳ ಫಲಕವನ್ನು ಹಾಕುವ ಯೋಜನೆಯಿದೆ.

ಡಿಜಿಟಲ್ ಸಂರಕ್ಷಣೆ

ಶಾಸನಗಳನ್ನು ಭೌತಿಕವಾಗಿ ಸಂರಕ್ಷಣೆ ಮಾಡಿದರೂ ಹವಾಮಾನದ ವೈಪರಿತ್ಯದಿಂದಾಗಿ ಲಿಪಿಗಳು ಸವೆದು ಹೋಗುವ ಸಾಧ್ಯತೆ ಹೆಚ್ಚಿರುತ್ತದೆ. ಶಾಶ್ವತವಾಗಿ ಇವುಗಳನ್ನು ಸಂರಕ್ಷಿಸಲು ಅತ್ಯಾಧುನಿಕ ತಂತ್ರಜ್ಞಾನದ ಸಹಾಯದಿಂದ ಅವುಗಳನ್ನು

7 Inscription Stones of Bangalore, *So much pride in our heritage !* Facebook, 13 September 2020. https://www.facebook.com/groups/inscriptionstones/posts/2708137562760795/

ಸಿಂಗಾಪುರದ ಶಾಸನವನ್ನು ಲಕ್ಷ್ಮಿಕಾಂತ ಶರ್ಮ ಅವರು 3ಡಿ ಸ್ಕ್ಯಾನ್ ಮಾಡುತ್ತಿರುವುದು




ಸ್ಕ್ಯಾನ್ ಮಾಡಿ ಸಂರಕ್ಷಿಸುವ ಅಗತ್ಯವಿದೆ. ಇದರಿಂದ ಇವು ಶಾಶ್ವತವಾಗಿ ಉಳಿಯುತ್ತವೆ. 3ಡಿ ಸ್ಕ್ಯಾನ್ ಮಾಡಿದ ದಿನ ಶಾಸನಕಲ್ಲು ಇದ್ದ ರೀತಿಯಲ್ಲಿಯೇ ಅದನ್ನು ಡಿಜಿಟಲ್ ಮಾದರಿಯಲ್ಲಿ ಸಂರಕ್ಷಿಸುವುದರಿಂದ ಅದು ಸಾವಿರಾರು ವರ್ಷಗಳು ಕಳೆದರೂ ಹಾಗೆಯೇ ಉಳಿಯುತ್ತದೆ. ಅವಶ್ಯವಿದ್ದಲ್ಲಿ ಅದರ ಪ್ರತಿಗಳನ್ನು ಯಥಾವತ್ತಾಗಿ ಮರ, ಕಲ್ಲು ಹಾಗೂ ಲೋಹಗಳ ಮೇಲೆ ಅಚ್ಚು ಹಾಕಿಸಿಕೊಳ್ಳಬಹುದು. **ಇನ್ಸ್ಕ್ರಿಪ್ಷನ್ ಸ್ಟೋನ್ಸ್ ಆಫ್ ಬೆಂಗಳೂರು** ಶಾಸನಗಳ 3ಡಿ ಡಿಜಿಟಲ್ ಸಂರಕ್ಷಣಾ ತಂಡವು ದಿನಾಂಕ 21-ಸೆಪ್ಟೆಂಬರ್-2020 ರಂದು ಸಿಂಗಾಪುರದಲ್ಲಿರುವ ಶಾಸನವನ್ನು 0.05 ಮಿಲಿ ಮೀಟರ್ ಹೈ-ರೆಸಲೂಷನ್ ಅಕ್ಯೂರೆಸಿಯಲ್ಲಿ ಡಿಜಿಟಲ್ ಸಂರಕ್ಷಣೆ ಮಾಡಿದೆ. ನಂತರ ಕಛೇರಿಯಲ್ಲಿ ಆರ್ಟೆಕ್ ಸ್ಟೂಡಿಯೋ ತಂತ್ರಾಂಶದ ಸಹಾಯದಿಂದ ಅದರ 3ಡಿ ಮಾಡೆಲ ಅನ್ನು ತಯಾರಿಸಲಾಯಿತು. ಈ ಡಿಜಿಟಲ್ ಮಾಡಲ್ 1 ಕೋಟಿ 87 ಲಕ್ಷ ಪಾಲಿಗನ್ಸ್‌ಗಳನ್ನು ಹೊಂದಿದೆ. ಈ ಮಾಡೆಲ್ ಅನ್ನು ಮೆಷ್ ಲ್ಯಾಬ್ ತಂತ್ರಾಂಶದ ಸಹಾಯದಿಂದ ನಮ್ಮ ತಂಡವು ಓದಿದ್ದು, ನಂತರ ಆ ಪಾಠವನ್ನು ಶಾಸನ ತಜ್ಞರಾದ ಪ್ರೊ.ಕೆ.ಆರ್. ನರಸಿಂಹನ್ ರವರು ಮರು ಓದುವ ಮೂಲಕ ಪರಿಷ್ಕರಿಸಿರುತ್ತಾರೆ.

ಕಲ್ಲಿನ ಲಕ್ಷಣ

ಈ ಶಾಸನವನ್ನು ಸಿಂಗಾಪುರದ ಸುತ್ತಮುತ್ತಲ ಪ್ರದೇಶದಲ್ಲಿ ದೊರೆಯುವ ಗ್ರಾನೈಟ್ ಕಲ್ಲನ್ನು ಬಳಸಿ ಕೆತ್ತಲಾಗಿದೆ. 157 ಸೆಂ.ಮೀ. ಎತ್ತರ ಮತ್ತು 38ಸೆಂ.ಮೀ. ಅಗಲವಿರುವ ಈ ಕಲ್ಲು ಒರಟಾಗಿದ್ದರೂ, ಶಿಲ್ಪಿಯು ಕಲ್ಲಿನ ಮುಂಭಾಗವನ್ನು ನಯಗೊಳಿಸಿ ಮೇಲ್ಭಾಗದಲ್ಲಿ ಸೂರ್ಯ-ಚಂದ್ರರ ರೇಖಾಚಿತ್ರ ಅದರ ಕೆಳಗೆ ಅಕ್ಷರಗಳನ್ನು ಕೆತ್ತಿದ್ದಾನೆ. ಕಲ್ಲಿನ ಹಿಂಭಾಗವನ್ನು ಯಾವುದೇ ರೀತಿಯಲ್ಲಿ ನಯಗೊಳಿಸದೆ ಹಾಗೆಯೇ ಬಿಟ್ಟಿರುವುದನ್ನು ಕಾಣಬಹುದು. ದೂರದಿಂದ ನೋಡಿದರೆ ಈ ಶಾಸನ ಒಂದು ರೀತಿಯಲ್ಲಿ ಕಲ್ಲು ಕಂಭದ ತರವೇ ಕಾಣುತ್ತದೆ.

ಶಾಸನದ ಪಾಠ

ಕ್ರ.ಸಂ.	ಸಿಂಗಾಪುರದಲ್ಲಿ ಇತ್ತೀಚೆಗೆ ಹೊಸ ಶೋಧವಾದ 1528ರ ಶಾಸನ
1[8]	. ಮ . (ಘ) ಸಿ .
2	ಸರ್ವದಾರಿ ಶಂವತ್ಸ[ರ]
3	ದ ಆಷಡ ಶು ೧
4	ಲು ನಲಪನಾಯ್ಕ
5	ಸಿಂಗಾಪುರದ ಭೆ
6	ಟೆಯರಾಯಗೆ ಸಿ೦
7	ಗಪ್ಪನಾಯ್ಕರಿಗೆ
8	ದರ್ಮವಾಗ ಭೆಕೆಂ
9	ದು ಪಾತ್ರಬೊಗಕೆ
10	ತಿಪಯಗೆ ಕೊ . .
11	ವ ಗದೆ(ದ್ದೆ)ಗೆ . . ಅ(ಆ)
12	ವನಾದರು . . .
	. . . . (ಮುಂದಿನ ಸಾಲುಗಳಲ್ಲಿ ತುಂಬಾ ಸಣ್ಣ ಅಕ್ಷರಗಳಲ್ಲಿ ಕೊರೆದಿದ್ದಾರೆ. ಇದು ಬಹುಪಾಲು ತ್ರುಟಿತವಾಗಿದೆ)



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಸಿಂಗಾಪುರದಲ್ಲಿ ಇತ್ತೀಚೆಗೆ ಶೋಧವಾದ ನಲಪನಾಯ್ಕನ ಶಾಸನ

8 ಕ್ರಮ ಸಂಖ್ಯೆಗಳು ಶಾಸನದಲ್ಲಿರುವುದಿಲ್ಲ, ಓದಲು ಅನುಕೂಲವಾಗಲೆಂದು 1 ರಿಂದ 13 ಹೀಗೆ ಸಾಲುಗಳಿಗೆ ಅಂಕಿ ಕೊಡಲಾಗಿದೆ. ಶಾಸನದಲ್ಲಿ ಪದಗಳ ಮಧ್ಯದಲ್ಲಿ ಯಾವುದೇ ಜಾಗ (ಸ್ಪೇಸ್) ಬಿಟ್ಟಿಲ್ಲ. ಓದುವ ಅನುಕೂಲಕ್ಕಾಗಿ ಪದಗಳಿಗೆ ತಕ್ಕಂತೆ ಇಲ್ಲಿ ಜಾಗ ಬಿಟ್ಟು ವಾಕ್ಯಗಳನ್ನು ಬರೆಯಲಾಗಿದೆ. ( ) - ಹಿಂದಿನ ಅಕ್ಷರದ ಊಹಾಪಾಠಕ್ಕೆ ಬಳಸಿರುವ ಚಿನ್ಹೆ. [ ] - ಊಹಾಪಾಠ ಸೂಚಿಸಲು ಬಳಸಿರುವ ಚಿನ್ಹೆ. ". . . ." - ಅಕ್ಷರಗಳು ತ್ರುಟಿತವಾದ ಕಡೆ ಬಳಸಿರುವ ಚಿನ್ಹೆ.

ಸಾಮಾನ್ಯವಾಗಿ ಶಾಸನ ಸಂಪಾದನೆ ಮಾಡುವಾಗ ಶಾಸನ ತಜ್ಞರು ಭಾಷಾ ದೃಷ್ಟಿಕೋನದಿಂದ ಶಾಸನ ಸಂಪಾದನೆ ಮಾಡುತ್ತಿದ್ದರು. ಇದು ಕೆಲವೊಮ್ಮೆ ಕಲ್ಲಿನ ಮೇಲಿನ ಅಕ್ಷರಗಳಿಗೆ ಹೋಲಿಕೆಯಾಗುವುದಿಲ್ಲ. ಆದರೆ ನಾವು ನೀಡಿರುವ ಶಾಸನ ಪಾಠವು ಕಲ್ಲಿನ ಮೇಲಿದ್ದ ಲಿಪಿಯ ಅನುವಾದವಾಗಿದ್ದು ಯಾವುದೇ ರೀತಿಯ ಭಾಷಾ ದೃಷ್ಟಿಕೋನದಿಂದ ನೀಡಿಲ್ಲ.

ಶಾಸನದ ಸಾರಾಂಶ

ಈ ಶಾಸನದಲ್ಲಿ ನಲಪನಾಯ್ಕ ಎಂಬುವವರು ಸಿಂಗಾಪುರದ ಬೇಟೆಯರಾಯ ಮತ್ತು ಸಿಂಗಪ್ಪನಾಯಕರಿಗೆ ಒಳಿತಾಗಲಿ ಎಂದು ತಿಪಯ ಎಂಬುವವನಿಗೆ ಪಾತ್ರಭೋಗಕ್ಕೆ ದಾನ ನೀಡಿರುವುದು ಶಾಸನದ ಪ್ರಮುಖ ವಿಷಯವಾಗಿದೆ. ಈ ಶಾಸನದ ಲಿಪಿ ಹೆಚ್ಚು ಸವೆದು ಹೋಗಿರುವ ಕಾರಣದಿಂದ ವಿವರಗಳು ಅಸ್ಪಷ್ಟವಾಗಿವೆ.

ಶಾಸನದ ಅನುವಾದ

ಸರ್ವದಾರಿ ಶಂವತ್ಸರದ ಆಷಡ ಶು ೧ ಲು	
	ಭಾರತೀಯ ಕಾಲಗಣನೆಯ ಪ್ರಕಾರ ಶಾಸನ ಹಾಕಿಸಿರುವ ವರ್ಷ ಹಾಗೂ ತೇದಿಯಾಗಿದೆ.
ಸರ್ವದಾರಿ ಶಂವತ್ಸರದ	ಶಾಸನ ಹಾಕಿಸಿರುವ ವರ್ಷ-ಸಂವತ್ಸರ
ಆಷಡ	ಶಾಸನ ಹಾಕಿಸಿರುವ ತಿಂಗಳು ಅಂದರೆ ಇಂದಿನ ಜುಲೈ-ಆಗಸ್ಟ್ ತಿಂಗಳು.
ಶು ೧	ಶು ಎಂದರೆ ಶುಕ್ಲ ಪಕ್ಷವನ್ನು ಸೂಚಿಸುತ್ತದೆ ಹಾಗೂ ೧ ಎಂದರೆ ಶುಕ್ಲ ಪಕ್ಷದ ಪ್ರಥಮ ತಿಥಿ.[9]
ನಲಪನಾಯ್ಕ	ದಾನ ನೀಡಿರುವ ವ್ಯಕ್ತಿ/ಅಧಿಕಾರಿ.
ಸಿಂಗಾಪುರ	ಈ ಲೇಖನದ ಕೇಂದ್ರಬಿಂದುವಾಗಿರುವ ಗ್ರಾಮವೇ ಇಂದಿನ ಸಿಂಗಾಪುರ ಬಡಾವಣೆ.
ಭೆಟೆಯರಾಯ	ನಲಪನಾಯ್ಕರು ಭೆಟೆಯರಾಯ ಮತ್ತು ಸಿಂಗಪ್ಪನಾಯಕರಿಗೆ ಧರ್ಮವಾಗಲಿ ಎಂದು ದಾನ ನೀಡಿರುವುದು.
ಸಿಂಗಪ್ಪನಾಯಕ	ಅಧಿಕಾರಿ.
ಧರ್ಮವಾಗ ಭೆಕೆಂದು	ಒಳಿತಾಗಲೆಂದು.
ಪಾತ್ರಬೊಗಕೆ	ದೇವರ ಮನರಂಜನೆಗಾಗಿ ದೇವರ ಮುಂದೆ ಮಾಡುವ ಸಾಂಸ್ಕೃತಿಕ ಕಾರ್ಯಕ್ರಮ. ದೇವಾಲಯದಲ್ಲಿ ನೃತ್ಯಸೇವೆ.[10]
ತಿಪಯಗೆ	ದಾನ ಪಡೆದ ವ್ಯಕ್ತಿ.
ಕೊ	. . . .ಕೊಟ್ಟಿರುವ (ಊಹೆ).
ಗದೆ	ನೀರಿನಾಶ್ರಿತ ಭೂಮಿ (ಭತ್ತ, ಕಬ್ಬು ಬೆಳೆಯುವ ಭೂಮಿ).
ಗೆ ಆವನಾದರು	ಯಾರಾದರೂ (ಭಯಸೂಚಕ/ಆಜ್ಞೆಯ ಪದ)

ಬಹುಶಃ ಮುಂದಿನ ಸಾಲುಗಳು ಶಾಪಾಶಯದ ಭಾಗವಾಗಿರಬಹುದು (ಶಾಸನವನ್ನು ಹಾಳು ಮಾಡಿದವರಿಗೆ ಆಗುವ ತೊಂದರೆಯನ್ನು ಸೂಚಿಸುವ ವಾಕ್ಯಗಳಿರುತ್ತವೆ).

ಭಾಷೆ ಮತ್ತು ಲಿಪಿ

ಈ ಶಾಸನವನ್ನು ಜನಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ಕನ್ನಡ ಲಿಪಿ ಹಾಗೂ ಗ್ರಾಮ್ಯ ಭಾಷೆಯಲ್ಲಿ ಬರೆಯಲಾಗಿದೆ. ಉದಾಹರಣೆ :- **ಶಂವತ್ಸರ (ಸಂವತ್ಸರ), ಆಷಡ (ಆಷಾಡ), ನಲಪನಾಯ್ಕ (ನಲ್ಲಪ್ಪನಾಯ್ಕ).**

ಶಾಸನದ ಮಹತ್ವ

i. ಮುಂದೆ ವಿವರಿಸಿರುವ ಚಿಕ್ಕಬೆಟ್ಟಹಳ್ಳಿ ಹಾಗೂ ಹಾರೋಹಳ್ಳಿ ಶಾಸನಗಳಲ್ಲಿ ತಿರುವೆಂಗಳನಾಥ, ತಿರುಮಲೆ ದೇವರು ಎಂದು ಕರೆದಿರುವುದರಿಂದ ತಿರುಮಲೆ-ತಿರುವೆಂಗಳನಾಥ ಎಂಬ ಹೆಸರುಗಳು ಒಂದೇ ದೇವರಿನ ವಿವಿಧ ಹೆಸರುಗಳಾಗಿವೆ. ಇಂದು ವರದರಾಜಸ್ವಾಮಿ ಎಂದು ಕರೆಯುವ ದೇವಾಲಯವೇ ಶಾಸನೋಕ್ತ ತಿರುವೆಂಗಳನಾಥ ದೇವಾಲಯವಾಗಿದೆ. ಇದರಿಂದ **ಸಿಂಗಾಪುರವು ಸುಮಾರು 500 ವರ್ಷಕ್ಕೂ ಪುರಾತನವಾದ ಗ್ರಾಮವೆಂದು ಹೇಳಬಹುದು.**

ii. ಈ ಶಾಸನದಲ್ಲಿ ಉಲ್ಲೇಖಿತವಾಗಿರುವ **ಸಿಂಗಪ್ಪನಾಯಕ** ಎಂಬ **ವ್ಯಕ್ತಿಯ ಹೆಸರಿನಿಂದ ಸಿಂಗಾಪುರ ಗ್ರಾಮ ರಚನೆಯಾಗಿದೆ** ಎಂದು **ಊಹಿಸಬಹುದು.**

iii. ಶಾಸನದಲ್ಲಿ ಗದೆ (ಗದ್ದೆ) ಎಂದು ಉಲ್ಲೇಖವಾಗಿರುವುದರಿಂದ ಇಲ್ಲಿನ **ಸಿಂಗಾಪುರ ಕೆರೆಯು ಸಹ ಸುಮಾರು 500 ವರ್ಷಗಳಷ್ಟು ಹಳೆಯದು ಎಂದು ಹೇಳಬಹುದು.**

9 ಒಂದು ಮಾಸದಲ್ಲಿ ಎರಡು ಪಕ್ಷಗಳಿದ್ದು ಅಂದರೆ ಶುಕ್ಲ/ಶುದ್ಧ ಪಕ್ಷ ಎಂದರೆ ಅಮಾವಾಸ್ಯೆಯಿಂದ ಹುಣ್ಣಿಮೆಯವರೆಗೆ, ಬಹುಳ/ಕೃಷ್ಣ ಪಕ್ಷ ಎಂದರೆ ಹುಣ್ಣಿಮೆಯಿಂದ ಅಮಾವಾಸ್ಯೆಯವರೆಗೆ.

10 ಶ್ರೀನಿವಾಸ ರಿತ್ತಿ, ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾ ಕೋಶ, ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು, 2000, ಪುಟ ಸಂಖ್ಯೆ-155.

ಹಾರೋಹಳ್ಳಿಯ ಕ್ರಿಷ್ಣಪ್ಪನಾಯಕನ ರಾಮಾನುಜಕೂಟದ ಶಾಸನ

ಹಾರೋಹಳ್ಳಿ ಗ್ರಾಮವು ಸಿಂಗಾಪುರದಿಂದ ಈಶಾನ್ಯಕ್ಕೆ ಸುಮಾರು 7ಕಿ.ಮೀ. ದೂರದಲ್ಲಿದೆ. ಈ ಗ್ರಾಮವು 13°07'50.7"N 77°34'48.6"E ಅಕ್ಷಾಂಶ-ರೇಖಾಂಶವನ್ನು ಹೊಂದಿದ್ದು, ಇಲ್ಲಿ ಸಿಂಗಾಪುರ ಗ್ರಾಮಕ್ಕೆ ಸಂಬಂಧಿಸಿದ ಶಾಸನವನ್ನು ಕಾಣಬಹುದು.

ಶಾಸನ ಶೋಧ

ಈ ಶಾಸನವು 1905ರಲ್ಲಿ ಬಿ.ಎಲ್.ರೈಸ್ ಅವರು ಸಂಪಾದಿಸಿರುವ ಎಪಿಗ್ರಾಫಿಯ ಕರ್ನಾಟಿಕ ಸಂಪುಟ-09, ಬೆಂಗಳೂರು ತಾಲ್ಲೂಕು ಶಾಸನ ಸಂಖ್ಯೆ - 28ರಲ್ಲಿ ದಾಖಲಾಗಿದೆ. ನೂರ ಹದಿನೈದು ವರ್ಷಗಳ ಹಿಂದೆ ದಾಖಲಾದ ಈ ಶಾಸನವನ್ನು ನೋಡಿದವರ ಸಂಖ್ಯೆ ಬೆರಳೆಣಿಕೆಯಷ್ಟಿದೆ. ಇತ್ತೀಚೆಗೆ ಪಿ.ಎಲ್.ಉದಯ ಕುಮಾರ್, ಪ್ರೊ.ಕೆ.ಆರ್. ನರಸಿಂಹನ್, ಕೆ.ಧನಪಾಲ್, ಆರ್.ಯುವರಾಜು ಹಾಗೂ ಸಿಂಗಾಪುರದ ಮೋಹನ್ ನಾಯಕ್ ಶಾಸನವಿರುವ ಸ್ಥಳಕ್ಕೆ ಭೇಟಿ ನೀಡಿ, ಶಾಸನದ ಬಗ್ಗೆ ಅರಿವಿರದ ಸ್ಥಳೀಯರಿಗೆ ಶಾಸನದ ಮಹತ್ವವನ್ನು ತಿಳಿಸಿ, ಶಾಸನ ಸಂರಕ್ಷಣೆ ಪ್ರಾಮುಖ್ಯತೆಯನ್ನು ತಿಳಿಸಿದ್ದಾರೆ.

ಶಾಸನ ಕಾಲ

ಶಾಸನವು, ಜೂಲಿಯನ್ ಕಾಲಮಾನದ ಪ್ರಕಾರ **ಸಾ.ಶ. 1530 ನವೆಂಬರ್ 02ರ ಕಾಲದ್ದಾಗಿದ್ದು, ಅಂದು ಬುಧವಾರವಾಗಿತ್ತು. (ಶಾಸನದಲ್ಲಿರುವ ಕಾಲಮಾನ, ಶಾಲಿವಾಹನ ಶಕ ೧೪೫೨ನೇ ವಿಕೃತಿ ಸಂವತ್ಸರದ ಕಾರ್ತಿಕ ಶುದ್ಧ ೧೨)**

ಈ **ಶಾಸನವನ್ನು ಹಾಕಿಸಿದ ದಿನ ಉತ್ಥಾನ ದ್ವಾದಶಿ, ತುಳಸಿ ಹಬ್ಬವಾಗಿತ್ತು.** ಈ ದಿನ ಶ್ರೀಮನ್ನಾರಯಣನು ನಿದ್ರಾವಸ್ಥೆಯಿಂದ ಹೊರ ಬಂದು ತನ್ನ ಭಕ್ತವೃಂದಕ್ಕೆ ದರ್ಶನ ನೀಡುವನು ಎಂಬುದು ಪ್ರತೀತಿ. ಕಾರ್ತಿಕ ಮಾಸ ಶುಕ್ಲಪಕ್ಷದಲ್ಲಿ ಆಚರಿಸುವ ಈ ಹಬ್ಬದಂದು **ರೇವತಿ ನಕ್ಷತ್ರವು ಸಹ ಇದಿದ್ದರಿಂದ** ದಾನ ನೀಡುವುದು **ಶ್ರೇಷ್ಠ ಹಾಗೂ ಪುಣ್ಯವು ಹೆಚ್ಚಾಗುತ್ತದೆ** ಎಂಬ ನಂಬಿಕೆಯಿಂದ ಈ ಶಾಸನವನ್ನು ಹಾಕಿಸಿರುವುದನ್ನು ಇಲ್ಲಿ ನಾವು ಕಾಣಬಹುದಾಗಿದೆ.



ಹಾರೋಹಳ್ಳಿ ಗ್ರಾಮದ ಆಂಜನೇಯ ದೇವಸ್ಥಾನದ ಮುಂದೆ ಇರುವ ಶಾಸನ



ಹಾರೋಹಳ್ಳಿ ಶಾಸನವನ್ನು ಲಕ್ಷ್ಮಿಕಾಂತ ಶರ್ಮ ಅವರು 3ಡಿ ಸ್ಕ್ಯಾನ್ ಮಾಡುತ್ತಿರುವುದು

ಕಲ್ಲಿನ ಲಕ್ಷಣ

ಸಿಂಗಾಪುರಕ್ಕೆ ಸಂಬಂಧಿಸಿದ ಹಾರೋಹಳ್ಳಿ ಮತ್ತು ಚಿಕ್ಕಬೆಟ್ಟಹಳ್ಳಿಯ ಈ ಎರಡು ಶಾಸನಗಳಿಗೆ ಸ್ಥಳೀಯವಾಗಿ ದೊರೆಯುವ ಗ್ರಾನೈಟ್ ಕಲ್ಲನ್ನು ಬಳಸಲಾಗಿದೆ. ಬಹುಶ: ಈ ಎರಡೂ ಶಾಸನಗಳನ್ನು ಕೆತ್ತಲು ಒಂದೇ ಬಂಡೆಯ ಕಲ್ಲುಗಳನ್ನು ತಂದು ಸಿದ್ಧಪಡಿಸಿ ಕೊಂಡಿರಬೇಕು. ಅಕ್ಷರ ಕೆತ್ತಿರುವುದನ್ನು ಗಮನಿಸಿದರೆ ಈ ಎರಡು ಶಾಸನಗಳ ಕಾಲಾವಧಿಯ ಅಂತರ ಕೇವಲ 6 ವರ್ಷ. ಹಾಗಾಗಿ ಬಹುಶಃ ಈ ಎರಡೂ ಶಾಸನ ಕೆತ್ತಿರುವ ವ್ಯಕ್ತಿ ಒಬ್ಬನೇ ಇರಬಹುದು. ಚಿಕ್ಕಬೆಟ್ಟಹಳ್ಳಿಯ ಶಾಸನ ಕೆತ್ತುವಾಗ ಮಾಡಿದಂತಹ ಸಣ್ಣ ಸಣ್ಣ ಲಿಪಿದೋಷಗಳನ್ನು ಹಾರೋಹಳ್ಳಿ ಶಾಸನ ಕೆತ್ತುವಷ್ಟರಲ್ಲಿ ಶಿಲ್ಪಿಯು ಸರಿಪಡಿಸಿಕೊಂಡು ನೈಪುಣ್ಯತೆ ಹಾಗೂ ಕೌಶಲ್ಯವನ್ನು ಕಲಿತಿದ್ದಾನೆ ಎನ್ನಬಹುದು.

ಹಾರೋಹಳ್ಳಿ ಶಾಸನವು 163 ಸೆಂ.ಮೀ. ಎತ್ತರ ಮತ್ತು 89 ಸೆಂ.ಮೀ. ಅಗಲವಿದೆ.

ಶಾಸನದ ಸಂರಕ್ಷಣೆ

1. ಭೌತಿಕ ಸಂರಕ್ಷಣೆ

ಹಾರೋಹಳ್ಳಿಯ ಗ್ರಾಮಸ್ಥರಾದ ಹೆಚ್.ಎನ್. ನಾರಾಯಣ ರೆಡ್ಡಿ ಹಾಗೂ ಹೆಚ್.ಸತ್ಯನಾರಾಯಣ ಅವರಿಗೆ ತಮ್ಮ ಪರಂಪರೆಯ ಬಗ್ಗೆ ಹೆಮ್ಮೆ ಮತ್ತು ಕಾಳಜಿ ಇರುವುದರಿಂದ ಗ್ರಾಮದ ಆಂಜನೇಯ ದೇವಾಲಯದ ಆವರಣದಲ್ಲಿ ಈ ಶಾಸನವನ್ನು ಸಂರಕ್ಷಿಸಿಕೊಂಡಿರುವುದು ಅಭಿನಂದನಾರ್ಹವಾದುದಾಗಿದೆ. ಶಾಸನವನ್ನು ಸಂರಕ್ಷಣೆ ಮಾಡಿದ್ದರೂ ಇಲ್ಲಿ ಯಾವುದೇ ಮಾಹಿತಿ ಫಲಕ ಹಾಕಿಲ್ಲ. ಮುಂದಿನ ದಿನಗಳಲ್ಲಿ ಮಾಹಿತಿ ಫಲಕ ಹಾಕುವುದು ಅತ್ಯವಶ್ಯಕ.

2. ಡಿಜಿಟಲ್ ಸಂರಕ್ಷಣೆ

ಶಾಸನಗಳನ್ನು ಭೌತಿಕವಾಗಿ ಸಂರಕ್ಷಣೆ ಮಾಡಿದರೂ ಹವಾಮಾನದ ವೈಪರಿತ್ಯದಿಂದಾಗಿ ಲಿಪಿಗಳು ಸವೆದು ಹೋಗುವ ಸಾಧ್ಯತೆ ಹೆಚ್ಚಿರುತ್ತದೆ. ಶಾಶ್ವತವಾಗಿ ಇವುಗಳನ್ನು ಸಂರಕ್ಷಿಸಲು ಅತ್ಯಾಧುನಿಕ ತಂತ್ರಜ್ಞಾನದ ಸಹಾಯದಿಂದ ಅವುಗಳನ್ನು ಸ್ಕ್ಯಾನ್ ಮಾಡಿ ಸಂರಕ್ಷಿಸುವ ಅಗತ್ಯವಿದೆ. ಇದರಿಂದ ಇವು ಶಾಶ್ವತವಾಗಿ ಉಳಿಯುತ್ತವೆ. 3ಡಿ ಸ್ಕ್ಯಾನ್ ಮಾಡಿದ ದಿನ ಶಾಸನಕಲ್ಲು ಇದ್ದ ರೀತಿಯಲ್ಲಿಯೇ ಅದನ್ನು ಡಿಜಿಟಲ್ ಮಾದರಿಯಲ್ಲಿ ಸಂರಕ್ಷಿಸುವುದರಿಂದ ಅದು ಸಾವಿರಾರು ವರ್ಷಗಳು ಕಳೆದರೂ ಹಾಗೆಯೇ ಉಳಿಯುತ್ತದೆ. ಅವಶ್ಯವಿದ್ದಲ್ಲಿ ಅದರ ಪ್ರತಿಗಳನ್ನು ಯಥಾವತ್ತಾಗಿ ಮರ, ಕಲ್ಲು ಹಾಗೂ ಲೋಹಗಳ ಮೇಲೆ ಅಚ್ಚು ಹಾಕಿಸಿಕೊಳ್ಳಬಹುದು.



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಹಾರೋಹಳ್ಳಿ ಶಾಸನದ ಡಿಜಿಟಲ್ ಚಿತ್ರ

ಹಾರೋಹಳ್ಳಿಯ ಆಂಜನೇಯ ದೇವಾಲಯದ ಆವರಣದಲ್ಲಿದ್ದ ಶಾಸನವನ್ನು ಸಂರಕ್ಷಣೆ ಮಾಡಲಾಗಿತ್ತು, ಆದರೆ ಆವರಣಕ್ಕೆ ಕಾಂಕ್ರಿಟ್ ಹಾಕಿದಾಗ ಶಾಸನ ಕಲ್ಲಿನಲ್ಲಿ ಮೂರು ಸಾಲುಗಳು ಮುಚ್ಚಿ ಹೋಗಿದ್ದವು. ತದನಂತರ ಸ್ಥಳೀಯರಾದ **ಹೆಚ್.ಎನ್.ನಾರಾಯಣ ರೆಡ್ಡಿ ಹಾಗೂ ಹೆಚ್.ಸತ್ಯನಾರಾಯಣ,** ಸಿಂಗಾಪುರದ **ಮೋಹನ್ ನಾಯಕ್** ಮತ್ತು **ಎಸ್.ವಿ.ಶ್ರೀನಿವಾಸ್** ಮುಂತಾದವರ ಸಹಕಾರದಿಂದ ಶಾಸನ ಕಲ್ಲಿನ ಮುಚ್ಚಿ ಹೋಗಿದ್ದ ಭಾಗವನ್ನು ತೆಗೆಯಲಾಯಿತು. ಈ ಶಾಸನವನ್ನು **ಇನ್ಸ್ಕ್ರಿಪ್ಷನ್ ಸ್ಟೋನ್ಸ್ ಆಫ್ ಬೆಂಗಳೂರು** ಶಾಸನಗಳ 3ಡಿ ಡಿಜಿಟಲ್ ಸಂರಕ್ಷಣಾ ತಂಡವು ದಿನಾಂಕ 21-ಸೆಪ್ಟೆಂಬರ್-2020 ರಂದು 0.05 ಮಿಲಿ ಮೀಟರ್ ಹೈ-ರೆಸಲೂಷನ್ ಅಕ್ಯೂರಸಿಯಲ್ಲಿ ಡಿಜಿಟಲ್ ಸಂರಕ್ಷಣೆ ಮಾಡಿದೆ. ನಂತರ ಕಛೇರಿಯಲ್ಲಿ ಆರ್ಟೆಕ್ ಸ್ಟುಡಿಯೋ ತಂತ್ರಾಂಶದ ಸಹಾಯದಿಂದ ಅದರ 3ಡಿ ಮಾಡಲ್ ಅನ್ನು ತಯಾರಿಸಿದೆ. ಈ ಡಿಜಿಟಲ್ ಮಾಡಲ್ 5 ಕೋಟಿ 28 ಲಕ್ಷ ಪಾಲಿಗನ್ಸ್ ಗಳನ್ನು ಹೊಂದಿದೆ. ಈ ಮಾಡೆಲ್ ಅನ್ನು ಮೆಷ್ ಲ್ಯಾಬ್ ತಂತ್ರಾಂಶದ ಸಹಾಯದಿಂದ **ದಿ ಮಿಥಿಕ್ ಸೊಸೈಟಿ ಶಾಸನಗಳ 3ಡಿ ಡಿಜಿಟಲ್ ಸಂರಕ್ಷಣಾ ತಂಡವು** ಶಾಸನವನ್ನು ಮರು ಓದುವುದರ ಮೂಲಕ ಶಾಸನ ಅಧ್ಯಯನ ಮಾಡಿದೆ. ಮರು ಓದಿದಾಗ ಮೂಲ ಪಾಠ ಮತ್ತು ಹೊಸ ಪಾಠದಲ್ಲಿ ಅಲ್ಪಪ್ರಾಣ, ಮಹಾಪ್ರಾಣ ಮತ್ತು ಒತ್ತಕ್ಷರಗಳಲ್ಲಿನ ಬದಲಾವಣೆಗಳನ್ನು ಹೊರತುಪಡಿಸಿದರೆ ಶಾಸನದ ಮೂಲ ಅರ್ಥದಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಿಲ್ಲ. 3ಡಿ ಡಿಜಿಟಲ್ ತಂತ್ರಜ್ಞಾನದಿಂದ ತೆಗೆದ ಚಿತ್ರಗಳನ್ನು ಶಾಸನ ತಜ್ಞರಾದ ಪ್ರೊ.ಕೆ.ಆರ್. ನರಸಿಂಹನ್ ಅವರು ಶಾಸನವನ್ನು ಮರು ಓದುವ ಮೂಲಕ ಪಠ್ಯವನ್ನು ಪರಿಷ್ಕರಿಸಿದ್ದಾರೆ.

ಶಾಸನದ ಸಾರಾಂಶ

ಸಾ.ಶ. 1530ರಲ್ಲಿ ಸಿವನಸಮುದ್ರ ಸೀಮೆಯನ್ನು (ಇಂದಿನ ಹೆಸರಘಟ್ಟ) ಆಳ್ವಿಕೆ ಮಾಡುತ್ತಿದ್ದ ಕೃಷ್ಣಪ್ಪನಾಯಕರು ವಿಜಯನಗರದ ಅರಸ ಅಚ್ಯುತರಾಯ ಮತ್ತು ತಮ್ಮ ತಂದೆಗೆ ಒಳಿತಾಗಲಿ ಎಂದು ಸಿಂಗಾಪುರದ ತಿರುವೆಂಗಳನಾಥ ದೇವರ ಅಂಗ-ರಂಗ ವೈಭೋಗ, ಅಮೃತಪಡಿ, ನೈವೇದ್ಯ ಹಾಗೂ ರಾಮಾನುಜಕೂಟಕ್ಕೆ ಹಾರೋಹಳ್ಳಿ ಗ್ರಾಮವನ್ನು ದಾನ ನೀಡಿರುವುದನ್ನು ದಾಖಲಿಸಿದೆ.

ಅಂಗರಂಗ ವೈಬೊಗ ಭೋಗ, ಅಮೃತಪಡಿ, ರಾಮಾನುಜಕೂಟದ ಬಗ್ಗೆ ಮುಂದೆ ವಿವರಿಸಲಾಗಿದೆ.

ಶಾಸನದ ಪಾಠ

	ಎಪಿಗ್ರಾಫಿಯ ಕರ್ನಾಟಿಕ, ಸಂಪುಟ - 9, ಬೆಂಗಳೂರು ತಾಲ್ಲೂಕು ಶಾಸನದ ಸಂಖ್ಯೆ 28	ನಮ್ಮ ತಂಡದ ಪಾಠ (ಮರು ಓದು)
1[11]	ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹ ಶಕ	0 ಸ್ವಸ್ತಿ ಶ್ರೀ ಜೆಯಭ್ಯುದಯ ಶಾಲಿವಾಹನ ಶಕ
2	ವರುಷ ೧೪೫೨ ನೇ ವಿಕೃತಿ ಸಂವತ್ಸರ	0 ವರುಷ ೧೪೫೨ ನೆ ವಿಕ್ರುತಿ ಷಂವದರ
3	ದ ಕಾರ್ತೀಕ ಶುದ್ಧ ೧೨ ಪುಂಣ್ಯಕಾಲದಲ್ಲಿ ಅ	0 ದ ಖಾರ್ತಿಕ ಶುಧ ೧೨ ಪುಣ್ಯಕಾಲದಲಿ ಆ
4	ಚ್ಯುತರಾಯ ಮಹಾರಾಯರಿಗೆ ನಮ್ಮ ತಂದೆ ಬ	ಚುತರಾಯ ಮಹಾರಾಯರಿಗೆ ನಂಮು ತಂದೆ ಬ
5	ಸಪ್ಪನಾಯಕರಿಗೆ ಪುಣ್ಯವಾಗಿ ಅಚ್ಯುತರಾ	ಸವಪ್ಪನಾಯಕರಿಗೆ ಪುಂಣ್ಯವಾಗಿ ಆಚುತರಾ
6	ಯರು ಸೋಲೂರ ಬಸವಪ್ಪನಾಯಕರ ಮಕಳು ಕ್ರಿ	ಯರು ಸೊಲೂರ ಬಸವಪ್ಪನಾಯಕರ ಮಂಕಳು ಕ್ರಿ
7	ಷ್ಣಪ್ಪ ನಾಯಕರಿಗೆ ನಾಯಕತನಕ್ಕೆ ಪಾಲಿಸಿದ ಸಿವನ	ಷ್ತ್ಣ ಪ್ಪ ನಾಯಕರಿಗೆ ನಾಯಕತನಕೆ ಪಾಲಿಸಿದ ಸಿವನ
8	ಸಮುದ್ರದ ಸ್ತಲಕ್ಕೆ ಸಲುವ ಹಾರೋಹಳ್ಳಿ ಗ್ರಾಮವ	ಸಮುದ್ರದ ಸ್ತಲಕೆ ಸಲುವ ಹಾರುಹಳಿ ಗ್ರಮವ
9	ನು ಸಿಂಗಾಪುರದ ತಿರುವೆಂಗಳನಾತ ಆಂಗರಂಗ	ನು ಸಿಂಗಾಪುರದ ತಿರುವೆಂಗಳನಾತ ಆಂಗರಂಗ
10	ವೈಭೋಗ ಅಮ್ರುತಪಡಿ ನೈವೇದ್ದಕ್ಕೆ ರಾಮಾನುಜಕೂ	ವೈಬೊಗ ಆಮ್ರುತಪಡಿ ನೈವೆದ್ಯಕೆ ರಾಮಾನುಜಕೂ
11	ಟಕೆ ಸಲಬೇಕೆಂದು ಕೊಟ್ಟ ಸಿಲ ಶಸನ	ಟಕೆ ಸಲಬೆಕೆಂದು ಕೊಟ್ಟ ಸಿಲ ಶದನ

11 ಮೇಲಿನ ಶಾಸನ ಪಾಠದಲ್ಲಿ ಬಳಸಿರುವ ಸಂಖ್ಯೆಗಳು ಶಾಸನದಲ್ಲಿ ಇರುವುದಿಲ್ಲ, ಓದಲು ಅನುಕೂಲವಾಗಲೆಂದು 1,2,3,4 .....11 ಹೀಗೆ ಸಾಲುಗಳಿಗೆ ಅಂಕಿ ಕೊಡಲಾಗಿದೆ ಆದರೆ ಶಾಸನದಲ್ಲಿ ಮೊದಲ 3 ಸಾಲುಗಳನ್ನು ಬರೆಯುವುದಕ್ಕೆ "0" ಯನ್ನು ಬಳಸಲಾಗಿದೆ. ಹಾಗೂ ಶಾಸನದಲ್ಲಿ ಪದಗಳಿಗೆ ಯಾವುದೇ ಜಾಗ (ಸ್ಪೇಸ್) ಬಿಟ್ಟಿಲ್ಲ. ಓದುವ ಅನುಕೂಲಕ್ಕಾಗಿ ಪದಗಳಿಂದ ಪದಗಳಿಗೆ ಜಾಗ ಬಿಟ್ಟು ವಾಕ್ಯಗಳನ್ನು ಬರೆಯಲಾಗಿದೆ. ಮೂಲ ಪಾಠದಲ್ಲಿ ವ್ಯತ್ಯಾಸವಿರುವುದನ್ನು ದಪ್ಪ (BOLD) ಅಕ್ಷರಗಳಲ್ಲಿ ನೀಡಲಾಗಿದೆ.

ಈ ಶಾಸನವನ್ನು 3ಡಿ ಸ್ಕ್ಯಾನಿಂಗ್ ಮುಖಾಂತರ ಮರು ಓದಿದಾಗ 36 ಅಕ್ಷರಗಳಲ್ಲಿ ವ್ಯತ್ಯಾಸಗಳನ್ನು ಗುರುತಿಸಲಾಗಿದೆ. ಆದರೆ ಶಾಸನದ ಪಾಠ ಮತ್ತು ಅರ್ಥದಲ್ಲಿ ಯಾವುದೇ ವ್ಯತ್ಯಾಸ ಆಗುವುದಿಲ್ಲ. ಕೆಲವು ಪದಗಳಲ್ಲಿ ಅಲ್ಪಪ್ರಾಣದ ಬದಲಾಗಿ ಮಹಾಪ್ರಾಣ, ಒತ್ತಕ್ಷರಕ್ಕೆ ಬದಲಾಗಿ ಅನುಸ್ವಾರವನ್ನು (೦) ಬಳಸಲಾಗಿದೆ.

ಸಾಮಾನ್ಯವಾಗಿ ಶಾಸನ ಸಂಪಾದನೆ ಮಾಡುವಾಗ ಶಾಸನ ತಜ್ಞರು ಭಾಷಾ ದೃಷ್ಟಿಕೋನದಿಂದ ಶಾಸನ ಸಂಪಾದನೆ ಮಾಡುತ್ತಾರೆ. ಇದು ಕೆಲವೊಮ್ಮೆ ಕಲ್ಲಿನ ಮೇಲಿನ ಅಕ್ಷರಗಳಿಗೆ ಹೋಲಿಕೆಯಾಗುವುದಿಲ್ಲ. ನಾವು ಮೇಲೆ ನೀಡಿರುವ ಶಾಸನ ಪಾಠವು ಕಲ್ಲಿನ ಮೇಲಿನ ಅಕ್ಷರಗಳನ್ನು ಸಂಪೂರ್ಣವಾಗಿ ಹೋಲುತ್ತದೆ. ಆದರೆ ಯಾವುದೇ ರೀತಿಯ ಭಾಷಾ ದೃಷ್ಟಿಕೋನದಿಂದ ನೀಡಿರುವುದಿಲ್ಲ.

ಶಾಸನದ ಅನುವಾದ

೦ ಸಾಲುಗಳನ್ನು ಗುರುತಿಸಲು ವೃತ್ತಾಕಾರದ (೦) ಚಿಹ್ನೆಯನ್ನು ಬಳಸಲಾಗಿದೆ. ಮೂರು ಸಾಲುಗಳಿಗೆ ಮಾತ್ರ ಈ (೦) ರೀತಿಯಿದೆ.

ಸ್ವಸ್ತಿಶ್ರೀ ಶಾಸನದ ಆರಂಭದಲ್ಲಿ ಸ್ವಸ್ತಿಶ್ರೀ ಎಂದಿರುವುದು ಶುಭ ಸೂಚಕ, ಎಲ್ಲರಿಗೂ ಒಳ್ಳೆಯದಾಗಲಿ ಎಂಬ ಅರ್ಥವನ್ನು ಸೂಚಿಸುವ ಪದ

ಜೆಯಭ್ಯುದಯ ವಿಜಯವು ಹೆಚ್ಚಾಗಲಿ

ಶಾಲಿವಾಹನ ಶಕ ವರುಷ ೧೪೫೨ ನೆ ವಿಕೃತಿ ಷಂವದರದ ಖಾರ್ತಿಕ ಶುಧ ೧೨ ಪುಣ್ಯಕಾಲದಲಿ

ಶಾಸನ ಹಾಕಿಸಿರುವ ವರ್ಷ, ಮಾಸ, ದಿನವಾಗಿದೆ. ಇದು ಸಾ.ಶ. **1530 ನವೆಂಬರ್ 02**ಕ್ಕೆ ಸರಿ ಹೊಂದುತ್ತದೆ.



ಶಾಸನೋಕ್ತ ಶಾಲಿವಾಹನ




ಹಾರೋಹಳ್ಳಿ ಶಾಸನದಲ್ಲಿ ವಿಕೃತಿ ಷಂವದರ

ಖಾರ್ತಿಕ ಶಾಸನ ಹಾಕಿಸಿರುವ ತಿಂಗಳು/ಮಾಸ ಅಂದರೆ ಇಂದಿನ ನವಂಬರ್-ಡಿಸೆಂಬರ್ ತಿಂಗಳು.

ಶುಧ ೧೨ ಶು ಎಂದರೆ ಶುಕ್ಲ ಪಕ್ಷವನ್ನು ಸೂಚಿಸುತ್ತದೆ ಹಾಗೂ ೧೨ ಎಂದರೆ ಶುಕ್ಲ ಪಕ್ಷದ ದ್ವಾದಶಿ ತಿಥಿ.[12]

ಆಚುತರಾಯ ಮಹಾರಾಯರಿಗೆ

ಶಾಸನ ಹಾಕಿಸುವ ಸಮಯದಲ್ಲಿ ಆಳ್ವಿಕೆ ಮಾಡುತ್ತಿದ್ದ ಕರ್ನಾಟಕ ಸಾಮ್ರಾಜ್ಯದ ರಾಜನ ಹೆಸರು.[13] ಕರ್ನಾಟ/ಕರ್ನಾಟಕ ಸಾಮ್ರಾಜ್ಯವು ವಿಜಯನಗರ ಸಾಮ್ರಾಜ್ಯವೆಂದು ಪ್ರಸಿದ್ಧವಾಗಿದೆ.



ಶಾಸನೋಕ್ತ ಆಚುತರಾಯ (ರಾಜನ ಹೆಸರು ಆಚುತರಾಯ)

ನಂಮ ತಂದೆ ಬಸವಪ್ಪನಾಯಕರಿಗೆ ಪುಂಣ್ಯವಾಗಿ

ಕೃಷ್ಣಪ್ಪ ನಾಯಕರ ತಂದೆಯಾದ ಬಸವಪ್ಪ ನಾಯಕರಿಗೆ ಒಳಿತಾಗಲಿ.



ಶಾಸನೋಕ್ತ ಸೊಲೂರ ಬಸವಪ್ಪ ನಾಯಕರ

ಸೊಲೂರ ಬಸವಪ್ಪನಾಯಕರ ಮಂಕಳು

ಸೊಲೂರ ಬಸವಪ್ಪನಾಯಕ ಮಾಗಡಿ ತಾಲ್ಲೂಕಿನ ಸೋಲೂರು ಪ್ರಾಂತ್ಯದ ಅಧಿಕಾರಿಯಾಗಿದ್ದವನು.

ಕ್ರಿಷ್ತ್ಣಪ್ಪ ನಾಯಕರಿಗೆ

ಶಿವನಸಮುದ್ರ (ಇಂದಿನ ಹೆಸರುಘಟ್ಟ) ಸ್ಥಳದ ಅಧಿಕಾರಿ.

ನಾಯಕತನಕೆ ಪಾಲಿಸಿದ

ಆಳ್ವಿಕೆ ನಡೆಸಲು ಅಧಿಕಾರವನ್ನು ನೀಡಿರುವ

ಸಿವನಸಮುದ್ರದ ಸ್ತಲಕೆ ಸಲುವ

ಸಿವನಸಮುದ್ರ ಬೆಂಗಳೂರು ಸಮೀಪದ ಇಂದಿನ ಹೆಸರಘಟ್ಟವಾಗಿತ್ತು. ಈ ಹೆಸರಘಟ್ಟದ ಚಂದ್ರಮೌಳೇಶ್ವರ ದೇವಾಲಯದಲ್ಲಿ ಹಾಕಿಸಿ-ರುವ ಸಾ.ಶ.1533 ಶಾಸನದಲ್ಲಿ ಶಿವನ-ಸಮುದ್ರವೇ ಹೆಸರಘಟ್ಟವೆಂದು

12 ಒಂದು ಮಾಸದಲ್ಲಿ ಎರಡು ಪಕ್ಷಗಳಿದ್ದು ಅಂದರೆ ಶುಕ್ಲ/ಶುದ್ಧ ಪಕ್ಷ ಎಂದರೆ ಅಮವಾಸ್ಯೆಯಿಂದ ಹುಣ್ಣಿಮೆಯವರೆಗೆ, ಬಹುಳ/ಕೃಷ್ಣ ಪಕ್ಷ ಎಂದರೆ ಹುಣ್ಣಿಮೆಯಿಂದ ಅಮವಾಸ್ಯೆಯವರೆಗೆ.

13 Shrinivas Ritti, B R Gopal (editor), *Inscriptions of the Vijayanagara Rulers, Volume II,* (Bangalore: ICHR), Page iv (Introduction), 2008

ಕರೆದಿದೆ.[14] 1530 ರಲ್ಲಿ ಇದೊಂದು ಆಡಳಿತ ಘಟಕವಾಗಿತ್ತು (ಸ್ಥಳ).



ಶಾಸನೋಕ್ತ ಕ್ರಿಷ್ಣಪ್ಪ ನಾಯಕರಿಗೆ, ಸಮುದ್ರದ ಸ್ಥಲ

ಸ್ಥಲ ಹಲವು ಗ್ರಾಮಗಳ ಸಮೂಹವೇ ಸ್ಥಳವಾಗಿದೆ.[15]

ಹಾರುಹಳಿ ಗ್ರಮವನು
ಇಂದಿನ ಹಾರೋಹಳ್ಳಿ ಗ್ರಾಮವನ್ನು ದಾನವಾಗಿ ನೀಡಿರುವುದು.

ಸಿಂಗಾಪುರದ ತಿರುವೆಂಗಳನಾತ
ಸಿಂಗಾಪುರ ಬಡಾವಣೆ ಯಲ್ಲಿರುವ ವರದರಾಜ ಸ್ವಾಮಿ ದೇವರನ್ನು ತಿರುವೆಂಗಳನಾಥ ಎಂದು ಶಾಸನದಲ್ಲಿ ಕರೆದಿದೆ. ತಿರು ಎಂದರೆ ಶ್ರೀ, ವೆಂಗಳನಾಥ ಎಂದರೆ ಶ್ರೀನಿವಾಸ, ವೆಂಕಟೇಶ್ವರ.

ಅಂಗರಂಗವೈಬೋಗ
ದೇವರಿಗೆ ಅರ್ಪಿಸುವ ಮತ್ತು ದೇವರ ಮುಂದೆ ನಡೆಯುವ ಸಾಂಸ್ಕೃತಿಕ ಕಾರ್ಯಗಳು

ಅಮ್ರುತಪಡಿ ನೈವೆದ್ಯ ದೇವರಿಗೆ ಅರ್ಪಿಸಲು ವಿಶೇಷವಾಗಿ ತಯಾರಾದ ಆಹಾರ ಪದಾರ್ಥ.

ರಾಮಾನುಜಕೂಟಕೆ ಸಲಬೆಕೆಂದು
ರಾಮನುಜಕೂಟಕ್ಕೆ ಸೇರಬೇಕೆಂದು. ಶ್ರೀವೈಷ್ಣವ ದೇವಾಲಯಗಳು ಮತ್ತು ಮಠಗಳಿಗೆ ಹೊಂದಿ ಕೊಂಡಂತೆ ರಾಮಾನುಜಕೂಟಗಳಿರುತ್ತಿದ್ದವು. ಶ್ರೀವೈಷ್ಣವರು ತಂಗಲು ಹಾಗೂ ಅವರಿಗೆ ಆಹಾರ ಒದಗಿಸಲು ದೂರದ ಶ್ರೀವೈಷ್ಣವ ಭಕ್ತರಿಗಾಗಿ ತೆರೆಯಲಾದ ಪ್ರಸಾದ ನಿಲಯಗಳು, ಒಂದು ರೀತಿಯಲ್ಲಿ ಛತ್ರಗಳ ರೀತಿಯವು. (ರಾಮಾನುಜಕೂಟದ ಬಗ್ಗೆ ಮುಂದೆ ವಿವರಿಸಲಾಗಿದೆ)

ಕೊಟ್ಟ ಸಿಲ ಶದನ ಕೊಟ್ಟಿರುವ ಶಿಲಾ ಶಾಸನ

14 Lewis Rice B, Epigraphia Carnatica Vol 09, Inscriptions of the Bangalore Distric , ನೆಲಮಂಗಲ ತಾಲ್ಲೂಕು, ಶಾಸನ ಸಂಖ್ಯೆ-31

15 ಕೃಷ್ಣಮೂರ್ತಿ ಪಿ ವಿ. "ಬೆಂಗಳೂರು ಜಿಲ್ಲೆಯ ವಿಜಯನಗರ ಕಾಲದ ಆಡಳಿತ ವಿಭಾಗಗಳು", ಇತಿಹಾಸ ದರ್ಶನ, ಸಂಪುಟ 15, 1990, ಪುಟ ಸಂಖ್ಯೆ :103.


ಶಾಸನದಲ್ಲಿ ಸಂಕೇತಗಳು

ಶಾಸನದ ಮೇಲ್ಭಾಗದಲ್ಲಿ ಶ್ರೀವೈಷ್ಣವ ಪಂಥದ ಸಂಕೇತಗಳಾದ ಶಂಖ (ಪಾಂಚಜನ್ಯ), ಚಕ್ರ (ಸುದರ್ಶನ) ಹಾಗೂ ಮೂರು ನಾಮಗಳ(ತಿರುನಾಮ) ರೇಖಾಚಿತ್ರವನ್ನು ಕೆತ್ತಲಾಗಿದೆ. ಸಾಮಾನ್ಯವಾಗಿ ಈ ಪಂಥದ ದಾನ ಶಾಸನಗಳ ಮೇಲೆ, ಗಡಿಕಲ್ಲುಗಳ ಮೇಲೆ ಹಾಗೂ ವಿಜಯನಗರ ಕಾಲದ (14-16 ನೇ ಶತಮಾನ) ವೈಷ್ಣವ ದೇವಾಲಯಗಳ ಗೋಪುರ, ಬಾಗಿಲುವಾಡ, ಮಂಟಪಗಳ ಮೇಲೂ ಸಹ ಶಂಖ, ಚಕ್ರ, ನಾಮದ ಚಿತ್ರಣವನ್ನು ಕಾಣಬಹುದು. ಶಾಸನಗಳ ಮೇಲಿನ ಈ ಸಂಕೇತಗಳನ್ನು ಹಾರೋಹಳ್ಳಿ ಶಾಸನದ ಜೊತೆಗೆ ಬೆಂಗಳೂರು ನಗರದಲ್ಲಿ **ಚಿಕ್ಕಬೆಟ್ಟಹಳ್ಳಿ, ತಿಂಡ್ಲು, ಅಲ್ಲಾಳಸಂದ್ರ, ದೊಮ್ಮಲೂರು, ಕೊತ್ತನೂರು, ಬನ್ನೇರುಘಟ್ಟ, ಬೊಮ್ಮಂಡಹಳ್ಳಿ** ಹಾಗೂ ಬೆಂಗಳೂರು ಗ್ರಾಮಾಂತರದಲ್ಲಿ **ಕಾಡನೂರು, ಗಂಟಿಗನಹಳ್ಳಿ, ಕಾಡಿಗನಹಳ್ಳಿ, ಜೋಡಿದಾಸರಹಳ್ಳಿ, ಚಿಕ್ಕಜಾಲ, ಮಾರನಗೆರೆ** ಇನ್ನೂ ಮುಂತಾದ ಸ್ಥಳಗಳ ಶಾಸನ ಕಲ್ಲಿನ ಮೇಲೆ ಕಾಣಬಹುದು.

ಚಿಕ್ಕಬಳ್ಳಾಪುರ ಜಿಲ್ಲೆಯ ದಾರಿನಾಯಕನ ಪಾಳ್ಯ (ಡಿ.ಪಾಳ್ಯ) ಸಮೀಪದ ಬೆಟ್ಟದ ಮೇಲಿನ ಈ 3 ನಾಮದಿಂದಾಗಿಯೇ ಆ ಗ್ರಾಮಕ್ಕೆ ನಾಮಗೊಂಡ್ಲು ಎಂದು ಹೆಸರು ಬಂದಿದೆ ಎಂಬುದನ್ನು ಇಲ್ಲಿ ಸ್ಮರಿಸಬಹುದು.

ಬೆಂಗಳೂರು ಪ್ರದೇಶದ ಹಾರೋಹಳ್ಳಿ, ಚಿಕ್ಕಬೆಟ್ಟಹಳ್ಳಿ, ತಿಂಡ್ಲು ಗ್ರಾಮಗಳಲ್ಲಿ ಸಿಗುವ ಶಾಸನ ಕಲ್ಲಿನ ಮೇಲೆ ಶಂಖ, ಚಕ್ರಗಳಿದ್ದು, ಇವುಗಳನ್ನು ಅಷ್ಟಾಗಿ ನೈಪುಣ್ಯತೆ ಇಲ್ಲದ ಸ್ಥಳೀಯ ವ್ಯಕ್ತಿಯು ಕೆತ್ತಿರಬಹುದು. ಏಕೆಂದರೆ ಶಿಲ್ಪಶಾಸ್ತ್ರದ ಪ್ರಕಾರ ಸುದರ್ಶನ ಚಕ್ರದ ಕಡ್ಡಿ/ಅರೆಗಳಲ್ಲಿ ನಾಲ್ಕು, ಎಂಟು ಹೀಗೆ ಏರಿಕೆ ಆಗುತ್ತದೆ. ಉದಾಹರಣೆಗೆ ಸಿಂಗಾಪುರ ಸಮೀಪದ ತಿಂಡ್ಲು ಗ್ರಾಮದಲ್ಲಿ ಶಾಸನರಹಿತ ಕಲ್ಲಿನ ಮೇಲೆ ಎಂಟು ಕಡ್ಡಿಗಳುಳ್ಳ ಸುದರ್ಶನ ಚಕ್ರವಿದ್ದು, ಇದನ್ನು ಪೂಜೆ ಮಾಡಲು ಶಾಸ್ತ್ರೋಕ್ತವಾಗಿ ಚಿತ್ರಿಸಲಾಗಿದೆ. ದೊಮ್ಮಲೂರಿನ ಚೊಕ್ಕನಾಥಸ್ವಾಮಿ ದೇವಾಲಯಕ್ಕೆ ಸಂಬಂಧಿಸಿದ ಶಾಸನದಲ್ಲಿ (ಸಾ.ಶ. 1440) ಎಂಟು ಕಡ್ಡಿಗಳುಳ್ಳ ಸುದರ್ಶನ ಚಕ್ರವನ್ನು ಶಾಸ್ತ್ರೋಕ್ತವಾಗಿ ಕೆತ್ತಲಾಗಿದೆ. ಹಾರೋಹಳ್ಳಿ, ಚಿಕ್ಕಬೆಟ್ಟಹಳ್ಳಿ ಶಾಸನಗಳಲ್ಲಿ ಕಡ್ಡಿ/ಅರೆಗಳಿಲ್ಲ. ಇದರಿಂದ ತಿಳಿಯುವುದೇನೆಂದರೆ ಸಾಮಾನ್ಯವಾಗಿ ದೇವಾಲಯಕ್ಕೆ ಸಂಬಂಧಿಸಿದ ಶಾಸನಗಳನ್ನು ಶಾಸ್ತ್ರೋಕ್ತವಾಗಿ, ಉತ್ತಮ ನೈಪುಣ್ಯವುಳ್ಳ ಶಿಲ್ಪಿಗಳು ಕೆತ್ತುತ್ತಿದ್ದರು. ದೇವಾಲಯ ಪ್ರದೇಶಗಳನ್ನು ಹೊರತು ಪಡಿಸಿ ಬೇರೆ ಸ್ಥಳಗಳಲ್ಲಿ ಹಾಕಿಸಿರುವ ಶಾಸನಗಳನ್ನು ಗಮನಿಸಿದಾಗ ಬಹುಶಃ ಶಿಲ್ಪಶಾಸ್ತ್ರದ ನೈಪುಣ್ಯ ಇಲ್ಲದ ಸ್ಥಳೀಯ ಶಿಲ್ಪಿಗಳು ಕೆತ್ತುತ್ತಿದ್ದರು ಎಂದು ಊಹಿಸಬಹುದು.

ಬೆಂಗಳೂರಿನ ಶಾಸನಗಳಲ್ಲಿ ಶಂಖ, ಚಕ್ರ ಮೊದಲಾದ ಸಂಕೇತಗಳು



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಅಲ್ಲಾಳಸಂದ್ರ ಶಾಸನ (ಸಾ.ಶ. 1544) ಕಲ್ಲಿನ ಮೇಲಿರುವ ಸುದರ್ಶನ ಚಕ್ರದ ಡಿಜಿಟಲ್ ಚಿತ್ರ



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ದೊಮ್ಮಲೂರು ಊರು ಬಾಗಿಲ ಬಳಿಯ ಶಾಸನ (ಸಾ.ಶ. 1430) ಕಲ್ಲಿನ ಮೇಲಿರುವ ಸುದರ್ಶನ ಚಕ್ರದ ಡಿಜಿಟಲ್ ಚಿತ್ರ



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ದೊಮ್ಮಲೂರು ಚೊಕ್ಕನಾಥಸ್ವಾಮಿ ದೇವಸ್ಥಾನದ ಶಾಸನ (ಸಾ.ಶ. 1440) ಕಲ್ಲಿನ ಮೇಲಿರುವ ಸುದರ್ಶನ ಚಕ್ರದ ಡಿಜಿಟಲ್ ಚಿತ್ರ




3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಚಿಕ್ಕಬೆಟ್ಟಹಳ್ಳಿ ಆಂಜನೇಯ ದೇವಸ್ಥಾನದ ಶಾಸನ (ಸಾ.ಶ. 1524) ಕಲ್ಲಿನ ಮೇಲಿರುವ ಸುದರ್ಶನ ಚಕ್ರದ ಡಿಜಿಟಲ್ ಚಿತ್ರ



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಹಾರೋಹಳ್ಳಿ ಆಂಜನೇಯ ದೇವಸ್ಥಾನದ ಶಾಸನ (ಸಾ.ಶ. 1530) ಕಲ್ಲಿನ ಮೇಲಿರುವ ಸುದರ್ಶನ ಚಕ್ರದ ಡಿಜಿಟಲ್ ಚಿತ್ರ

ಶಾಸನದ ಅಕ್ಷರಗಳು

1ನೇ ಸಾಲು

೦	ಸ್ವ/sva	ಸ್ತಿ/sti	ಶ್ರೀ/śrī
			
ಜೆ/je	ಯ/ya	ಭ್ಯು/bhyu	ದ/da
			
ಯ/ya	ಶಾ/śā	ಲಿ/li	ವಾ/vā
			
ಹ/ha	ನ/na	ಶ/śa	ಕ/ka
			

(ಇತರೆ ಸಾಲುಗಳ ಶಾಸನ ಲಿಪಿಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಶಾಸನದ ಭಾಷೆ

ಈ ಶಾಸನವನ್ನು ಜನಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ದುಂಡಾಗಿ ಬರೆಯಲಾಗಿದ್ದು, ಜನ-ಸಾಮಾನ್ಯರ ಆಡು ಭಾಷೆಯನ್ನು ಲಿಪಿಕಾರ ಬಳಸಿಕೊಂಡಿದ್ದಾನೆ. ದೇವಸ್ಥಾನಕ್ಕೆ ದಾನ ನೀಡಿರುವುದರಿಂದ ಈ ದಾನದ ವಿವರವು ಎಲ್ಲರಿಗೂ ತಿಳಿಯುವಂತಾಗಬೇಕಾದರೆ ಜನಸಾಮಾನ್ಯರ ಭಾಷೆಯಾದ ಆಡು ಭಾಷೆಯೇ ಸೂಕ್ತ ಎಂಬುದು ಲಿಪಿಕಾರನ ಉದ್ದೇಶವಾಗಿರಬಹುದು.

ಶಾಸನ ಪಾಠದ ಕೆಲವು ಪದಗಳಲ್ಲಿ ಅಕ್ಷರಗಳನ್ನು ಮಹಾಪ್ರಾಣದ ಬದಲಾಗಿ ಅಲ್ಪಪ್ರಾಣ ಹಾಗೂ ಅಲ್ಪಪ್ರಾಣದ ಬದಲಾಗಿ ಮಹಾಪ್ರಾಣವನ್ನು (**ಉದಾಹರಣೆ ಖಾರ್ತಿಕ > ಕಾರ್ತಿಕ, ವೈಬೋಗ > ವೈಭೋಗ**), ಒತ್ತಕ್ಷರಕ್ಕೆ ಬದಲಾಗಿ ಅನುಸ್ವಾರ (೦) ಬಳಸಲಾಗಿದೆ (**ಉದಾಹರಣೆ ನಂಮ > ನಮ್ಮ, ಮಂಕಳು > ಮಕ್ಕಳು**) ಹಾಗೂ ಮಹಾಪ್ರಾಣಕ್ಕೆ ಹೊಕ್ಕಳು ಸೀಳಿರುವುದನ್ನು ಗಮನಿಸಬಹುದು. ಮಹಾಪ್ರಾಣಕ್ಕೆ ಹೊಕ್ಕಳು ಸೀಳುವ ಪದ್ಧತಿ ಹಿಂದೆ ಸಿಗುವ ಉದಾಹರಣೆ ಕಡಿಮೆ. (**ಚಿತ್ರ ನೋಡಿ-ಖಾರ್ತಿಕ ಶುಧ**).

ಶಾಸನದಲ್ಲಿ ಆಡುಭಾಷೆ ಬಳಕೆಯಾಗಿದೆ. **ಉದಾ - ಸಂವತ್ಸರ> ಷಂವದರ, ಅಚ್ಯುತರಾಯ> ಆಚುತರಾಯ, ಸ್ಥಳ>ಸ್ತಲ, ಜಯಾಭ್ಯುದಯ> ಜೆಯಾಭ್ಯುದಯ** ಇತ್ಯಾದಿ...

ಶಾಸನದ ಮಹತ್ವ

i. ಈ ಶಾಸನದಲ್ಲಿ ಉಲ್ಲೇಖವಾಗಿರುವ ಸಿಂಗಾಪುರ ಗ್ರಾಮದ ತಿರುವೆಂಗಳನಾಥ ಅಂದರೆ **ಇಂದಿನ ವರದರಾಜಸ್ವಾಮಿ ದೇವಾಲಯವು 500 ವರ್ಷಗಳಿಗೂ ಹೆಚ್ಚು ಪುರಾತನವಾದ ದೇವಾಲಯವಾಗಿದೆ.**

ii. ಸಿಂಗಾಪುರ ಗ್ರಾಮವು **ಶ್ರೀವೈಷ್ಣವರ ಕೇಂದ್ರವಾಗಿತ್ತು.**

iii. ಈ ಶಾಸನದಲ್ಲಿ ದೇವಾಲಯಕ್ಕೆ ಇಡೀ ಗ್ರಾಮವನ್ನು ದಾನ ನೀಡಿರುವುದು ವಿಶೇಷವಾಗಿದೆ. ಸಾಮಾನ್ಯವಾಗಿ ಗ್ರಾಮವನ್ನು ಸಂಪೂರ್ಣವಾಗಿ ದಾನ ನೀಡುವ ಅಧಿಕಾರ ರಾಜನಿಗೆ ಮಾತ್ರವೇ ಇರುತ್ತಿತ್ತು. ಕೆಲವೊಮ್ಮೆ ರಾಜನಿಂದ ಹಲವು ಗ್ರಾಮಗಳ ಅಧಿಕಾರವನ್ನು ಪಡೆದ ನಾಯಕ/ ಅಧಿಕಾರಿಯು ಸಹ ತಮಗೆ ಬಂದ ಗ್ರಾಮಗಳನ್ನು ದಾನ ನೀಡಬಹುದಾಗಿತ್ತು. ಹೀಗೆ ದೇವಾಲಯಗಳಿಗೆ ಇಡೀ ಗ್ರಾಮವನ್ನು ದಾನ ನೀಡಿದಾಗ ಅಲ್ಲಿನ ತೆರಿಗೆಯ ಜೊತೆಗೆ ಭೂಮಿಯು ಸಹ ಸೇರುತ್ತಿತ್ತು. ಇಂತಹ ಭೂಮಿಯನ್ನು ದೇವಾಲಯವು ಗುತ್ತಿಗೆ ಆಧಾರದ ಮೇಲೆ ಉಳುಮೆ ಮಾಡುವವರಿಗೆ ನೀಡಿ ವಾರ್ಷಿಕವಾಗಿ ಇಂತಿಷ್ಟು ಹಣ ಅಥವಾ ದಾನ್ಯಗಳನ್ನು ಪಡೆಯುತ್ತಿತ್ತು. ಹಣವನ್ನು ನಿತ್ಯ ಖರ್ಚುಗಳಿಗೆ ಬಳಸಿಕೊಂಡರೆ, ಧಾನ್ಯಗಳನ್ನು ದಾಸೋಹ, ಬಿತ್ತನೆ ಬೀಜ ನೀಡುವುದು ಜೊತೆಗೆ ಹೆಚ್ಚಿನ ಧಾನ್ಯಗಳನ್ನು ಮಾರಿ ಹಣ ಪಡೆದು ದೇವಾಲಯದ ಖರ್ಚುವೆಚ್ಚಗಳಿಗೆ ಬಳಸಿಕೊಳ್ಳುವುದನ್ನು ಮಾಡುತ್ತಿತ್ತು. ಆದ್ದರಿಂದ ದೇವಾಲಯಗಳು ಕೇವಲ ಧಾರ್ಮಿಕ ಸಂಸ್ಥೆಗಳು ಮಾತ್ರವಲ್ಲದೇ ಸಾಮಾಜಿಕ ಸಂಸ್ಥೆಗಳು ಆಗಿರುವುದರಿಂದ ಸಮಾಜದ ಮೇಲೆ ನೇರ ಪರಿಣಾಮವನ್ನು ಬೀರುತ್ತಿದ್ದವು ಎಂದು ಹೇಳಬಹುದು.

ಈ ಶಾಸನವು ಸಿಂಗಾಪುರದ ತಿರುವೆಂಗಳನಾಥ **ದೇವಾಲಯದಲ್ಲಿ ರಾಮಾನುಜಕೂಟವಿದ್ದು**, ಅದರ ಕಾರ್ಯಗಳಿಗಾಗಿ ಊರನ್ನೇ ಸರ್ವಮಾನ್ಯವಾಗಿ ದಾನ ನೀಡಿರುವುದರಿಂದ ಇದೊಂದು **ಮುಖ್ಯವಾದ ಧಾರ್ಮಿಕ ಕೇಂದ್ರವಾಗಿತ್ತು ಎಂದು ಹೇಳಬಹುದು.**

iv. ಈ ಸಮಯದಲ್ಲಿ **ಕರ್ನಾಟಕ ಸಾಮ್ರಾಜ್ಯ**ದ ಅರಸ ಅಚ್ಯುತರಾಯ ರಾಜನಾಗಿದ್ದನು.

ಈ ಕರ್ನಾಟಕ ಸಾಮ್ರಾಜ್ಯದ ರಾಜಧಾನಿ ವಿಜಯನಗರವಾಗಿದ್ದು, ಸಾಮಾನ್ಯವಾಗಿ ಎಲ್ಲರೂ ವಿಜಯನಗರ ಸಾಮ್ರಾಜ್ಯವೆಂದೇ ಕರೆಯುತ್ತಾರೆ.[16]

v. ಹಾರೋಹಳ್ಳಿ ಗ್ರಾಮವು **ಶಿವನಸಮುದ್ರದ ಸ್ತಳ** (ಆಡಳಿತ ವಿಭಾಗ)ಕ್ಕೆ ಸೇರಿದ್ದು ಆಗ ಕ್ರಿಷ್ಣಪ್ಪನಾಯಕರು ನಾಯಕತನವನ್ನು ಹೊಂದಿದ್ದರು.

vi. ಈ ಶಾಸನವು ನಂಬಿಕಸ್ಥರಿಗೆ ಕೆಲವು ಅಧಿಕಾರಗಳನ್ನು ವಂಶಪಾರಂಪರ್ಯವಾಗಿ ನೀಡಿರುವುದಕ್ಕೆ ಉದಾಹರಣೆಯಾಗಿದೆ.

16 Shrinivas Ritti, B R Gopal (editor), **Inscriptions of the Vijayanagara Rulers, Volume II**, (Bangalore: ICHR), Page iv (Introduction), 2008

ಚಿಕ್ಕಬೆಟ್ಟಹಳ್ಳಿಯ ಸಿಂಗಪ್ಪನಾಯಕನ ರಾಮಾನುಜಕೂಟದ ಶಾಸನ

ಸಿಂಗಾಪುರದಿಂದ ಚಿಕ್ಕಬೆಟ್ಟಹಳ್ಳಿಗೆ 2ಕಿ.ಮೀ ದೂರವಿದ್ದು, ಈ ಗ್ರಾಮವು 13°05'22.9"N 77°33'12.4"E ಅಕ್ಷಾಂಶ ರೇಖಾಂಶದಲ್ಲಿ ಕಂಡುಬರುತ್ತದೆ. ಇಲ್ಲಿ ಸಿಂಗಾಪುರ ಗ್ರಾಮಕ್ಕೆ ಸಂಬಂಧಿಸಿದ ಒಂದು ಶಾಸನವಿದೆ.

ಶಾಸನದ ಶೋಧ

ಈ ಶಾಸನವನ್ನು **1905ರಲ್ಲಿ ಬಿ.ಎಲ್.ರೈಸ್ ಅವರು ಸಂಪಾದಿಸಿರುವ ಎಪಿಗ್ರಾಫಿಯ ಕರ್ನಾಟಿಕ, ಸಂಪುಟ - 09, ಬೆಂಗಳೂರು ತಾಲ್ಲೂಕು, ಶಾಸನ ಸಂಖ್ಯೆ - 19ರಲ್ಲಿ** ಚಿಕ್ಕಬೆಟ್ಟ ಹಳ್ಳಿ ಗ್ರಾಮದ ಹನುಮಂತ ದೇವಾಲಯದ ಬಲಗಡೆ ನೆಟ್ಟಿರುವ ಕಲ್ಲು ಎಂದಿದೆ. ಇಂದಿಗೂ ಇದೇ ದೇವಾಲಯದ ಆವರಣದಲ್ಲಿ ಈ ಶಾಸನ ಸಂರಕ್ಷಣೆಯಾಗಿದೆ. ಈ ಶಾಸನ ದಾಖಲಾದ 115 ವರ್ಷದಲ್ಲಿ ಶಾಸನವನ್ನು ಮರು ನೋಡಲು ಮತ್ತು ಓದಲು ಪ್ರಯತ್ನಿಸಿದವರು ಬಹುಶಃ ಬೆರಳೆಣಿಕೆಯಷ್ಟಿರಬಹುದು.

19-ಸೆಪ್ಟೆಂಬರ್-2017 ಮಂಗಳವಾರದಂದು ಪಿ.ಎಲ್.ಉದಯ ಕುಮಾರ್ ಮತ್ತು ದರ್ಶನ ರಾಮ್ ದೇವ್ (ಡೆಕ್ಕನ್ ಕ್ರೋನಿಕಲ್ ಪೇಪರ್ ರಿಪೋರ್ಟರ್) ಇಬ್ಬರು ಚಿಕ್ಕಬೆಟ್ಟಹಳ್ಳಿಯಲ್ಲಿನ ಆಂಜನೇಯ ದೇವಾಲಯದ ಗೋಡೆ ಪಕ್ಕದಲ್ಲಿರುವ ದಾಖಲಾದ ಶಾಸನವನ್ನು ನೋಡಲು ಮಧ್ಯಾಹ್ನ ಸುಮಾರು 2:30- 3:00 ಗಂಟೆ ಹೊತ್ತಿಗೆ ಹೋದಾಗ ದೇವಾಲಯದ ಹೊರಗೆ ಇದ್ದ ಕಟ್ಟೆ ಮೇಲೆ ನಾಲ್ಕೈದು ಮಂದಿ ಕುಳಿತು ಹರಟೆ ಹೊಡೆಯುತ್ತಿದ್ದು,[17] ಈ ಇಬ್ಬರನ್ನು ಕಂಡು ಆ ಗುಂಪಿನಲ್ಲಿನ ವ್ಯಕ್ತಿಯೊಬ್ಬನು-

ವ್ಯಕ್ತಿ 1 : Yes What You Want ? (ಅಂದ)

ಉದಯ ಕುಮಾರ್ : ಏ, ಏನು ಇಲ್ಲಪ್ಪ

ವ್ಯಕ್ತಿ 1 : ಹೋ.. ಕನ್ನಡ ಬರುತ್ತೇ ???

ಉದಯ ಕುಮಾರ್ : ಇಲ್ಲಿನವರೇ ಕನ್ನಡ ಬರಲ್ವಾ !!!

ವ್ಯಕ್ತಿ 1 : ಏನು ನೋಡೋಕೆ ಬಂದೆ ?

ಉದಯ ಕುಮಾರ್ : ನಿಮ್ಮ ದೇವಸ್ಥಾನದ ಹಿಂದಿರುವ ಶಾಸನ ಕಲ್ಲನ್ನು ನೋಡಲು ಬಂದಿದ್ವಿ ಎಂದು ಹೇಳಿ, ಶಾಸನದ ಕಡೆ ನಡೆದರು. ಆಗ ಕೂತಿದ್ದವರೆಲ್ಲರೂ ಇವರ ಹಿಂದೆ ಬಂದರು. ಅಲ್ಲಿದ್ದ ಶಾಸನ ಕಲ್ಲಿನ ಸುತ್ತಲೂ ರಾಶಿ ರಾಶಿ ಕಸ (ಗಾಜಿನ ಬಾಟಲುಗಳು, ದೇವರ ಫೋಟೊಗಳು) ತುಂಬಿರುವ ಸ್ಥಿತಿ ನೋಡಿ, ಅಲ್ಲಪ್ಪ ನಿಮ್ಮ ಊರಿನ ಹೆಸರು ಇರೋ ಈ ಶಾಸನದ ಸುತ್ತಲೆಲ್ಲ ಈ ತರಹ ಕಸಗಳನ್ನು ಬಿಸಾಡಿದ್ದೀರಾ ಎಷ್ಟು ಅಮೂಲ್ಯವಾದದ್ದು ಈ ಕಲ್ಲು.

ಮತ್ತೊಬ್ಬ ವ್ಯಕ್ತಿ (2) : ಈ ಕಲ್ಲಿನ ಮೇಲಿನ ಅಕ್ಷರಗಳನ್ನ ಓದಿದರೆ ತಲೆ ಸಿಡಿಯುತ್ತೆ ಅಲ್ವಾ?

ಉದಯ ಕುಮಾರ್ : ಸರಿ ಬಾರಪ್ಪ ಸಿಡಿಯೊ ಹಾಗಿದ್ದರೆ ನನ್ನ ತಲೆ ಸಿಡಿಯುವುದನ್ನು ನೋಡುವಿರಂತೆ ಎಂದು ಹೇಳಿ ಶಾಸನದ ಬಳಿ ಹೋದರು. ಶಾಸನ ಪಾಠದ ಫೋಟೋಕಾಪಿ ತೆಗೆದು ಅಲ್ಲೇ ಇದ್ದ ಸುಮಾರು 10-11 ವರ್ಷದ ಹುಡುಗನನ್ನು ಕರೆದು ಪ್ರತಿಯನ್ನು ಅವನ ಕೈಗೆ ಕೊಟ್ಟು, ಓದು ಎಂದಾಗ ಹುಡುಗ ಓದುತ್ತಿದ್ದಾಗ ಊರಿನ ಹೆಸರಿನ (ಚಿಕ್ಕಬೆಟ್ಟಹಳ್ಳಿ) ಭಾಗವನ್ನು ಕಲ್ಲಿನ ಮೇಲೆ ತೋರಿಸಿದಾಗ ಆ ಸ್ಥಳದಲ್ಲಿ ಇದ್ದಂತವರೆಲ್ಲ ಆಶ್ಚರ್ಯದಿಂದ ನೋಡುತ್ತಿದ್ದರು.[18] ಇದಾದ ನಂತರ ಗ್ರಾಮದವರಾದ ವೆಂಕಟೇಶ್ ಅವರು ಒಂದು ಟೆಂಪೊ, ಎರಡು ಚಿಕ್ಕ ಗಾಡಿಗಳನ್ನು, ಸಲಿಕೆ/ಚಲಿಕೆ, ಪಿಕಾಸಿ, ಗುದ್ದಲಿಗಳನ್ನು ತರಿಸಿ, ಕಸದ ರಾಶಿಗಳನ್ನು ಚೀಲಕ್ಕೆ ಹಾಕಿ, ಮೂಟೆ ಕಟ್ಟಿ ಟೆಂಪೊದಲ್ಲಿ ಹಾಕಿ ಕಳಿಸಿದರು.

ಶಾಸನದ ಕಾಲ

ಶಾಸನವು ಜೂಲಿಯನ್ ಕಾಲಮಾನದ ಪ್ರಕಾರ ಸಾ.ಶ. **1524 ನವೆಂಬರ್ 26** ರ ಕಾಲದ್ದಾಗಿದ್ದು ಅಂದು ಶನಿವಾರವಾಗಿತ್ತು. ಶಾಸನದಲ್ಲಿರುವ ಕಾಲಮಾನ **ತಾರಣ ಸಂವತ್ಸರದ ಮಾರ್ಗಶಿರ ಶು ೧**. ಈ ಶಾಸನದಲ್ಲಿ ಶಕ ವರುಷದ ಸಂಖ್ಯೆ ನೀಡಿಲ್ಲ, ಆದರೆ ಕೃಷ್ಣರಾಯರ ಕಾಲದಲ್ಲಿ ತಾರಣ ಸಂವತ್ಸರ ಎಂದು ಉಲ್ಲೇಖಿಸಿರುವುದರಿಂದ ಇದು ಸಾ.ಶ. 1524ರ ವರ್ಷಕ್ಕೆ ಸರಿ ಹೊಂದುತ್ತದೆ.

ಕಲ್ಲಿನ ಲಕ್ಷಣ

ಈ ಶಾಸನವನ್ನು ಸ್ಥಳೀಯವಾಗಿ ದೊರೆಯುವ ಗ್ರಾನೈಟ್ ಕಲ್ಲನ್ನು ಬಳಸಿ ಕೆತ್ತಲಾಗಿದ್ದು, ಈ ಕಲ್ಲು 170 ಸೆಂ.ಮೀ. ಎತ್ತರ ಮತ್ತು 74 ಸೆಂ.ಮೀ. ಅಗಲವಿದೆ. ಈ ಕಲ್ಲು ಒರಟಾಗಿದ್ದರೂ ಶಿಲ್ಪಿಯು ಕಲ್ಲಿನ ಮುಂಭಾಗವನ್ನು ನಯಗೊಳಿಸಿ ಮೇಲ್ಭಾಗದಲ್ಲಿ ಸೂರ್ಯ - ಚಂದ್ರರ ರೇಖಾಚಿತ್ರ, ಅದರ ಕೆಳಗೆ 18 ಸಾಲುಗಳಲ್ಲಿ ಅಕ್ಷರಗಳನ್ನು ಕೆತ್ತಿದ್ದಾನೆ. ಕಲ್ಲಿನ ಹಿಂಭಾಗವನ್ನು ಯಾವುದೇ ರೀತಿಯಲ್ಲಿ ನಯಗೊಳಿಸದೆ ಹಾಗೆಯೇ ಬಿಟ್ಟಿರುವುದನ್ನು

17 Darshana Ramdev, **Bengaluru buzzed even in 750 AD!**, The Deccan Chronicle Bangalore Edition, 23 Sep 2017, https://www.deccanchronicle.com/nation/current-affairs/230917/bengaluru-buzzed-even-in-750-ad.html

18 Udaya Kumar P L, **Helping villagers understand what is written on the stone**, Facebook, 19 September 2017. https://www.facebook.com/pluday/videos/10155634736767310

ಕಾಣಬಹುದು. ಈ ಶಾಸನ ಕಲ್ಲಿನ ಮೇಲೆ ಶಂಖ ಚಕ್ರದ ರೇಖಾಚಿತ್ರವಿದ್ದು ಇದರ ಬಗ್ಗೆ ಹಾರೋಹಳ್ಳಿ ಶಾಸನ ಕಲ್ಲಿನ ಲಕ್ಷಣ ಭಾಗದಲ್ಲಿ ವಿವರಿಸಲಾಗಿದೆ.

ಶಾಸನದ ಸಂರಕ್ಷಣೆ

ಭೌತಿಕ ಸಂರಕ್ಷಣೆ

ಈ ಶಾಸನವನ್ನು ಬಿ.ಎಲ್.ರೈಸ್ ಅವರು ಸಾ.ಶ. 1905 ರಲ್ಲಿ ದಾಖಲಿಸಿದಾಗ ಚಿಕ್ಕಬೆಟ್ಟಹಳ್ಳಿ ಗ್ರಾಮದ ಹನುಮಂತ ದೇವಾಲಯದ ಬಲಗಡೆ ನೆಟ್ಟಿರುವ ಕಲ್ಲು ಎಂದಿದೆ. ಆದರೆ ಈ ಕಲ್ಲು ನಂತರದ ದಿನಗಳಲ್ಲಿ ದೇವಾಲಯದ ಹಿಂದೆ ಗುಂಡಿಯಲ್ಲಿ ಬಿದ್ದಿತ್ತು. ಇದನ್ನು ಸುಮಾರು 20 ವರ್ಷದ ಹಿಂದೆ ಈಗಿರುವ ದೇವಾಲಯದ ಪಕ್ಕದ ಬಲಗಡೆ ನೆಡಲಾಗಿದೆ ಎಂದು ಸ್ಥಳೀಯರು ಹೇಳುತ್ತಾರೆ. ಪ್ರಸ್ತುತ ಈ ಶಾಸನ ಕಲ್ಲನ್ನು ಉತ್ತಮ ರೀತಿಯಲ್ಲಿ ಸಂರಕ್ಷಿಸಿಕೊಂಡಿದ್ದಾರೆ.

ಈ ಬಡಾವಣೆಯಲ್ಲಿರುವ ಶಾಸನವನ್ನು ಸಂರಕ್ಷಣೆ ಮಾಡಿದರೂ ಇಲ್ಲಿ ಯಾವುದೇ ಮಾಹಿತಿ ಫಲಕ ಹಾಕಿಲ್ಲ. ಮುಂದಿನ ದಿನಗಳಲ್ಲಿ ಮಾಹಿತಿ ಫಲಕ ಹಾಕುವುದು ಅತ್ಯವಶ್ಯಕ.

ಡಿಜಿಟಲ್ ಸಂರಕ್ಷಣೆ

ಶಾಸನಗಳನ್ನು ಭೌತಿಕವಾಗಿ ಸಂರಕ್ಷಣೆ ಮಾಡಿದರೂ ಹವಾಮಾನದ ವೈಪರಿತ್ಯದಿಂದಾಗಿ ಲಿಪಿಗಳು ಸವೆದು ಹೋಗುವ ಸಾಧ್ಯತೆ ಹೆಚ್ಚಿರುತ್ತದೆ. ಶಾಶ್ವತವಾಗಿ ಇವುಗಳನ್ನು ಸಂರಕ್ಷಿಸಲು ಅತ್ಯಾಧುನಿಕ ತಂತ್ರಜ್ಞಾನದ ಸಹಾಯದಿಂದ ಅವುಗಳನ್ನು ಸ್ಕ್ಯಾನ್ ಮಾಡಿ ಸಂರಕ್ಷಿಸುವ ಅಗತ್ಯವಿದೆ. ಇದರಿಂದ ಇವು ಶಾಶ್ವತವಾಗಿ ಉಳಿಯುತ್ತವೆ. 3ಡಿ ಸ್ಕ್ಯಾನ್ ಮಾಡಿದ ದಿನ ಶಾಸನಕಲ್ಲು ಇದ್ದ ರೀತಿಯಲ್ಲಿಯೇ ಅದನ್ನು ಡಿಜಿಟಲ್ ಮಾದರಿಯಲ್ಲಿ ಸಂರಕ್ಷಿಸುವುದರಿಂದ ಅದು ಸಾವಿರಾರು ವರ್ಷಗಳು ಕಳೆದರೂ ಹಾಗೆಯೇ ಉಳಿಯುತ್ತದೆ. ಅವಶ್ಯವಿದ್ದಲ್ಲಿ ಅದರ ಪ್ರತಿಗಳನ್ನು ಯಥಾವತ್ತಾಗಿ ಮರ, ಕಲ್ಲು ಹಾಗೂ ಲೋಹಗಳ ಮೇಲೆ ಅಚ್ಚು ಹಾಕಿಸಿಕೊಳ್ಳಬಹುದು.

ಚಿಕ್ಕಬೆಟ್ಟಹಳ್ಳಿಯ ಆಂಜನೇಯ ದೇವಾಲಯದ ಬಲಗಡೆಯಿದ್ದ ಈ ಶಾಸನ ಕಲ್ಲು ಸುತ್ತಲೂ ಕಸದಿಂದ ಮುಚ್ಚಿ ಹೋಗಿತ್ತು. ನಂತರ ಸಿಂಗಾಪುರದ ಎಸ್.ವಿ. ಶ್ರೀನಿವಾಸ್ ಮತ್ತಿತರರ ಸಹಕಾರದಿಂದ ಶಾಸನ ಕಲ್ಲಿನ ಸುತ್ತಮುತ್ತ ಸ್ವಚ್ಛ ಮಾಡಲಾಯಿತು. **ಇನ್ಸ್ಕ್ರಿಪ್ಷನ್ ಸ್ಟೋನ್ಸ್ ಆಫ್ ಬೆಂಗಳೂರು** ಶಾಸನಗಳ 3ಡಿ ಸ್ಕ್ಯಾನಿಂಗ್ ತಂಡವು ದಿನಾಂಕ 21-ಸೆಪ್ಟೆಂಬರ್-2020 ಚಿಕ್ಕಬೆಟ್ಟಹಳ್ಳಿಯಲ್ಲಿರುವ ಶಾಸನವನ್ನು 0.05 ಮಿಲಿ ಮೀಟರ್ ಹೈ-ರೆಸಲೂಷನ್ ಅಕ್ಯೂರಸಿಯಲ್ಲಿ ಡಿಜಿಟಲ್ ಸಂರಕ್ಷಣೆ ಮಾಡಿದೆ. ನಂತರ ಕಛೇರಿಯಲ್ಲಿ ಆರ್ಟೆಕ್ ಸ್ಟೂಡಿಯೋ ತಂತ್ರಾಂಶದ ಸಹಾಯದಿಂದ ಅದರ 3ಡಿ ಮಾಡಲ್ ಅನ್ನು ತಯಾರಿಸಲಾಗಿದ್ದು, ಈ ಮಾಡಲ್ 4 ಕೋಟಿ 36 ಲಕ್ಷ ಪಾಲಿಗನ್ಸ್ ಗಳನ್ನು ಹೊಂದಿದೆ. ಈ ಡಿಜಿಟಲ್ ಮಾಡೆಲ್ ಅನ್ನು ಮೆಷ್ ಲ್ಯಾಬ್ ತಂತ್ರಾಂಶದ ಸಹಾಯದಿಂದ ದಿ ಮಿಥಿಕ್ ಸೊಸೈಟಿ ಶಾಸನಗಳ 3ಡಿ ಡಿಜಿಟಲ್ ಸಂರಕ್ಷಣಾ ತಂಡವು ಶಾಸನವನ್ನು ಓದುವುದರ ಮೂಲಕ ಅಧ್ಯಯನ ಮಾಡಿದೆ. 3ಡಿ ಡಿಜಿಟಲ್ ತಂತ್ರಜ್ಞಾನದಿಂದ ತೆಗೆದ ಚಿತ್ರಗಳನ್ನು ಶಾಸನ ತಜ್ಞರಾದ ಪ್ರೊ.ಕೆ.ಆರ್.ನರಸಿಂಹನ್ ಅವರು ಮರು ಓದುವ ಮೂಲಕ ಶಾಸನ ಪಾಠವನ್ನು ಪರಿಷ್ಕರಿಸಿದ್ದಾರೆ. ಈ ಶಾಸನವನ್ನು ಮೆಷ್ ಲ್ಯಾಬ್ ತಂತ್ರಾಂಶದ ಸಹಾಯದಿಂದ ತೆಗೆದ ಚಿತ್ರದಲ್ಲಿರುವ ಶಾಸನದ ಪಠ್ಯವನ್ನು ನಮ್ಮ ತಂಡವು ಮರು ಓದಿದಾಗ ಮೂಲ ಪಾಠ ಮತ್ತು ಹೊಸ ಪಾಠದಲ್ಲಿ ಅಲ್ಪಪ್ರಾಣ, ಮಹಾಪ್ರಾಣ ಮತ್ತು ಒತ್ತಕ್ಷರಗಳಲ್ಲಿನ ಬದಲಾವಣೆಗಳನ್ನು ಹೊರತುಪಡಿಸಿದರೆ ಶಾಸನದ ಮೂಲ ಅರ್ಥದಲ್ಲಿ ಯಾವುದೇ ವ್ಯತ್ಯಾಸವಾಗುವುದಿಲ್ಲ.



ಚಿಕ್ಕಬೆಟ್ಟಹಳ್ಳಿಯ ಆಂಜನೇಯ ದೇವಾಲಯದ ಆವರಣದಲ್ಲಿರುವ 1524ರ ಸಿಂಗಪ್ಪನಾಯಕನ ರಾಮಾನುಜಕೂಟದ ಶಿಲಾ ಶಾಸನ



3ಡಿ ಸ್ಕ್ಯಾನಿಂಗ್ ಮೂಲಕ ಪಡೆದ ಸಾ.ಶ. 1524ರ ಚಿಕ್ಕಬೆಟ್ಟಹಳ್ಳಿಯ ಸಿಂಗಪ್ಪನಾಯಕನ ರಾಮಾನುಜಕೂಟ ಶಾಸನದ ಡಿಜಿಟಲ್ ಚಿತ್ರ

ಶಾಸನ ಸಾರಾಂಶ

ಸಿಂಗಪ್ಪನಾಯಕರು ಸಿಂಗಾಪುರದ ತಿರುಮಲೆ ದೇವರ ಅಮೃತಪಡಿ ನೈವೇದ್ಯಕ್ಕೆ ಹಾಗೂ ರಾಮಾನುಜಕೂಟದ ಕಾರ್ಯಗಳಿಗಾಗಿ ಹಿರಿಅಯ್ಯ ವರದರಾಜಯವನರಿಗೆ ಚಿಕ್ಕಬೆಟ್ಟಹಳ್ಳಿ ಗ್ರಾಮವನ್ನು ದಾನ ನೀಡಿರುವ ಉಲ್ಲೇಖವಿದೆ. ಈ ಸಮಯದಲ್ಲಿ ಕರ್ನಾಟಕ (ವಿಜಯನಗರ) ಸಾಮ್ರಾಜ್ಯದ ಕೃಷ್ಣರಾಯರು (ಸಾ.ಶ. 1509-1529) ಆಳ್ವಿಕೆ ಮಾಡುತ್ತಿರುತ್ತಾರೆ.[19]

ಶಾಸನದ ಪಾಠ

	ಎಪಿಗ್ರಾಫಿಯ ಕರ್ನಾಟಿಕ ಸಂಪುಟ - 09. ಬೆಂಗಳೂರು ತಾಲ್ಲೂಕು, ಶಾಸನ ಸಂಖ್ಯೆ - 19	ನಮ್ಮ ತಂಡದ ಪಾಠ (ಮರು ಓದು)
1.[20]	ಶುಭಮಸ್ತು	ಶುಭಮಸ್ತು
2.	ತಾರಣ ಸಂವತ್ಸರದ ಮಾರ್ಗಸಿ	ತಾರಣ ಸಂವತ್ಸರದ ಮಾರ್ಗ**ಷಿ**
3.	ರ ಶು೧ಲು ಕ್ರಿಷ್ಣರಾಯರ ಕಾಲದಲಿ	ರ ಶು ೧ಲು ಕ್ರಿಷ್ಣರಾಯರ ಕಾಲದಲಿ
4.	ಸಿಂಗಪನಾಯಕರು ಸಿಂಗಾಪುರದ ಲಿರು	ಸಿಂಗಪನಾಯಕರು ಸಿಂಗಾಪುರದ **ತಿ**ರು
5.	ವಂತ ದೇವರ ಅಮೃತಪಡಿಯ ನೈವೇದ್ಯಕ್ಕೆ	**ಮಲೆ** ದೆವರ ಅ**ಮ್ರು**ತಪಡಿಯ ನೈ**ವೆ**ದ್ಯಕ್ಕೆ
6.	ರಾಮಾನುಜಕೂಟಕ್ಕೆ ಪಟ್ಟಣ ತಿಂಮಣಯ್ಯ	ರಾಮಾನುಜಕೂ**ಟ್ಟ**ಕ್ಕೆ ಪಟ್ಟಣ ತಿಂ**ಮ್ಮ**ಣಯ್ಯ
7.	ನವರ ಮಕ್ಕಳು ಹಿರಿಆಯ ವರದರಾಜ	ನವರ ಮಕ್ಕಳು ಹಿರಿಆಯ ವರದರಾಜ
8.	ಯನವರಿಗೆ ಚಿಗಬೆಶಹಳ್ಳಿಯನು ಬಿ	ಯನವರಿಗೆ ಚಿಗಬೆಶಹ**ಳಿ**ಯನು ಬಿ
9.	ಟ್ಟೆವಾಗಿ ಯೀ ಧರ್ಮ್ಮಕ್ಕೆ ಆರು ಆಳಿ	**ಟೆವ**ಗಿ ಯಿ **ದ್ರಮ**ಕ್ಕೆ ಆರು ಆಳಿ
10.	ಪಿದವರು ಗಂಗೆಯ ತಡಿ	ಪಿದವರು ಗಂಗೆಯ ತಡಿ
11.	ಯಲಿ ಕಪಿಲೆಯ ವಧಿಸಿದ ಪಾಪ	ಯ**ಲ್ಲಿ** ಕಪಿಲೆಯ ವ**ದಿ**ಸಿದ **ಪಪ**
12.	ಕ್ಕೆ ಹೋಹರು ಯೀ ತಿರುವೆಂಗಳ .	ಕ್ಕೆ **ಹೊ**ಹರು **ಯಿ** ತಿರುವೆಂಗಳ**ನಾ**
13..	. . . ಯೀ ಧರ್ಮಕ್ಕೆ ತಪ್ಪಿದವರು	**ತ ದಾನದ ಯಿ ದ್ರಮ**ಕ್ಕೆ ತ**ಪಿದೊ**ರು
14.	ತಂಮ ತಂದೆತಾಯಿಕಾಶಿಯ	**ಥಂ**ಮ ತಂದೆತಾ**ಯ** ಕಾಶಿಯ
15.	ಲಿ ಕೊಂದವರು | |	ಲಿ ಕೊಂದವರು

ಶಾಸನದ ಅನುವಾದ

ಶುಭಮಸ್ತು - ಶಾಸನದ ಆರಂಭಕ್ಕೆ ಶುಭಸೂಚಕ, ಎಲ್ಲರಿಗೂ ಒಳ್ಳೆಯದಾಗಲಿ ಎಂಬ ಪದ (ಶುಭಂ ಅಸ್ತು - ಸಂಸ್ಕೃತ ಪದ)

ತಾರಣ ಸಂವತ್ಸರದ ಮಾರ್ಗಸಿರ ಶು ೧ ಲು - ಶಾಸನ ಹಾಕಿಸಿರುವ ವರ್ಷ, ಮಾಸ, ದಿನವಾಗಿದೆ.

ತಾರಣ ಸಂವತ್ಸರ - ಶಾಸನ ಹಾಕಿಸಿರುವ ವರ್ಷ-ಸಂವತ್ಸರ

ಮಾರ್ಗಷಿರ - ಶಾಸನ ಹಾಕಿಸಿರುವ ತಿಂಗಳು ಅಂದರೆ ಇಂದಿನ ನವಂಬರ್-ಡಿಸೆಂಬರ್ ತಿಂಗಳು.

ಶು ೧ ಲು - ಶು ಎಂದರೆ ಶುಕ್ಲ(ಶುದ್ಧ) ಪಕ್ಷವನ್ನು ಸೂಚಿಸುತ್ತದೆ ಹಾಗೂ ಒಂದು ಎಂದರೆ ಶುಕ್ಲ ಪಕ್ಷದ ಮೊದಲನೆ (ಪ್ರಥಮ) ತಿಥಿ.[21]

ಕ್ರಿಷ್ಣರಾಯರ - ಶಾಸನ ಹಾಕಿಸುವ ಸಮಯದಲ್ಲಿ ಆಳ್ವಿಕೆ ಮಾಡುತ್ತಿದ್ದ ಕರ್ನಾಟಕ ಸಾಮ್ರಾಜ್ಯದ ಅರಸ. ಕ್ರಿಷ್ಣರಾಯ

---

19 Shrinivas Ritti, B R Gopal (editor), **Inscriptions of the Vijayanagara Rulers, Volume II,** (Bangalore: ICHR), Page iv (Introduction), 2008

20 ಮೇಲಿನ ಶಾಸನ ಪಾಠದ ಅಂಕಿ-ಸಂಖ್ಯೆಗಳು ಶಾಸನದಲ್ಲಿರುವುದಿಲ್ಲ ಓದಲು ಅನುಕೂಲವಾಗಲೆಂದು 1,2,3,4 .....15 ಹೀಗೆ ಸಾಲುಗಳಿಗೆ ಸಂಖ್ಯೆ ಕೊಡಲಾಗಿದೆ. ಹಾಗೂ ಶಾಸನದಲ್ಲಿ ಪದಗಳಿಗೆ ಯಾವುದೇ ಜಾಗ (ಸ್ಪೇಸ್) ಬಿಟ್ಟಿಲ್ಲ. ಓದುವ ಅನುಕೂಲಕ್ಕಾಗಿ ಪದಗಳಿಗೆ ತಕ್ಕಂತೆ ಜಾಗ ಬಿಟ್ಟು ಬರೆಯಲಾಗಿದೆ. ಚಿಕ್ಕಬೆಟ್ಟಹಳ್ಳಿ ಗ್ರಾಮದ ಶಾಸನವನ್ನು 3ಡಿ ಸ್ಕ್ಯಾನಿಂಗ್ ಮುಖಾಂತರದ ಮರು ಓದಿನಿಂದಾಗಿ 30 ವ್ಯತ್ಯಾಸಗಳನ್ನು ಗುರುತಿಸಲಾಗಿದೆ. ಆದರೆ ಶಾಸನದ ಪಾಠ ಮತ್ತು ಅರ್ಥದಲ್ಲಿ ಯಾವುದೇ ವ್ಯತ್ಯಾಸ ಆಗುವುದಿಲ್ಲ. ಕೆಲವು ಪದಗಳಲ್ಲಿ ಅಲ್ಪಪ್ರಾಣದ ಬದಲಾಗಿ ಮಹಾಪ್ರಾಣವನ್ನು, ಒತ್ತಕ್ಷರದ ಬದಲು ಅನುಸ್ವಾರವನ್ನು (0) ಬಳಸಲಾಗಿದೆ. ಮೂಲ ಪಾಠದಲ್ಲಿ ವ್ಯತ್ಯಾಸವಿರುವುದನ್ನು ದಪ್ಪ (BOLD) ಅಕ್ಷರಗಳಲ್ಲಿ ನೀಡಲಾಗಿದೆ.

21 ಒಂದು ಮಾಸದಲ್ಲಿ ಎರಡು ಪಕ್ಷಗಳಿದ್ದು ಅಂದರೆ ಶುಕ್ಲ/ಶುದ್ಧ ಪಕ್ಷ ಎಂದರೆ ಅಮಾವಾಸ್ಯೆಯಿಂದ ಪೂರ್ಣಿಮೆಯವರೆಗೆ, ಬಹುಳ/ಕೃಷ್ಣ ಪಕ್ಷ ಎಂದರೆ ಪೂರ್ಣಿಮೆಯಿಂದ ಅಮಾವಾಸ್ಯೆಯವರೆಗೆ.


ಎಂಬುದು ವಿಜಯನಗರ ಸಾಮ್ರಾಜ್ಯದ ಪ್ರಸಿದ್ಧ ಅರಸ ಕೃಷ್ಣದೇವರಾಯನ ಹೆಸರಾಗಿದೆ. ಕರ್ನಾಟಕ ಸಾಮ್ರಾಜ್ಯವು ವಿಜಯನಗರ ಸಾಮ್ರಾಜ್ಯವೆಂದು ಪ್ರಸಿದ್ಧವಾಗಿದೆ.[22]

ಕಾಲದಲಿ - ಅಧಿಕಾರಾವಧಿಯಲ್ಲಿ

ಸಿಂಗಪನಾಯಕರು - ಸಿಂಗಾಪುರದ ಅಧಿಕಾರಿ. ಇವರ ಹೆಸರಲ್ಲಿ ಈ ಗ್ರಾಮ ನಿರ್ಮಾಣವಾಗಿರಬಹುದು.

ಸಿಂಗಾಪುರದ - ಈ ಲೇಖನದ ಕೇಂದ್ರಬಿಂದುವಾಗಿರುವ ಗ್ರಾಮವೇ ಇಂದಿನ ಸಿಂಗಾಪುರ ಬಡಾವಣೆ.

ತಿರುಮಲೆದೆವರ - ಸಿಂಗಾಪುರ ಬಡಾವಣೆಯಲ್ಲಿರುವ ವರದರಾಜಸ್ವಾಮಿ ದೇವರನ್ನು ತಿರುಮಲೆ ದೇವರು ಎಂದು ಶಾಸನ ಕರೆದಿದೆ. ತಿರು ಎಂದರೆ ಪವಿತ್ರ, ಶ್ರೀ. ಮಲೆ ಎಂದರೆ ಬೆಟ್ಟ. ವೆಂಗಳನಾಥ, ಶ್ರೀನಿವಾಸ, ವೆಂಕಟೇಶ್ವರ ದೇವರು ನೆಲಸಿದ ಗುಡ್ಡವನ್ನು ಪವಿತ್ರ ಬೆಟ್ಟ ಎಂದು ಕರೆಯುವರು.



ಚಿಕ್ಕಬೆಟ್ಟಹಳ್ಳಿ ಸಾ. ಶ. 1524ರ ಶಾಸನದಲ್ಲಿ "ತಿರು"

ಅಮ್ರುತಪಡಿಯ ನೈವೆದ್ಯಕ್ಕೆ - ದೇವರಿಗೆ ಅರ್ಪಿಸುವ ವಿಶೇಷವಾಗಿ ತಯಾರಾದ ಆಹಾರ ಪದಾರ್ಥ.



ಚಿಕ್ಕಬೆಟ್ಟಹಳ್ಳಿ ಸಾ. ಶ. 1524ರ ಶಾಸನದಲ್ಲಿ "ಮಲೆದೆವರ ಅಮ್ರುತಪಡಿ"

ರಾಮಾನುಜಕೂಟ್ಟಕ್ಕೆ - ಶ್ರೀವೈಷ್ಣವ ದೇವಾಲಯಗಳು ಮತ್ತು ಮಠಗಳಿಗೆ ಹೊಂದಿಕೊಂಡಂತೆ ರಾಮಾನುಜ ಕೂಟಗಳಿರುತ್ತಿದ್ದವು. ಶ್ರೀವೈಷ್ಣವರು ತಂಗಲು ಹಾಗೂ ಅವರಿಗೆ ಆಹಾರ ಒದಗಿಸಲು ವಸತಿ ಮತ್ತು ಪ್ರಸಾದನಿಲಯಗಳಾಗಿದ್ದವು. ಒಂದು ರೀತಿಯಲ್ಲಿ ಛತ್ರಗಳ ರೀತಿಯವು. **(ರಾಮಾನುಜಕೂಟದ ಬಗ್ಗೆ ಮುಂದೆ ವಿವರಿಸಲಾಗಿದೆ)**



ಚಿಕ್ಕಬೆಟ್ಟಹಳ್ಳಿ ಸಾ. ಶ. 1524ರ ಶಾಸನದಲ್ಲಿ "ರಾಮಾನುಜಕೂಟ್ಟ"

ಪಟ್ಟಣ ತಿಂಮ್ಮಣಯ್ಯನವರ ಮಕ್ಕಳು - ದಾನ ಪಡೆದವರಾದ ಹಿರಿಅಯ್ಯ ವರದರಾಜಯನವರ ತಂದೆ. ನಮ್ಮ ಸಂಸ್ಕೃತಿಯಲ್ಲಿ ವ್ಯಕ್ತಿಯನ್ನು ಗುರುತಿಸುವಾಗ ಹೆಸರಿನ ಜೊತೆ ತಂದೆಯ ಹೆಸರು/ತಾತನ ಹೆಸರು ಜೋಡಿಸುವುದು ಸಂಪ್ರದಾಯ.

ಹಿರಿಆಯ ವರದರಾಜಯನವರಿಗೆ ದಾನ ಪಡೆದವರು ಮತ್ತು ರಾಮಾನುಜಕೂಟ ನಡೆಸುವವರು.

ಚಿಗಬೆಠಹಳಿಯನು ಬಿಟೆವಗಿ - ಇಂದಿನ ಚಿಕ್ಕಬೆಟ್ಟಹಳ್ಳಿಯನ್ನು ದಾನವಾಗಿ ನೀಡಿರುವುದು.



ಚಿಕ್ಕಬೆಟ್ಟಹಳ್ಳಿ ಸಾ. ಶ. 1524ರ ಶಾಸನದಲ್ಲಿ "ಚಿಗಬೆಠಹಳಿ"

ಯಿ ದ್ರಮಕ್ಕೆ ಆರು ಆಳಿಪಿದವರು ಗಂಗೆಯ ತಡಿಯಲ್ಲಿ ಕಪಿಲೆಯ ವದಿಸಿದ ಪಪಕ್ಕೆ ಹೋಹರು - ದಾನವನ್ನು ಕೆಡಿಸಿದವರಿಗೆ ಶಿಕ್ಷೆ. ಗಂಗೆ ತೀರದಲ್ಲಿ ಹಸುವನ್ನು ಕೊಂದ ಪಾಪ. ಗರುಡ ಪುರಾಣದಲ್ಲಿ ಹೇಳಿರುವಂತೆ ಈ ಪಾಪ ಮಾಡಿದವರಿಗೆ ಮುಂದಿನ ಜನ್ಮದಲ್ಲಿ ಗೂನು/ಬಾಗಿದ ಬೆನ್ನಿನವನಾಗಿ ಹುಟ್ಟುವ ಶಿಕ್ಷೆಯನ್ನು ಹೇಳಿದೆ.

ಯಿ ತಿರುವೆಂಗಳನಾತ ದಾನದ - ಇಂದಿನ ಸಿಂಗಾಪುರದ ವರದರಾಜಸ್ವಾಮಿ ದೇವರಿಗೆ ಈ ಶಾಸನದ ಮೂಲಕ ಕೊಟ್ಟ ದಾನವಾಗಿದೆ.

ಯಿ ದ್ರಮಕ್ಕೆ ತಪಿದೊರು ಥಂಮ ತಂದೆತಾಯ ಕಾಶಿಯಲಿ ಕೊಂದವರು - ದಾನವನ್ನು ಕೆಡಿಸಿದವರಿಗೆ ಶಿಕ್ಷೆ ಕಾಶಿಯಲ್ಲಿ ತಂದೆತಾಯಿಯನ್ನು ಕೊಂದ ಪಾಪಕ್ಕೆ ಗುರಿಯಾಗುವರು.

22 Shrinivas Ritti, B R Gopal (editor), **Inscriptions of the Vijayanagara Rulers, Volume II**, (Bangalore: ICHR), Page iv (Introduction), 2008


ಶಾಸನದ ಭಾಷೆ

ಈ ಶಾಸನವನ್ನು ತೀರಾ ಸಾಮಾನ್ಯರು ಅರ್ಥೈಸಿಕೊಳ್ಳಬಹುದಾದ ಆಡುಭಾಷೆಯಲ್ಲಿ ಬರೆಯಲಾಗಿದೆ. **ಉದಾ - ಕೃಷ್ಣ ಎಂಬುದು ಕ್ರಿಷ್ಣ, ತಪ್ಪಿದವರು-ತಪ್ಪಿದೋರು, ಹಿರಿಆಯ-ಹಿರಿಯಅಯ್ಯ** ಇತ್ಯಾದಿಗಳು.

ಶಾಸನದ ಅಕ್ಷರಗಳು

1ನೇ ಸಾಲು

ಶು	ಭ	ಮ	ಸ್ತು



(ಇತರೆ ಸಾಲುಗಳ ಶಾಸನ ಲಿಪಿಗಳನ್ನು ಅನುಬಂಧದಲ್ಲಿ ನೀಡಲಾಗಿದೆ.)

ಶಾಸನದ ಮಹತ್ವ

i. ಸಾ.ಶ. 1524 ರಲ್ಲಿ **ಸಿಂಗಾಪುರ ಮತ್ತು ಚಿಕ್ಕಬೆಟ್ಟಹಳ್ಳಿ ಗ್ರಾಮಗಳು ಶಾಸನೋಕ್ತ ಗ್ರಾಮಗಳಾಗಿ ಕಂಡುಬಂದಿವೆ.**

ii. ಈ ಶಾಸನದಲ್ಲಿ ಉಲ್ಲೇಖವಾಗಿರುವ ಸಿಂಗಾಪುರ ಗ್ರಾಮದ **ತಿರುಮಲೆ ದೇವರು** ಅಂದರೆ ಇಂದಿನ **ವರದರಾಜಸ್ವಾಮಿ ದೇವಾಲಯವು ಸಾ.ಶ. 1524 ರಲ್ಲಿಯೇ ಅಸ್ತಿತ್ವದಲ್ಲಿತ್ತು** ಎಂದು ತಿಳಿದು ಬರುತ್ತದೆ, ನಂತರ ಸಾ.ಶ. 1530ರ ಹಾರೋಹಳ್ಳಿ ಶಾಸನದಲ್ಲಿ ತಿರುವೆಂಗಳನಾಥ ಎಂದು ಕರೆಯಲ್ಪಟ್ಟಿದೆ.

iii. ಸಿಂಗಾಪುರ ಗ್ರಾಮವು **ಶ್ರೀವೈಷ್ಣವರ ಕೇಂದ್ರವಾಗಿತ್ತು.**

iv. ಈ ಶಾಸನವು ಸಿಂಗಾಪುರದ ಬೆಟ್ಟವನ್ನು **ತಿರುಮಲೆ ಎಂದು ಕರೆದಿರುವುದು ವಿಶೇಷ.** ತಿರುವೆಂಗಳನಾಥ ದೇವಾಲಯದಲ್ಲಿ ರಾಮಾನುಜಕೂಟವಿದ್ದು ಇದನ್ನು ನಡೆಸುತ್ತಿದ್ದವರು ಪಟ್ಟಣ ತಿಂಮ್ಮಣಯ್ಯನವರ ಮಕ್ಕಳಾದ ಹಿರಿಯಯ್ಯ ವರದರಾಜಯನವರಾಗಿದ್ದರು. ಅದರ ಕಾರ್ಯಗಳಿಗಾಗಿ ಚಿಕ್ಕಬೆಟ್ಟಹಳ್ಳಿ ಗ್ರಾಮವನ್ನೇ ಸರ್ವಮಾನ್ಯವಾಗಿ ದಾನ ನೀಡಿರುವುದನ್ನು ಕಾಣಬಹುದು. ಸರ್ವಮಾನ್ಯವೆಂದರೆ ಎಲ್ಲ ರೀತಿಯ ತೆರಿಗೆಗಳನ್ನು ಸದಾ ಕಾಲ ಬಿಟ್ಟು ಕೊಡುವುದು.

v. ದೇವಸ್ಥಾನಗಳನ್ನು ಕಟ್ಟಿಸಿದರೆ ಸಾಲದು, ಅದು ಸರ್ವಕಾಲದಲ್ಲಿಯೂ ನಡೆಯುತ್ತಾ ಬೆಳವಣಿಗೆ ಯಾಗಬೇಕಾಗುತ್ತದೆ. ಅದು ಕೇವಲ ಭಕ್ತರಿಂದ ಬರುವ ಕಾಣಿಕೆಯನ್ನು ಅವಲಂಬಿಸಿ ಇರಬಾರದೆಂದು ದೇವಾಲಯವನ್ನು ಕಟ್ಟಿಸಿದ ವ್ಯಕ್ತಿಯೇ ಸಮೃದ್ಧವಾಗಿ ದಾನಗಳನ್ನು ನೀಡುತ್ತಿದ್ದನು. ಈ ಶಾಸನದಲ್ಲಿ ದೇವಾಲಯಕ್ಕೆ ಇಡೀ ಗ್ರಾಮವನ್ನು ದಾನ ನೀಡಿರುವುದು ವಿಶೇಷವಾಗಿದೆ. ಸಾಮಾನ್ಯವಾಗಿ ಗ್ರಾಮವನ್ನು ಸಂಪೂರ್ಣವಾಗಿ ದಾನ ನೀಡುವ ಅಧಿಕಾರ ರಾಜನಿಗೆ ಮಾತ್ರವೇ ಇರುತ್ತಿತ್ತು. ಕೆಲವೊಮ್ಮೆ ರಾಜನಿಂದ ಹಲವು ಗ್ರಾಮಗಳ ಅಧಿಕಾರವನ್ನು ಪಡೆದ ನಾಯಕ/ಅಧಿಕಾರಿಯು ಸಹ ತಮಗೆ ಬಂದ ಗ್ರಾಮಗಳನ್ನು ದಾನ ನೀಡಬಹುದಾಗಿತ್ತು. ಹೀಗೆ ದೇವಾಲಯಗಳಿಗೆ ಇಡೀ ಗ್ರಾಮವನ್ನು ದಾನ ನೀಡಿದಾಗ ಅಲ್ಲಿನ ತೆರಿಗೆಯ ಜೊತೆಗೆ ಭೂಮಿಯು ಸಹ ಸೇರುತ್ತಿತ್ತು. ಇಂತಹ ಭೂಮಿಯನ್ನು ದೇವಾಲಯವು ಗುತ್ತಿಗೆ ಆಧಾರದ ಮೇಲೆ ಉಳುಮೆ ಮಾಡುವವರಿಗೆ ನೀಡಿ ವಾರ್ಷಿಕವಾಗಿ ಇಂತಿಷ್ಟು ಹಣ ಅಥವಾ ಧಾನ್ಯಗಳನ್ನು ಪಡೆಯುತ್ತಿತ್ತು. ಹಣವನ್ನು ನಿತ್ಯ ಖರ್ಚುಗಳಿಗೆ ಬಳಸಿಕೊಂಡರೆ, ಧಾನ್ಯಗಳನ್ನು ದಾಸೋಹ, ಬಿತ್ತನೆ ಬೀಜ ನೀಡುವುದು ಜೊತೆಗೆ ಹೆಚ್ಚಿನ ಧಾನ್ಯಗಳನ್ನು ಮಾರಿ ಹಣ ಪಡೆದು ದೇವಾಲಯದ ಖರ್ಚುವೆಚ್ಚಗಳಿಗೆ ಬಳಸಿಕೊಳ್ಳುವುದನ್ನು ಮಾಡುತ್ತಿತ್ತು, ಇದರಿಂದ ದೇವಾಲಯಗಳು ಕೇವಲ ಧಾರ್ಮಿಕ ಮಾತ್ರವಲ್ಲದೆ, ಸಾಮಾಜಿಕ ಸಂಸ್ಥೆಯೂ ಸಹ ಆಗಿರುವುದರಿಂದ ಸಮಾಜದ ಮೇಲೆ ನೇರ ಪರಿಣಾಮವನ್ನು ಬೀರುತ್ತಿದ್ದವು ಎಂದು ಹೇಳಬಹುದು. ಇಲ್ಲಿ ಸಿಂಗಪ್ಪನಾಯಕ ತಿರುವೆಂಗಳನಾಥ ದೇವರಿಗೆ ಚಿಕ್ಕಬೆಟ್ಟಹಳ್ಳಿ ಗ್ರಾಮವನ್ನು ಸರ್ವಮಾನ್ಯವಾಗಿ ದಾನ ನೀಡಿರುವುದನ್ನು ಗಮನಿಸಿದಾಗ, **ಇವನೇ ಈ ದೇವಾಲಯದ ನಿರ್ಮಾತೃ ಹಾಗೂ ಸುಕನಾಸಿಯ ಬಳಿ ಇರುವ ವ್ಯಕ್ತಿಯ ಶಿಲ್ಪ ಇವನದೇ ಎಂದು ಊಹಿಸಬಹುದು.**

vi. ಈ ಸಮಯದಲ್ಲಿ ಕರ್ನಾಟಕ ಸಾಮ್ರಾಜ್ಯದ (ವಿಜಯನಗರ ಸಾಮ್ರಾಜ್ಯ) ಅರಸ ಕೃಷ್ಣರಾಯರು ಅರಸನಾಗಿದ್ದನು.[23]

vii. ಶಾಸನದ ಕೊನೆಯ ಆರು ಸಾಲುಗಳು ಶಾಪಾಶಯ ವೆಂದು ಕರೆಯಲ್ಪಟ್ಟಿದ್ದು, ಕೊಟ್ಟ ದಾನವನ್ನು ಕೆಡಿಸಿ ದವರಿಗೆ ಆಗುವ ತೊಂದರೆಯನ್ನು ಸೂಚಿಸಿದೆ. ಅಂದರೆ ಇದು ಕಪಿಲೆಯ (ಗೋವು) ಕೊಂದ ಹಾಗೂ ತಂದೆ ತಾಯಿಯನ್ನು ಕಾಶಿಯಲ್ಲಿ (ಗಂಗಾನದಿ ತೀರ) ಕೊಂದ ಮಹಾಪಾಪ ಬರುತ್ತದೆ ಎಂದು ಹೇಳಿರುವರು.

viii. ಶಾಸನ ಪಠ್ಯದ ಹಿಂದಿನ ಓದಿನಲ್ಲಿ **ಸಿಂಗಾಪುರದಲ್ಲಿರುವಂತ** ಎಂದಿದ್ದು, ಆದರೆ **ಮರು ಓದಿನಿಂದಾಗಿ ಅದು ಸಿಂಗಾಪುರದ ತಿರುಮಲೆ ದೇವರ ಎಂದು ಸ್ಪಷ್ಟವಾಗಿ ಅಕ್ಷರಗಳಿರುವುದನ್ನು ಗುರುತಿಸಲಾಗಿದೆ.**


23 Shrinivas Ritti, B R Gopal (editor), **Inscriptions of the Vijayanagara Rulers, Volume II**, (Bangalore: ICHR), Page iv (Introduction), 2008

ಸಿಂಗಾಪುರ, ಹಾರೋಹಳ್ಳಿ, ಚಿಕ್ಕಬೆಟ್ಟಹಳ್ಳಿಯ ಹೆಸರಿನ ನಿಷ್ಪತ್ತಿ


ಸಾಮಾನ್ಯವಾಗಿ ಗ್ರಾಮದ ಹೆಸರುಗಳು ಭೌಗೋಳಿಕ / ಪ್ರಕೃತಿ / ನಿಸರ್ಗಗಳ ಹಿನ್ನೆಲೆಯಲ್ಲಿ ಬಂದಿರುವುದಾಗಿರುತ್ತದೆ. ಕೆಲವು ಗ್ರಾಮಗಳು ಗುಡ್ಡ, ಬೆಟ್ಟ, ಹೊಳೆ, ನದಿ, ಹಳ್ಳ, ಮರ, ಗಿಡ ಮುಂತಾದವುಗಳ ಆಧಾರವಾಗಿ ರಚನೆಯಾಗಿರುತ್ತವೆ. ಇನ್ನು ಕೆಲವು ಗ್ರಾಮದ ಹೆಸರುಗಳು ಅಲ್ಲಿನ ಜಾತಿ, ವೃತ್ತಿ, ವ್ಯಕ್ತಿ ಇಲ್ಲವೇ ಪುರಾಣಗಳ ಪ್ರೇರಣೆಯಿಂದ ಬಂದಿರುವುದಾಗಿರುತ್ತವೆ.

ಸಿಂಗಾಪುರ

ಸಿಂಗಾಪುರ ಎಂಬ ಹೆಸರಿನ ಉತ್ಪತ್ತಿಯನ್ನು ನೋಡುವುದಾದರೆ ಕನ್ನಡ ವ್ಯಾಕರಣದಲ್ಲಿ **'ಸಿಂಹ' ಎಂಬ ತತ್ಸಮ ಪದದ ತದ್ಭವ ರೂಪವೇ 'ಸಿಂಗ'.** 'ಪುರ' ಎಂಬ ಪದಕ್ಕೆ ಕೋಟೆ, ದಾನವಾಗಿ ನೀಡಿರುವ ಗ್ರಾಮ,[24] ಒಂದು ಭದ್ರವಾದ ಸ್ಥಳ, ನಗರಕ್ಕಿಂತ ಚಿಕ್ಕದಾದ ಗ್ರಾಮ ಎಂಬ ಅರ್ಥಗಳು ಬರುತ್ತವೆ.



1524ರ ಶಾಸನೋಕ್ತ ಸಿಂಗಾಪುರ (ಚಿಕ್ಕಬೆಟ್ಟಹಳ್ಳಿ ಶಾಸನದಲ್ಲಿ)



1530ರ ಶಾಸನೋಕ್ತ ಸಿಂಗಾಪುರ (ಹಾರೋಹಳ್ಳಿ ಶಾಸನದಲ್ಲಿ)



1528ರ ಶಾಸನೋಕ್ತ ಸಿಂಗಾಪುರ (ಸಿಂಗಾಪುರ ಶಾಸನದಲ್ಲಿ)

ಸಿಂಗಾಪುರ ಮತ್ತು ಚಿಕ್ಕಬೆಟ್ಟಹಳ್ಳಿ ಶಾಸನಗಳಲ್ಲಿ ಉಲ್ಲೇಖಿತ ಸ್ಥಳೀಯ ವ್ಯಕ್ತಿಯಾದ/ಅಧಿಕಾರಿಯಾದ ಸಿಂಗಪ್ಪನಾಯಕ ನಿಂದ ಈ ಗ್ರಾಮಕ್ಕೆ ಸಿಂಗಾಪುರ ಹೆಸರು ಬಂದಿರಬಹುದು. ಸ್ಥಳೀಯವಾಗಿ ಅಧಿಕಾರ ನಡೆಸುತ್ತಿದ್ದ ಅಧಿಕಾರಿಗಳ/ಅರಸರ ಹೆಸರಿನಲ್ಲಿ ಗ್ರಾಮಗಳು ನಿರ್ಮಾಣವಾಗಿರುವುದಕ್ಕೆ ಹಲವಾರು ಗ್ರಾಮಗಳು ಸಾಕ್ಷಿಯಾಗಿದೆ. ಉದಾಹರಣೆಗೆ- ಬೆಂಗಳೂರು ನಗರದಲ್ಲಿರುವ 14ನೇ ಶತಮಾನದ **ನಾಗಶೆಟ್ಟಿಹಳ್ಳಿ** (ಇಂದಿನ ಆರ್.ಎಂ.ವಿ ಬಡಾವಣೆಯಲ್ಲಿರುವ), 14ನೇ ಶತಮಾನದ **ದೇವಸಂದ್ರ** (ದೇವರಾಯನ ಸಮುದ್ರ-ಇಂದಿನ ಆರ್.ಎಂ.ವಿ ಬಡಾವಣೆಯಲ್ಲಿರುವ), 14ನೇ ಶತಮಾನದ **ನಾಗೊಂಡನಹಳ್ಳಿ** (ನಾಗಗೌಡನಹಳ್ಳಿ ಇಂದಿನ ವೈಟ್ ಫೀಲ್ಡ್ ಪ್ರದೇಶ). ಇವಲ್ಲದೆ ಬೆಂಗಳೂರು ಗ್ರಾಮಾಂತರದ ಹೊಸಕೋಟೆ ತಾಲ್ಲೂಕಿನಲ್ಲಿ ನಲ್ಲಾಲ ಹೆಸರಿನಲ್ಲಿ **ಚಿಕ್ಕನಲ್ಲಾಲ, ದೊಡ್ಡನಲ್ಲಾಲ**, ಸೋಮನಾಥನ ಹೆಸರಿನಲ್ಲಿ **ಸೋಮನಾಥಪುರ**, ಗಂಗರ ಅರಸ ದುಗ್ಗಮಾರನ ಹೆಸರಿನಲ್ಲಿ ದುಗ್ಗಸಂದ್ರ, ಶಿವಮಾರನ ಹೆಸರಿನಲ್ಲಿ **ಶಿವಾರ, ಶಿವಾರಪಟ್ಟಣ**, ನೆಲಮಂಗಲ ತಾಲ್ಲೂಕಿನಲ್ಲಿ ಮಯಿಲೆಯ ನಾಯಕ ಹೆಸರಿನಲ್ಲಿ **ಮೈಲೆಯನಹಳ್ಳಿ** ಇನ್ನು ಮುಂತಾದ ಗ್ರಾಮನಾಮಗಳು (ಗ್ರಾಮದ ಹೆಸರು) ಉದಾಹರಣೆಗೆ ಸಿಗುತ್ತವೆ.

ಸಿಂಗಾಪುರದಿಂದ 11 ಕಿ.ಮೀ. ದೂರದಲ್ಲಿರುವ ಸಿಂಗನಾಯಕನಹಳ್ಳಿ ಗ್ರಾಮದ ಹೆಸರು ಸಹ ಸಿಂಗಪ್ಪನಾಯಕನ ಹೆಸರಿನ ಮೂಲದಿಂದಲೇ ಬಂದಿರಬಹುದು ಎಂದು ಊಹಿಸಬಹುದು.

ಈ ಪದ್ಧತಿ ಇಂದಿಗೂ ನಡೆದುಕೊಂಡು ಬಂದಿದೆ. ಉದಾ - **ಜೆ.ಪಿ. ನಗರ** (ಜಯಪ್ರಕಾಶ್ ನಾರಾಯಣ್), **ರಾಜಾಜಿನಗರ** (ಚಕ್ರವರ್ತಿ ರಾಜಗೋಪಾಲಚಾರಿ), **ಇಂದಿರಾ ನಗರ** (ಇಂದಿರಾ ಗಾಂಧಿ) ಇತ್ಯಾದಿ ಹೆಸರುಗಳನ್ನು ಕಾಣಬಹುದು.

ಸಿಂಗಾಪುರವೆಂಬ ಗ್ರಾಮಗಳನ್ನು ಬೆಂಗಳೂರು ಜಿಲ್ಲೆಯಲ್ಲಿ ಮಾತ್ರವಲ್ಲದೆ **ಕರ್ನಾಟಕದ ಚಿತ್ರದುರ್ಗ, ಹಾಸನ, ಮಂಡ್ಯ ಜಿಲ್ಲೆಗಳಲ್ಲಿ** ನೋಡಬಹುದು.

ಕರ್ನಾಟಕದಲ್ಲಿ ಮಾತ್ರವಲ್ಲದೆ **ಆಂದ್ರಪ್ರದೇಶ, ಛತ್ತೀಸ್‌ಘಡ, ಗುಜರಾತ್, ಜಮ್ಮು ಮತ್ತು ಕಾಶ್ಮೀರ, ಝೂರ್ಖಂಡ್, ಮಧ್ಯಪ್ರದೇಶ, ಮಹಾರಾಷ್ಟ್ರ, ರಾಜಸ್ಥಾನ, ತಮಿಳುನಾಡು, ತೆಲಂಗಾಣ, ಉತ್ತರಪ್ರದೇಶ, ಪಂಜಾಬ್** ಮುಂತಾದ ರಾಜ್ಯಗಳಲ್ಲಿಯೂ ಕಾಣಬಹುದು.

ಭಾರತದಲ್ಲಿ ಅಷ್ಟೆ ಅಲ್ಲದೆ **ಕಿನ್ಯ, ಸೌತ್ ಆಫ್ರಿಕ, ಬಾಂಗ್ಲಾದೇಶ, ಇಂಡೋನೇಷ್ಯಾ, ನೇಪಾಳ, ಪಾಕಿಸ್ತಾನ, ಸಿಂಗಾಪುರ್, ಮೆಕ್ಸಿಕೊ, ವೆನೆಜುವೆಲಾ, ಪ್ಯೂರ್ಟೋ ರಿಕೊ, ಶ್ರೀಲಂಕಾ** ವಿದೇಶಗಳಲ್ಲಿಯೂ ಸಿಂಗಾಪುರವೆಂಬ ಗ್ರಾಮನಾಮಗಳನ್ನು ಸಹ ಕಾಣಬಹುದು.

ಹಾರೋಹಳ್ಳಿ

ಹಾರೋಹಳ್ಳಿ ಶಾಸನದಲ್ಲಿನ ಹಾರುಹಳಿ ಎಂಬ ಗ್ರಾಮನಾಮವು **ಹಾರು>ಹಾರವ/ಹಾರುವ + ಹಳ್ಳಿ = ಹಾರೋಹಳ್ಳಿ** ಎಂದಾಗಿದೆ. ಹಾರುವ/ಹಾರುವರು ಅಂದರೆ ಬ್ರಾಹ್ಮಣರು ವಾಸಿಸುವ ಗ್ರಾಮ.

---

24 ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು ನಿಘಂಟು, 1970, ಪುಟ ಸಂಖ್ಯೆ- 5690.

ಸಾಮಾನ್ಯವಾಗಿ ಯಾವುದೇ ಗ್ರಾಮಕ್ಕೆ ಹೆಸರನ್ನಿಡುವಾಗ ಪರಿಸರ, ಜಾತಿ, ಗಿಡ-ಮರ, ಬೆಟ್ಟ-ಗುಡ್ಡ, ಕೆರೆ, ವೃತ್ತಿ, ವ್ಯಕ್ತಿ ಹೀಗೆ ಅನೇಕ ಅಂಶಗಳ ಆಧಾರಿತವಾಗಿ ಇಡುತ್ತಿದ್ದುದು ಸಹಜ. ಅದೇ ರೀತಿಯಲ್ಲಿ ಹಾರೋಹಳ್ಳಿ ಗ್ರಾಮಕ್ಕೆ ಜಾತಿ ಸೂಚಕ ಹೆಸರು ಬಂದಿದೆ. ಬೆಂಗಳೂರು ನಗರದಲ್ಲಿರುವ ಇತರೆ ಜಾತಿವಾಚಕ ಹೆಸರುಗಳೆಂದರೆ, **ಕುರುಬರಹಳ್ಳಿ, ಗೊಲ್ಲರಹಳ್ಳಿ, ವಡೇರಹಳ್ಳಿ, ಮೇದರನಿಂಗನಹಳ್ಳಿ, ಬೊಮ್ಮಸಂದ್ರ, ತಿಗಳರಪೇಟೆ, ಕುಂಬಾರಪೇಟೆ** ಇತ್ಯಾದಿ.



ಶಾಸನೋಕ್ತ ಹಾರುಹಳಿ

ಬೆಂಗಳೂರು ನಗರದಲ್ಲಿ **ಎರಡು ಹಾರೋಹಳ್ಳಿ** ಗ್ರಾಮಗಳಿವೆ. ಒಂದು **ಮಾಗಡಿ ರಸ್ತೆಯಲ್ಲಿ** ಹೇರೋಹಳ್ಳಿ (ಶಾಸನೋಕ್ತ ಹಾರುವಹಳ್ಳಿ) ಮತ್ತು **ದೊಡ್ಡಬಳ್ಳಾಪುರ ರಸ್ತೆಯ** ಹಾರೋಹಳ್ಳಿ (ಶಾಸನೋಕ್ತ ಹಾರುಹಳ್ಳಿ) ಯಾಗಿದೆ. **ಕನಕಪುರ ರಸ್ತೆಯಲ್ಲಿಯೂ** ಹಾರೋಹಳ್ಳಿ ಎಂಬ ಗ್ರಾಮವಿದೆ.

ಇದಲ್ಲದೆ ಇನ್ನೂ ಬೇರೆ ಶಾಸನಗಳಲ್ಲಿ **ಹಾರುವನಪುರ, ಹಾರೋಪುರ, ಹಾರೋಹಳ್ಳಿ** ಎಂಬ ಉಲ್ಲೇಖ ಸಿಗುತ್ತವೆ.

ಚಿಕ್ಕಬೆಟ್ಟಹಳ್ಳಿ

ಚಿಕ್ಕಬೆಟ್ಟಹಳ್ಳಿಯ ಶಾಸನದಲ್ಲಿ ಬಂದಿರುವ ಚಿಗಬೆಠಹಳಿ (ಚಿಕ್ಕಬೆಟ್ಟಹಳ್ಳಿ) ಹೆಸರು, ಈ ಗ್ರಾಮದ ಸಮೀಪದಲ್ಲಿರುವ ಚಿಕ್ಕದಾದ ಬೆಟ್ಟದಿಂದಾಗಿ ನಿಸರ್ಗವಾಚಿಯಾಗಿ ಚಿಕ್ಕಬೆಟ್ಟಹಳ್ಳಿ ಎಂಬ ಹೆಸರು ಬಂದಿದೆ. ಇದರ ಪಕ್ಕದಲ್ಲೇ ಇರುವ ದೊಡ್ಡಬೆಟ್ಟಹಳ್ಳಿಯು ಕೂಡ ಅಲ್ಲಿರುವ ದೊಡ್ಡ ಬೆಟ್ಟದಿಂದ ಹೆಸರು ಬಂದಿದೆ. ಮೊದಲು ಎತ್ತರವಾದ ಬೆಟ್ಟಗಳಿಂದ ಕೂಡಿದ್ದ ದೊಡ್ಡಬೆಟ್ಟಹಳ್ಳಿಯು (962 ಮೀಟರ್ ಎತ್ತರ) ಇಂದು, ಇಲ್ಲಿ ನಡೆದ ಅತಿಯಾದ ಕಲ್ಲು ಗಣಿಗಾರಿಕೆಯಿಂದ ನೆಲಸಮವಾಗಿ ವಸತಿ ಪ್ರದೇಶಗಳಾಗಿ ಮಾರ್ಪಾಡಾಗಿದೆ. ದೊಡ್ಡಬೆಟ್ಟಹಳ್ಳಿಯೂ ಸಹ ಚಿಕ್ಕಬೆಟ್ಟಹಳ್ಳಿಯಷ್ಟೇ ಪುರಾತನವಾಗಿದೆ ಎಂದೇ ಗುರುತಿಸಬಹುದು.



ಶಾಸನೋಕ್ತ ಚಿಗಬೆಠಹಳಿ ಹೆಸರು

ಸಿವನಸಮುದ್ರ


ಸಿವನಸಮುದ್ರ ಎಂಬುದು **ಸಿವನ (ಶಿವ) + ಸಮುದ್ರ (ಕೆರೆ)** ಈ ಎರಡೂ ಪದಗಳ ಸಮ್ಮಿಶ್ರಣವಾಗಿದೆ. ಇಲ್ಲಿ **ಸಮುದ್ರ ಎಂಬ**



ಚಿಕ್ಕಬೆಟ್ಟಹಳ್ಳಿಯ ಗುಡ್ಡದ ಚಿತ್ರ

ಎಂಬ ಪದವು ಹಲವು ಸಂದರ್ಭಗಳಲ್ಲಿ ಭಾಷಾಂತರವಾಗಿ 'ಸಂದ್ರ' ಎಂದು ಬಳಕೆಯಾಗಿರುವುದನ್ನು ನೋಡಬಹುದು. ಆದರೂ ಕೂಡ ಸಮುದ್ರ ಹಾಗೂ ಸಂದ್ರ ಎರಡೂ ಪದಗಳು ದೊಡ್ಡಕೆರೆ ಎಂಬ ಅರ್ಥವನ್ನೇ ನೀಡುತ್ತವೆ. ಇದಕ್ಕೆ ಉದಾಹರಣೆಯಾಗಿ ಬೆಂಗಳೂರಿನಲ್ಲಿ ಇಂದು **ಜಕ್ಕಸಂದ್ರ, ಬೊಮ್ಮಸಂದ್ರ, ಚನ್ನಸಂದ್ರ** ಹಾಗೂ **ಅಲ್ಲಾಳಸಂದ್ರ** ಎಂಬ ಪ್ರದೇಶಗಳಲ್ಲಿ ವಿಶಾಲವಾದ (ದೊಡ್ಡ) ಕೆರೆಗಳಿರುವುದನ್ನು ಇಂದಿಗೂ ನೋಡಬಹುದಾಗಿದೆ. ಬೆಂಗಳೂರಿನಲ್ಲಿ ಮಾತ್ರವಲ್ಲದೇ ಸಂದ್ರ, ಸಮುದ್ರ, ಸಮುದ್ರಂ ಎಂಬ ಹೆಸರಿರುವ ಸಾಕಷ್ಟು ಹಳ್ಳಿಗಳನ್ನು ನಾವು ದಕ್ಷಿಣ ಭಾರತದಲ್ಲಿ ಅಂದರೆ, ಆಂಧ್ರಪ್ರದೇಶದ **ಶ್ರೀಕಾಕುಳಂನಿಂದ** ತಮಿಳುನಾಡಿನ **ಕನ್ಯಾಕುಮಾರಿಯವರೆಗೆ** ಸುಮಾರು **500 ಹಳ್ಳಿಗಳನ್ನು** ಇಂದಿಗೂ **ಗುರುತಿಸಬಹುದು**.

ಶಿವನಸಮುದ್ರ ಆಡಳಿತ ವಿಭಾಗವನ್ನು ಮುಂದೆ ವಿವರಿಸಲಾಗಿದೆ.



ಶಾಸನೋಕ್ತ ಸಿವನಸಮುದ್ರ

ಸೋಲೂರು

ಬೆಂಗಳೂರು ಜಿಲ್ಲೆಯ ದೇವನಹಳ್ಳಿ, ಮಾಗಡಿ, ಹೊಸಕೋಟೆ, ಆನೇಕಲ್ ತಾಲ್ಲೂಕಿನಲ್ಲಿ 4 ಸೋಲೂರು ಗ್ರಾಮಗಳಿದ್ದು, ಶಾಸನದಲ್ಲಿ ಉಲ್ಲೇಖವಾದ ಸೋಲೂರು ಗ್ರಾಮವು ಇಂದಿನ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನಲ್ಲಿದ್ದು (GPS -13°04'05.3"N 77°14'38.4"E) ಮಾಗಡಿಯಿಂದ 8 ಕಿ.ಮೀ ದೂರದಲ್ಲಿದೆ. ಮಾಗಡಿ ತಾಲ್ಲೂಕಿನಲ್ಲಿನ ಈ ಸೋಲೂರು ಗ್ರಾಮದಲ್ಲಿ ಹಲವಾರು ಮನೆತನದ ನಾಯಕರು ಆಳ್ವಿಕೆ ನಡೆಸಿರುವುದಕ್ಕೆ ಶಾಸನಗಳು, ಕೋಟೆಯ ಅವಶೇಷಗಳು, ದೇವಾಲಯಗಳು ಸಾಕ್ಷಿಯಾಗಿವೆ.



ಶಾಸನೋಕ್ತ ಸೊಲೂರ


ಸಿಂಗಾಪುರದ ಐತಿಹಾಸಿಕ ವ್ಯಕ್ತಿಗಳು

ಸಿಂಗಪ್ಪನಾಯಕ

ಸಿಂಗಾಪುರದ ಹೊಸ ಶೋಧವಾದ ಸಾ.ಶ. 1528ರ ಶಾಸನದಲ್ಲಿ ಸಿಂಗಪ್ಪನಾಯಕರಿಗೆ ಧರ್ಮವಾಗಬೇಕೆಂದು ಮತ್ತು ಸಾ.ಶ. 1524ರ ಚಿಕ್ಕಬೆಟ್ಟಹಳ್ಳಿ ಶಾಸನದಲ್ಲಿ ಸಿಂಗಪ್ಪನಾಯಕರು ಸಿಂಗಾಪುರದ ತಿರುಮಲೆ ದೇವರ ಅಮೃತಪಡಿಯ ನೈವೆದ್ಯಕ್ಕೆ, ರಾಮಾನುಜಕೂಟಕ್ಕೆ ದಾನ ನೀಡಿರುವ ಅಂಶಗಳನ್ನು ಗಮನಿಸಿದಾಗ ಸಿಂಗಾಪುರ ಗ್ರಾಮವನ್ನು ಆಳ್ವಿಕೆ ಮಾಡಿದ ಸ್ಥಳೀಯ ಅಧಿಕಾರಿ ಸಿಂಗಪ್ಪನಾಯಕ ಎಂದು ಹೇಳಬಹುದು.



ಸಿಂಗಪ್ಪನಾಯಕ




ಶಾಸನೋಕ್ತ ಸಿಂಗಪ್ಪನಾಯಕರು

ನಾಯಕ ಎಂಬ ಪದವು ಯಾವುದೇ ಜಾತಿ, ಜನಾಂಗ ಸೂಚಕ ಆಗಿರುವುದಿಲ್ಲ. ಇದು ಅಧಿಕಾರದಲ್ಲಿ ನಾಯಕ (Leader) ಎಂಬ ಅರ್ಥವನ್ನು ನೀಡುತ್ತದೆ. ಅಂದರೆ ನಾಡಿನ, ಸೀಮೆಯ ಮುಖ್ಯಸ್ಥನಿಗೆ ನಾಯಕ ಎಂಬ ಹೆಸರು ಬಳಸುವುದು ಸಾಮಾನ್ಯವಾಗಿತ್ತು. ರಾಜನಿಗೆ ಆಪ್ತ ಹಾಗೂ ವಿಶ್ವಾಸವಿರುವ ವ್ಯಕ್ತಿಗಳಿಗೆ ನಾಯಕತನವನ್ನು ನೀಡಲಾಗುತ್ತಿತ್ತು.

ನಾಯಕತನವನ್ನು ಬ್ರಾಹ್ಮಣರಿಗೆ ಹಾಗೂ ಇತರೆ ಜಾತಿಯ ಜನರಿಗೆ ನೀಡುತ್ತಿದ್ದ ಉದಾಹರಣೆಗಳಿವೆ.[25]

ನಲಪನಾಯ್ಕ


ಹೊಸ ಶೋಧವಾದ ಸಾ.ಶ. 1528ರ ಸಿಂಗಾಪುರ ಶಾಸನದಲ್ಲಿ ಉಲ್ಲೇಖವಿರುವ ವ್ಯಕ್ತಿ. ಇವನು ಸಿಂಗಪ್ಪನಾಯಕರಿಗೆ ಧರ್ಮವಾಗಬೇಕೆಂದು ನೀಡಿದ ಶಾಸನವಿದೆ. ಬಹುಶಃ ನಲಪನಾಯ್ಕನು ಸಿಂಗಪ್ಪನಾಯಕನ ಅಧೀನ ಅಧಿಕಾರಿ ಇರಬಹುದು.



ಶಾಸನೋಕ್ತ ನಲಪನಾಯ್ಕ

ಭೆಟೆಯರಾಯ

ಸಿಂಗಾಪುರ ಶಾಸನದಲ್ಲಿ ಉಕ್ತವಾಗಿರುವ ವ್ಯಕ್ತಿಯ ಹೆಸರು. ಬಹುಶಃ ಸ್ಥಳೀಯ ನಾಯಕ ಅಥವಾ ಅಧಿಕಾರಿ ಇರಬಹುದು.



ಶಾಸನೋಕ್ತ ಭೆಟೆಯರಾಯ

ಬಸವಪ್ಪನಾಯಕ

ಹಾರೋಹಳ್ಳಿ ಶಾಸನದಲ್ಲಿ ಸೋಲೂರ ಬಸವಪ್ಪನಾಯಕ ಎಂದಿದೆ. ಇವನು ಸಾ.ಶ. 1524-1530 ರವರೆಗೆ ಸೋಲೂರಿನ ಪ್ರಮುಖ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದವನು.[26]

25 Yogeeswarappa D N, **The Study of Nayakatana in the Vijayanagara Empire with Special Reference to Tuluva Dynasty**, Minor research project report submitted to the University Grants Commission, New Delhi, 28 Mar 2014.

26 ಆದಪ್ಪ ಪಾಸೋಡಿ.,"ವಿಜಯನಗರಾವಧಿಯ ಸೋಲೂರು ಸೀಮೆ ನಾಯಕರು", ಇತಿಹಾಸ ದರ್ಪಣ-2020(ಜುಲೈ-ಡಿಸೆಂಬರ್), ಪುಟ ಸಂಖ್ಯೆ 39-60.



ಶಾಸನೋಕ್ತ ಬಸವಪ್ಪನಾಯಕ

ಕ್ರಿಷ್ಣಪ್ಪನಾಯಕ

ಹಾರೋಹಳ್ಳಿ ಶಾಸನದಲ್ಲಿ ಉಕ್ತವಾದ ಸೋಲೂರ ಬಸವಪ್ಪನಾಯಕನ ಮಗನಾಗಿದ್ದಾನೆ.



ಶಾಸನೋಕ್ತ ಕ್ರಿಷ್ಣಪ್ಪನಾಯಕ

ಪಟ್ಟಣ ತಿಂಮ್ಮಣಯ್ಯ

ಚಿಕ್ಕಬೆಟ್ಟಹಳ್ಳಿ ಶಾಸನದಲ್ಲಿ ದಾನ ಪಡೆದವರಾದ ಹಿರಿಅಯ್ಯ ವರದರಾಜಯನವರ ತಂದೆ. ನಮ್ಮ ಸಂಸ್ಕೃತಿಯಲ್ಲಿ ವ್ಯಕ್ತಿಯನ್ನು ಗುರುತಿಸುವಾಗ ಹೆಸರಿನ ಜೊತೆ ತಂದೆಯ ಹೆಸರು/ತಾತನ ಹೆಸರನ್ನು ಜೋಡಿಸುವುದು ಸಾಮಾನ್ಯ.



ಶಾಸನೋಕ್ತ ತಿಂಮ್ಮಣಯ್ಯ

ಹಿರಿಆಯ ವರದರಾಜಯ

ಚಿಕ್ಕಬೆಟ್ಟಹಳ್ಳಿ ಶಾಸನದ ಪ್ರಕಾರ ದಾನ ಪಡೆದವರು ಮತ್ತು ರಾಮಾನುಜಕೂಟ ನಡೆಸುವವರು.



ಶಾಸನೋಕ್ತ ಹಿರಿಆಯ ವರದರಾಜ

ಕೃಷ್ಣರಾಯ/ಕ್ರಿಷ್ಣರಾಯ

ಚಿಕ್ಕಬೆಟ್ಟಹಳ್ಳಿ ಶಾಸನ ಹಾಕಿಸುವ ಸಮಯದಲ್ಲಿ ಆಳ್ವಿಕೆಯ ಮಾಡುತ್ತಿದ್ದ ರಾಜನ (ಕರ್ನಾಟಕ ಸಾಮ್ರಾಜ್ಯದ ಅರಸ) ಹೆಸರು. ಕರ್ನಾಟಕ ಸಾಮ್ರಾಜ್ಯವು ವಿಜಯನಗರ ಸಾಮ್ರಾಜ್ಯವೆಂದು ಪ್ರಸಿದ್ಧವಾಗಿದೆ.[27] ವಿಜಯನಗರ ಸಾಮ್ರಾಜ್ಯದ ತುಳುವ ಮನೆತನದ ಪ್ರಸಿದ್ಧ ಅರಸನಾದ ಕೃಷ್ಣದೇವರಾಯರು (ಸಾ.ಶ. 1509 - 1529) ರಾಜಧಾನಿ ಹಂಪಿಯಿಂದ ಆಳ್ವಿಕೆ ಮಾಡುತ್ತಿರುತ್ತಾರೆ. **ಕೃಷ್ಣದೇವರಾಯರ ಮರಣ ಹೊಂದಿದ ನಿಖರ ದಿನ (17-ಅಕ್ಟೋಬರ್-1529) ತಿಳಿಸುವ ಶಾಸನವೂ ಸಹ ಇತ್ತೀಚೆಗೆ ಪತ್ತೆಯಾಗಿರುವುದು ವಿಶೇಷವಾಗಿದೆ.**[28] ಸಾ.ಶ. 1524 ರ ಸಮಯದಲ್ಲಿ ಚಿಕ್ಕಬೆಟ್ಟಹಳ್ಳಿ ಗ್ರಾಮವು ಈತನ ಆಳ್ವಿಕೆಗೆ ಒಳಪಟ್ಟಿತ್ತು.



ಶಾಸನೋಕ್ತ ಕ್ರಿಷ್ಣರಾಯ

ಅಚ್ಯುತರಾಯ

ಕೃಷ್ಣದೇವರಾಯನ ನಂತರ ಅಧಿಕಾರಕ್ಕೆ ಬಂದವನೇ ಅಚ್ಯುತರಾಯ (ಸಾ.ಶ. 1529-1542) ಇವನು ಕೃಷ್ಣದೇವರಾಯನ ತಮ್ಮನಾಗಿದ್ದು, ಹಾರೋಹಳ್ಳಿ ಗ್ರಾಮವು ಅಚ್ಯುತರಾಯನ ಕರ್ನಾಟಕ ಸಾಮ್ರಾಜ್ಯದ (ವಿಜಯನಗರ ಸಾಮ್ರಾಜ್ಯ) ಆಡಳಿತಕ್ಕೆ ಒಳಪಟ್ಟಿತ್ತು.[29]



ಶಾಸನೋಕ್ತ ಆಚುತರಾಯ

27 Shrinivas Ritti, B R Gopal (editor), **Inscriptions of the Vijayanagara Rulers, Volume II,** (Bangalore: ICHR), Page iv (Introduction), 2008

28 Narasimhan K.R, **"The Honnenahalli Unpublished Inscription Furnishing The Date Of The Demise Of Sri Krishnadevaraya"**, *Quarterly Journal Of The Mythic Society(QJMS)* ,Jan to March 2021, Bangalore, Page No 72-75

29 Shrinivas Ritti, B R Gopal (editor), **Inscriptions of the Vijayanagara Rulers, Volume II,** (Bangalore: ICHR), Page iv (Introduction), 2008

ಐತಿಹಾಸಿಕ ಆಡಳಿತ ವಿಭಾಗಗಳು

ಇಂದಿನ ಆಧುನಿಕ ಕಾಲದಲ್ಲಿ ಆಡಳಿತದ ಅನುಕೂಲಕ್ಕಾಗಿ **ರಾಷ್ಟ್ರ** > **ರಾಜ್ಯ** > **ಜಿಲ್ಲೆ** > **ತಾಲ್ಲೂಕು** > **ಹೋಬಳಿ** > **ಗ್ರಾಮ**ಗಳೆಂದು ವಿಂಗಡಿಸಿಕೊಂಡಿರುವಂತೆ ಹಿಂದೆಯೂ ಸಹ **ಸಾಮ್ರಾಜ್ಯ** > **ರಾಜ್ಯ** > **ನಾಡು** > **ಸೀಮೆ/ಸ್ಥಳ** > **ವೆಂಟೆ/ಪಾರು** ಮುಂತಾದ ಹೆಸರಿನಲ್ಲಿ ಆಡಳಿತ ವಿಭಾಗಗಳನ್ನು ವರ್ಗೀಕರಣ ಮಾಡಿರುವುದನ್ನು ಕಾಣಬಹುದು. ಇವು ಕಾಲ ಕಾಲಕ್ಕೆ ನಾಡು ಸ್ಥಳವಾಗಿ, ಸ್ಥಳ ಸೀಮೆಯಾಗಿ, ಸೀಮೆ ಸ್ಥಳವಾಗಿ ಬದಲಾಗುತ್ತಿರುತ್ತವೆ. ಈ ವರ್ಗೀಕರಣದಲ್ಲಿರುವ ಆಡಳಿತ ವಿಭಾಗಗಳಿಗೆ ನಿರ್ದಿಷ್ಟ ವ್ಯಾಪ್ತಿ/ಗಡಿ ಗುರುತಿಸಿ ಗೆರೆ ಎಳೆಯುವುದು ಕಷ್ಟ. ಈ ಆಡಳಿತ ವಿಭಾಗಕ್ಕೆಲ್ಲಾ ಒಬ್ಬೊಬ್ಬ ಮಂತ್ರಿ/ಅಧಿಕಾರಿಗಳನ್ನು ರಾಜನಾದವನು ನೇಮಿಸುತ್ತಿದ್ದನು ಹಾಗೂ ಇವರು ತಮ್ಮದೇ ಆದ ಸೈನ್ಯವನ್ನೂ ಹೊಂದಿರುತ್ತಿದ್ದ ಉದಾಹರಣೆಗಳಿವೆ. ಇದರಿಂದ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವುದರ ಜೊತೆಗೆ ತೆರಿಗೆ ಸಂಗ್ರಹ ಇತ್ಯಾದಿ ಕಾರ್ಯಗಳಿಗೆ ಅನುಕೂಲವಾಗುತ್ತಿತ್ತು.

ಸಿವನಸಮುದ್ರ ಸ್ಥಳ ಮತ್ತು ಸೀಮೆ

ಇಂದಿನ ಬೆಂಗಳೂರು ಸಮೀಪದ **ಹೆಸರಘಟ್ಟದ ಚಂದ್ರಮೌಳೇಶ್ವರ ದೇವಾಲಯದಲ್ಲಿ** ಹಾಕಿಸಿರುವ ಸಾ.ಶ. 1533 ರ ಶಾಸನದಲ್ಲಿ ಶಿವನಸಮುದ್ರವೇ ಹೆಸರಘಟ್ಟವೆಂದು ಕರೆದಿದೆ.[30] ಇದಲ್ಲದೆ ಬೆಂಗಳೂರಿನ ಅನೇಕ ಶಾಸನಗಳಲ್ಲಿಯೂ ಸಿವನಸಮುದ್ರ ಎಂಬ ಉಲ್ಲೇಖಗಳನ್ನು ಕಾಣಬಹುದು. ಸಾ.ಶ 1431ರ **ಕೊಡಿಗೇಹಳ್ಳಿ** ಶಾಸನ,[31] **ಹಾರೋಹಳ್ಳಿ**ಯ ಕ್ರಿ.ಶ.1530ರ ಶಾಸನ,[32] **ಅಲ್ಲಾಳಸಂದ್ರ**ದ ಸಾ.ಶ. 1544ರ ಶಾಸನ[33] ಬೆಂಗಳೂರಿನ **ದಾಸರಹಳ್ಳಿ**ಯ ಸಾ.ಶ. 1490ರ ಶಾಸನ[34] ಬೆಂಗಳೂರಿನ **ಕಾವಲ್ ಭೈರಸಂದ್ರ**ದ ಸಾ.ಶ. 1538ರ ಶಾಸನ[35] ಹಾಗೂ **ಸಾದಹಳ್ಳಿ**ಯ ಸಾ.ಶ. 1425ರ ತಾಮ್ರ ಶಾಸನದಲ್ಲಿ ಶಿವನಸಮುದ್ರ ಸೀಮೆ / ಸ್ಥಳವನ್ನು ಉಲ್ಲೇಖಿಸುತ್ತದೆ.[36] ಈ ಮೇಲೆ ಹೆಸರಿಸಿದ ಶಾಸನಗಳ ಆಧಾರದ ಮೇಲೆ ನೋಡುವುದಾದರೆ ಸಿವನಸಮುದ್ರ/ಶಿವನಸಮುದ್ರವು (ಇಂದಿನ ಹೆಸರಘಟ್ಟ) ಒಂದು ಪ್ರಮುಖ ಆಡಳಿತ ಕೇಂದ್ರವಾಗಿತ್ತು ಎಂದು ತಿಳಿದುಬರುತ್ತದೆ.



ಶಾಸನೋಕ್ತ ಸಿವನಸಮುದ್ರದ ಸ್ಥಲ



ಹಿಂದಿನ ಶಿವನಸಮುದ್ರ ಪ್ರದೇಶದಲ್ಲಿ ಇಂದು ಹೆಸರಘಟ್ಟ ಕೆರೆ ನಿರ್ಮಾಣಗೊಂಡಿದೆ

30 Lewis Rice B, **Epigraphia Carnatica Vol 09, Inscriptions of the Bangalore District**, ನೆಲಮಂಗಲ ಶಾಸನ ಸಂಖ್ಯೆ-31, 1905

31 Lewis Rice B, **Epigraphia Carnatica Vol 09, Inscriptions of the Bangalore District**, ಬೆಂಗಳೂರು ಶಾಸನ ಸಂಖ್ಯೆ- 127, 1905

32 Lewis Rice B, **Epigraphia Carnatica Vol 09, Inscriptions of the Bangalore District**, ಬೆಂಗಳೂರು ಶಾಸನ ಸಂಖ್ಯೆ-28, 1905

33 Lewis Rice B, **Epigraphia Carnatica Vol 09, Inscriptions of the Bangalore District**, ಬೆಂಗಳೂರು ಶಾಸನ ಸಂಖ್ಯೆ-30, 1905

34 Lewis Rice B, **Epigraphia Carnatica Vol 09, Inscriptions of the Bangalore District**, ಬೆಂಗಳೂರು ಶಾಸನ ಸಂಖ್ಯೆ-57, 1905

35 Lewis Rice B, **Epigraphia Carnatica Vol 09, Inscriptions of the Bangalore District**, ಬೆಂಗಳೂರು ಶಾಸನ ಸಂಖ್ಯೆ-138, 1905

36 Lewis Rice B, **Epigraphia Carnatica Vol 09, Inscriptions of the Bangalore District**, ದೇವನಹಳ್ಳಿ ಶಾಸನ ಸಂಖ್ಯೆ-81, 1905

ಇತರೆ ಐತಿಹಾಸಿಕ ಮಾಹಿತಿಗಳು

ಶ್ರೀವರದರಾಜ ಸ್ವಾಮಿ ದೇವಾಲಯ


ಪ್ರಸ್ತುತ ಆಧುನಿಕವಾಗಿ ಬೆಳೆದಿರುವ ಸಿಂಗಾಪುರದ ನಿಜವಾದ ಐತಿಹಾಸಿಕ ವೈಭವ ಉಳಿದಿರುವುದು, ಒಂದು ಸಿಂಗಪ್ಪನಾಯಕನ ಶಾಸನ ಮತ್ತೊಂದು ಇಂದು ಶ್ರೀ ವರದರಾಜ ಸ್ವಾಮಿ ಎಂದು ಕರೆಯಲ್ಪಡುವ ದೇವಾಲಯ. ಬಹುಶಃ ಈ ದೇವಾಲಯದ ಹೊರಭಾಗದ ಚಿತ್ರವನ್ನು ಗಮನಿಸಿದಾಗ ಯಾವುದೋ ಇತ್ತೀಚೆಗೆ ನಿರ್ಮಾಣವಾಗಿರುವ ದೇವಾಲಯ ಎಂದು ಅನಿಸಬಹುದು. **ಆದರೆ ಪ್ರಸ್ತುತ ಈ ದೇವಾಲಯದ ಪ್ರಾಚೀನತೆ ಕಾಣುವುದು ದೇವಾಲಯದ ಒಳ ಭಾಗದಲ್ಲಿ ಉಳಿದಿರುವ ರಚನೆಯಿಂದ**. ದೇವಾಲಯ ಇಂದು ಹೊಸ ರಚನೆಗಳೊಂದಿಗೆ ಜೀರ್ಣೋದ್ಧಾರವಾಗಿದೆ. ಆದರೆ ಮೂಲ ಸ್ಥಿತಿಯಲ್ಲಿ ಜೀರ್ಣೋದ್ಧಾರ ಮಾಡದೇ ಇರುವುದರಿಂದ ಅದರ ಬಾಹ್ಯ ಸೌಂದರ್ಯವನ್ನು ಪೂರ್ಣ ಪ್ರಮಾಣದಲ್ಲಿ ಇಂದು ತಿಳಿಯಲು ಸಾಧ್ಯವಾಗುತ್ತಿಲ್ಲ.

ಪೂರ್ವಾಭಿಮುಖವಾಗಿರುವ ದೇವಾಲಯವು ಗರ್ಭಗೃಹ,[37] ಸುಖನಾಸಿ,[38] ನವರಂಗ[39] ಹಾಗೂ ಮುಖಮಂಟಪಗಳನ್ನು[40] ಹೊಂದಿದೆ. ಪ್ರಸ್ತುತ ಗರ್ಭಗೃಹ, ಸುಕನಾಸಿಯ ಭಿತ್ತಿ[41] ಭಾಗಗಳನ್ನು ಮೂಲ ಸ್ಥಿತಿಯಲ್ಲಿಯೇ ಜೀರ್ಣೋದ್ಧಾರ ಮಾಡಿದ್ದಾರೆ. ಇವುಗಳ ಅಧಿಷ್ಠಾನ[42] ಸಂಪೂರ್ಣವಾಗಿ ಮುಚ್ಚಿ ಹೋಗಿವೆ. ಭಿತ್ತಿಯು ದಪ್ಪ ದಪ್ಪ ಕಲ್ಲುಗಳಿಂದ ಕೂಡಿದ್ದು, ಸರಳವಾಗಿದೆ. ವಲಭಿ, ಕಪೋತಗಳನ್ನು[43] ಈ ಭಾಗದಲ್ಲಿ ಕಾಣಬಹುದು. ಗರ್ಭಗುಡಿಯ ಮೇಲೆ ಹೊಸದಾದ ರುದ್ರಛಂದ ಮಾದರಿಯ ಶಿಖರವನ್ನು ಸಿಮೆಂಟ್ ನಲ್ಲಿ ನಿರ್ಮಿಸಿದ್ದಾರೆ. ಸಿಮೆಂಟ್ ಮತ್ತು

37 ದೇವರ ವಾಸಸ್ಥಾನ/ದೇವರ ಮೂರ್ತಿಯನ್ನು ಪ್ರತಿಷ್ಠಾಪಿಸಿರುವ ಸ್ಥಳ
38 ಭಕ್ತಾದಿಗಳು ನಿಲ್ಲುವ ಸ್ಥಳ/ಉತ್ಸವ ಮೂರ್ತಿಗಳು, ಪೂಜಾ ಸಾಮಾಗ್ರಿಗಳನ್ನು ಇಡುವ ಸ್ಥಳ
39 ಹೆಚ್ಚು ಭಕ್ತಾಧಿಗಳು ಸೇರುವ ಸ್ಥಳ, ದೇವರಿಗೆ ಸಂಗೀತ - ನೃತ್ಯ ಸೇವೆಗಳು ನಡೆಯುವ ಸ್ಥಳ
40 ನವರಂಗದ ಪ್ರವೇಶ ದ್ವಾರಕ್ಕೆ ನಿರ್ಮಿಸುವ ತೆರೆದ ಮಂಟಪ
41 ದೇವಾಲಯದ ಗೋಡೆ
42 ದೇವಾಲಯದ ತಳಪಾಯ
43 ಭಿತ್ತಿಯಿಂದ ಹೊರಚಾಚಿದ ಭಾಗ



ಅಂದಿನ ತಿರುವೆಂಗಳನಾಥ ಇಂದಿನ ವರದರಾಜಸ್ವಾಮಿ ದೇವಾಲಯ, ಸಿಂಗಾಪುರ



ದೇವಾಲಯದ ಭಾಗಗಳು

ಅತಿಯಾದ ಬಣ್ಣದ ಬಳಕೆಯಿಂದ ಗರ್ಭಗೃಹ, ಸುಖನಾಸಿ ಪ್ರಾಚೀನ ರಚನೆಯಾದರೂ ಸಹ ಹೊಸ ಕಟ್ಟಡದ ರೀತಿಯಲ್ಲಿ ಕಂಡುಬರುತ್ತದೆ. ಗರ್ಭಗುಡಿಯ ಉತ್ತರ ಭಾಗದಲ್ಲಿ ದೇವರ ಅಭಿಷೇಕದ ನೀರು ಹೊರಹೋಗಲು ಪ್ರಣಾಳವಿದ್ದು ಅದು ಸಿಂಹವಕ್ತ್ರ (ಸಿಂಹ ಮುಖ) ಪ್ರಾಣಾಳ ಮಾದರಿಯದಾಗಿದೆ.

ನವರಂಗ ಮತ್ತು ಅದರ ಮುಂಭಾಗದಲ್ಲಿ ಹೊಸ ಭಿತ್ತಿಯ (ಗೋಡೆ) ರಚನೆಯನ್ನು ಮಾಡಲಾಗಿದೆ. ನವರಂಗದ ಗೋಡೆಯ ಕಲ್ಲುಗಳನ್ನು ಏನು ಮಾಡಿದರೋ ಗೊತ್ತಿಲ್ಲ, ಆದರೆ ಅಧಿಷ್ಠಾನದ ಕುಮುದ ಭಾಗದ ಅವಶೇಷಗಳನ್ನು ದೇವಾಲಯದ ಹಿಂಭಾಗದಲ್ಲಿರುವ ಅಶ್ವತ್ಥ ಕಟ್ಟೆಯ ಜಗತಿಯ ನಿರ್ಮಾಣಕ್ಕೆ ಬಳಸಿಕೊಂಡಿದ್ದಾರೆ. ನವರಂಗದ ಭಿತ್ತಿಯು ಹೊಸ ರಚನೆ ಎಂಬುದನ್ನು ಸುಕನಾಸಿ ಭಾಗದಲ್ಲಿ ನವರಂಗ ಭಾಗವನ್ನು ಬೇರ್ಪಡಿಸಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು.

ದೇವಾಲಯದ ಮುಂಭಾಗದಲ್ಲಿ ಸುಮಾರು 40 ಅಡಿ ಉದ್ದದ ಏಕಶಿಲಾ ದೀಪಸ್ತಂಭವನ್ನು ಕಾಣಬಹುದು. ಇದನ್ನು ಸುಮಾರು ಐದು ಅಡಿ ಮಂಚಬಂಧ ಮಾದರಿಯ ಅಧಿಷ್ಠಾನದ ಮೇಲೆ ನಿಲ್ಲಿಸಲಾಗಿದೆ. ಇದು ನಾಲ್ಕು, ಎಂಟು, ಹದಿನಾರು ಮೂಲೆಗಳನ್ನು ಹೊಂದಿದೆ. ಕಂಭದ ಪಾದ ಭಾಗದಲ್ಲಿ ದೇವಾಲಯಕ್ಕೆ ಅಭಿಮುಖವಾಗಿ ಕೈ ಮುಗಿಯುತ್ತಿರುವಂತೆ ನಿಂತಿರುವ ಆಂಜನೇಯನ ಉಬ್ಬು ಶಿಲ್ಪ, ಉಳಿದ ಭಾಗಗಳಲ್ಲಿ



ಸಿಂಗಾಪುರದ ವರದರಾಜ ಸ್ವಾಮಿ ದೇವಾಲಯದ ದೀಪಸ್ತಂಬ



ಸಿಂಗಾಪುರದ ವರದರಾಜ ಸ್ವಾಮಿ ದೇವಾಲಯದ ನವರಂಗ

ಸುದರ್ಶನ ಚಕ್ರ, ಪಾಂಚಜನ್ಯ(ಶಂಖ), ಪುಷ್ಪದ ರಚನೆಯನ್ನು ಮಾಡಲಾಗಿದೆ. ಕಂಭದ ಕೊನೆಯಲ್ಲಿ ಅಲಂಕಾರಿಕವಾಗಿ ನಾಲ್ಕು ಕೂಡು ಸ್ತಂಭ ರಚನೆ, ಅದರ ಮೇಲೆ ಕುಂಭ, ಅದರ ಮೇಲೆ ಸಿಂಭೆ,[44] ಪಟ್ಟಿಕೆ,[45] ಕೊನೆಯಲ್ಲಿ ಬಾಗಿದ ಬಾಳೆಗೊನೆ ರೀತಿಯ ನಾಲ್ಕು ರಚನೆಗಳನ್ನು ಮಾಡಲಾಗಿದೆ. **ಇದರ ಮೇಲ್ಭಾಗದಲ್ಲಿ ಬಹುಶಃ ದೀಪವನ್ನು ಅಂಟಿಸುತ್ತಿದ್ದರು ಎಂದು ಅನಿಸುತ್ತದೆ. ಆದರೆ ಇಲ್ಲಿ ಯಾವುದೇ ದೀಪದ ರಚನೆಗಳು ಪ್ರಸ್ತುತ ಇಲ್ಲ.**

ನಿಜವಾಗಿಯೂ ದೇವಾಲಯವು ಸುಮಾರು 500 ವರ್ಷಗಳಷ್ಟು ಪ್ರಾಚೀನವಾಗಿರುವುದನ್ನು ಈ ದೇವಾಲಯಕ್ಕೆ ಸಂಬಂಧಿಸಿದ ಸಿಂಗಾಪುರ, ಚಿಕ್ಕಬೆಟ್ಟಹಳ್ಳಿ ಹಾಗೂ ಹಾರೋಹಳ್ಳಿ ಶಾಸನಗಳು ಸ್ಪಷ್ಟಪಡಿಸುತ್ತವೆ. ಆದರೆ ಈ ದೇವಾಲಯ ಜೀರ್ಣೋದ್ಧಾರವಾಗಿರುವುದರಿಂದ ತನ್ನ ಮೂಲ ಸೌಂದರ್ಯವನ್ನು ಕಳೆದುಕೊಂಡು ಹೊಸ ದೇವಾಲಯ ಎಂದು ಅನಿಸುತ್ತದೆ, **ಆದರೆ ಒಳಬಾಗದಲ್ಲಿನ ರಚನೆ ಶಾಸನಗಳಲ್ಲಿನ ಮಾಹಿತಿಯನ್ನು ಖಚಿತಪಡಿಸುತ್ತವೆ**. ಗರ್ಭಗುಡಿಯ ಮಧ್ಯದಲ್ಲಿ ಇಂದು ಶ್ರೀ ವರದರಾಜಸ್ವಾಮಿ ಎಂದು ಕರೆಯಲ್ಪಡುವ ನಾಲ್ಕು ಅಡಿಯ ಸುಂದರವಾದ ಮೂರ್ತಿಯನ್ನು ಸುಮಾರು ಒಂದೂವರೆ ಅಡಿ ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ಪೀಠದಲ್ಲಿ ವಿಷ್ಣುವಿನ ವಾಹನವಾದ ಗರುಡನನ್ನು




ಅಂದು ತಿರುವೆಂಗಳನಾಥ, ಇಂದು ವರದರಾಜ ಮೂಲ ಮೂರ್ತಿ


44 ಸುರುಳಿ ಆಕಾರ
45 ಪೀಠ



ಸುಕನಾಸಿಯ ಬಾಗಿಲವಾಡ ಮತ್ತು ದ್ವಾರಪಾಲಕರು



ಅಭಯ ಹಸ್ತ



ವರದ ಹಸ್ತ



ಕಟಿ ಹಸ್ತ

ಅಂಜಲಿಮುದ್ರೆಯಲ್ಲಿರುವಂತೆ[46] ಚಿಕ್ಕದಾಗಿ ಕೆತ್ತಲಾಗಿದೆ. ಆದರೆ ಶಿಲ್ಪಶಾಸ್ತ್ರದ ಪ್ರಕಾರ ವರದರಾಜ ಸ್ವಾಮಿಯು ಶಂಖ, ಚಕ್ರ, ವರದ ಮತ್ತು ಗದೆಯನ್ನು ಹಿಡಿದಿರಬೇಕು. ವರದ ಹಸ್ತದ ಬದಲಿಗೆ ಅಭಯಹಸ್ತವಿದ್ದು ಕಮಲವಿದ್ದರೂ ಸಹ ಅದು ವರದರಾಜಸ್ವಾಮಿ ಲಕ್ಷಣವಾಗುತ್ತದೆ. ಆದರೆ ಇಲ್ಲಿ ಇರುವ ಮೂರ್ತಿಯು ಬಲಭಾಗದ ಕೈಗಳಲ್ಲಿ ಚಕ್ರ, ಅಭಯಹಸ್ತ ಮತ್ತು ಎಡಭಾಗದ ಕೈಗಳಲ್ಲಿ ಶಂಖ, ಕಟಿಹಸ್ತವಿರುವುದರಿಂದ **ಇದು ಶಾಸನಗಳಲ್ಲಿ ಉಲ್ಲೇಖವಾಗಿರುವ ತಿರುವೆಂಗಳನಾಥ (ತಿರುವೆಂಕಟನಾಥ) ಸ್ವಾಮಿಯ ಲಕ್ಷಣಗಳನ್ನು ಹೋಲುತ್ತದೆ.** ಈ ದೇವಾಲಯದ ಮೂಲ ವಿಗ್ರಹವನ್ನು ಸೂಕ್ಷ್ಮವಾಗಿ ಗಮನಿಸಿ ಇದು ಮಹಾವಿಷ್ಣುವಿನ ಸ್ವರೂಪವಾದ ತಿರುವೆಂಕಟನಾಥನಾಥನ ಮೂರ್ತಿ, ವಿಜಯನಗರ ಕಾಲದೆಂದು ಶಿಲ್ಪಶಾಸ್ತ್ರ ಪ್ರವೀಣರಾದ ಡಾ. ಶಲ್ವಪಿಳ್ಳೈ ಅಯ್ಯಂಗಾರ್ ಅವರು ಸ್ಪಷ್ಟಪಡಿಸಿದ್ದಾರೆ. ಆದರೆ **ಇದನ್ನು ಎಂದಿನಿಂದ ಹಾಗೂ ಏಕೆ ವರದರಾಜಸ್ವಾಮಿ ಎಂದು ಕರೆದರು ಎಂಬುದಕ್ಕೆ ಯಾವುದೇ ನಿಖರವಾದ ದಾಖಲೆಗಳು ಇಲ್ಲ.** ಬಹುಶಃ ಕೆಲವು ಶತಮಾನಗಳ ನಂತರ ದೇವಾಲಯ ಶಿಥಿಲಗೊಂಡಿದ್ದು, ನಂತರ ಹಲವು ವರ್ಷಗಳ ವರೆಗೆ ಯಾವುದೇ ಪೂಜಾಕಾರ್ಯಗಳು ನಡೆಯದೆ ಇದ್ದು, ಕಾಲಾನಂತರ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿ ಅದನ್ನು ವರದರಾಜ ಸ್ವಾಮಿ ಎಂದು ಪೂಜಿಸಲು ಪ್ರಾರಂಭಿಸಿದ್ದಿರಬಹುದು ಎಂದು ಊಹಿಸಬಹುದು. ಇಂದಿಗೂ ಈ ದೇವಾಲಯದ ಹೆಸರು ಗೊಂದಲದ ಗೂಡೇ ಆಗಿದೆ, ಕಾರಣ ಕರ್ನಾಟಕ ಸರ್ಕಾರದ ಮುಜರಾಯಿ ಇಲಾಖೆಯ ದಾಖಲೆಗಳಲ್ಲಿ ಇದು **ವೀರಭದ್ರಸ್ವಾಮಿ ದೇವಾಲಯ** ಎಂದು ದಾಖಲಾಗಿರುವುದು. ಗರ್ಭಗುಡಿಯು ನಕ್ಷತ್ರಾಕಾರದ ವಿತಾನವನ್ನು (ದೇವಾಲಯದ ಮೇಲ್ಛಾವಣಿ) ಹೊಂದಿದೆ. ಇಲ್ಲಿನ ಬಾಗಿಲುವಾಡದ ಗೋಡೆಗಳನ್ನು ಹೊಸ ಕೆಂಪು ಗ್ರಾನೈಟ್ ಕಲ್ಲುಗಳಿಂದ ಮುಚ್ಚಲಾಗಿದೆ.

ಗರ್ಭಗುಡಿಯ ನಂತರ ಇರುವ ಸುಕನಾಸಿಯು ಸುಂದರವಾದ ಬಾಗಿಲುವಾಡವನ್ನು (ಹೊಸ್ತಿಲು) ಹೊಂದಿದೆ. ದಳ ಮತ್ತು ಪುಷ್ಪಮಾಲೆಗಳಿಂದ ಅಲಂಕಾರವಾಗಿರುವ ಬಾಗಿಲವಾಡದ ಮಧ್ಯದಲ್ಲಿ ಕೀರ್ತಿಮುಖದ ರಚನೆಯನ್ನು ಮಾಡಲಾಗಿದೆ. ಬಾಗಿಲವಾಡದ ಎಡ ಮತ್ತು ಬಲಭಾಗದಲ್ಲಿ

46 ಎರಡು ಕೈಗಳನ್ನು ಜೋಡಿಸಿ ಕೈ ಮುಗಿಯುತ್ತಿರುವ ರೀತಿಯಲ್ಲಿರುವುದು.



ಸಿಂಗಪ್ಪನಾಯಕ

ದೇವರಿಗೆ ನಮಸ್ಕರಿಸುತ್ತಿರುವಂತೆ ಇದ್ದು ರಾಜ ಅಥವಾ ಸ್ಥಳೀಯ ಅಧಿಕಾರಿಯಾಗಿರಬಹುದು. **ಬಹುಶಃ ಶಾಸನೋಕ್ತ ಸಿಂಗಾಪುರದ ಸಿಂಗಪ್ಪನಾಯಕ ಇವನಿರಬಹುದು ಎಂದು ಊಹಿಸಬಹುದು.**

ನವರಂಗ ಭಾಗ ಸಂಪೂರ್ಣವಾಗಿ ನವೀಕರಣ ಗೊಂಡಿದ್ದರೂ ಸಹ ಮೂಲ ನವರಂಗದ ಕಂಭಗಳನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ. ಈ ಕಂಭಗಳು ವಿಜಯನಗರ ಕಾಲದ ಚಿತ್ರಖಂಡ ಸ್ತಂಭಗಳಾಗಿವೆ. **ನಾಲ್ಕು ಕಂಭಗಳಲ್ಲಿ ಒಟ್ಟು 48 ಉಬ್ಬುಶಿಲ್ಪಗಳಿವೆ**, ಒಂದೊಂದು ಶಿಲ್ಪಗಳು



ನವರಂಗದಲ್ಲಿನ ಚಿತ್ರಖಂಡ ಸ್ತಂಭ

ಜಯ,ವಿಜಯರ ದ್ವಾರಪಾಲಕ ಶಿಲ್ಪಗಳನ್ನು ಇಡಲಾಗಿದೆ. ದ್ವಾರಪಾಲಕ ಶಿಲ್ಪಗಳು ಸಾಮಾನ್ಯವಾಗಿ ನವರಂಗದ ದ್ವಾರದಲ್ಲಿರುತ್ತವೆ. **ನವರಂಗದ ಭಿತ್ತಿಯ ಭಾಗ ಬಿದ್ದು ಹೋಗಿರುವುದರಿಂದ ಅವುಗಳನ್ನು ಸುಕನಾಸಿಯ ದ್ವಾರದಲ್ಲಿ ಅಳವಡಿಸಲಾಗಿದೆ**. ಸುಕನಾಸಿಯಲ್ಲಿ ಪದ್ಮಾಸನದಲ್ಲಿ ಕುಳಿತಿರುವ ಲಕ್ಷ್ಮೀ, ರಾಮಾನುಜಚಾರ್ಯ, ತಿರುಮಂಗೈ ಆಳ್ವಾರ್ ಮುಂತಾದ ಒಟ್ಟು ಐದು ಆಳ್ವಾರರ ಮೂರ್ತಿಗಳಿದ್ದು ಅವುಗಳನ್ನು ಮೈಸೂರು ಒಡೆಯರ ಕಾಲದಲ್ಲಿ ಪ್ರತಿಷ್ಠಾಪಿಸಲಾಗಿದೆ ಎಂದು ಶಿಲ್ಪಗಳ ಲಕ್ಷಣಗಳ ಆಧಾರದ ಮೇಲೆ ಡಾ. ಶಲ್ವಪಿಳ್ಳೈ ಅಯ್ಯಂಗಾರ್ ಅವರು ಹೇಳಿದ್ದಾರೆ.

ಸುಕನಾಸಿಯ ದ್ವಾರದ ಎಡಭಾಗದಲ್ಲಿ ಒಂದು ಲೌಖಿಕ ಶಿಲ್ಪವಿದೆ. ಕಿರೀಟ, ವಸ್ತ್ರಾಭರಣಗಳಿಂದ ಕೂಡಿರುವ ವ್ಯಕ್ತಿಯು



ಪರಿಚಾರಿಕೆಯ ಉಬ್ಬುಶಿಲ್ಪ



ಕೇಸರಿಯ ಉಬ್ಬುಶಿಲ್ಪ



ಕಾಳಿಂಗಮರ್ದನ ಕೃಷ್ಣ



ಅಂಜನಿಮುದ್ರೆಯಲ್ಲಿ ಆಂಜನೇಯ

ಪುನರಾವರ್ತಿತವಾಗಿವೆ. ಅಂಜನೀ ಮುದ್ರೆಯೊಂದಿಗೆ ಆಂಜನೇಯ, ನಮಸ್ಕರಿಸುತ್ತಿರುವ ರಾಜ ಅಥವಾ ಅಧಿಕಾರಿ, ಛಾಮರದೊಂದಿಗೆ ನೃತ್ಯ ಮಾಡುತ್ತಿರುವ ವ್ಯಕ್ತಿ, ಹಂಸ ವ್ಯಕ್ತಿ, ವೆಂಕಟೇಶ್ವರ, ಹಾವನ್ನು ಹಿಡಿದಿರುವ ಹಂಸ, ಕುಳಿತ ಭಂಗಿಯಲ್ಲಿರುವ ಕೇಸರಿ, ಕಾಳಿಂಗಮರ್ಧನ ಕೃಷ್ಣ, ಪುಷ್ಪವನ್ನು ಹಿಡಿದಿರುವ ಹಂಸ, ರಾಮ, ವರದರಾಜ ಸ್ವಾಮಿ, ಮತ್ತೊಬ್ಬ ವ್ಯಕ್ತಿ ನಮಸ್ಕರಿಸುತ್ತಿರುವುದು, ನಮಸ್ಕರಿಸುತ್ತಿರುವ ಮುನಿಯ ಉಬ್ಬು ಶಿಲ್ಪ, ಬ್ರಹ್ಮ, ಅಪ್ಸರೆ, ಲತಾ ಸುಂದರಿ, ಮಹಾಲಕ್ಷ್ಮೀ, ತಿರುಮಂಗೈ ಆಳ್ವಾರ್, ಉಗ್ರನರಸಿಂಹ, ನಾಗಬಂಧ, ಲಕ್ಷ್ಮೀ, ಆನೆ, ಕೂರ್ಮಾವತಾರ ವಿಷ್ಣು, ಯೋಗ ನರಸಿಂಹ, ಮಜ್ಜಿಗೆ ಕಡೆಯುತ್ತಿರುವ ಯಶೋಧ, ಬಾಲ ಕೃಷ್ಣ, ಕಮಲ ಪುಷ್ಪ ಮುಂತಾದ ಸುಂದರವಾದ ಉಬ್ಬುಶಿಲ್ಪಗಳಿಂದ ಕಂಭಗಳನ್ನು ಸಿಂಗರಿಸಿದ್ದಾರೆ.

ಕಂಬಗಳು ಬೋಧಿಗೆಗಳನ್ನು (ಪೋತಿಕಾ ಕಂಬದ ಕೊನೆಯ ಭಾಗ) ಹೊಂದಿದ್ದು ಇವುಗಳು ಬಾಗಿದ ಬಾಳೆಮೊಗ್ಗಿನ ರೀತಿಯಿವೆ ಇವುಗಳನ್ನು ಪುಷ್ಪಪೋತಿಕಾ ಎಂದು ಕರೆಯುತ್ತಾರೆ. ನವರಂಗದ ಮೇಲ್ಛಾವಣಿಯು ಸಮತಟ್ಟಾದ ಚಪ್ಪಡಿಕಲ್ಲುಗಳ ಹೊದಿಕೆಯನ್ನು ಹೊಂದಿದ್ದು, ಮಧ್ಯಭಾಗದಲ್ಲಿ ಅಗಲವಾದ ಕಮಲದ ರಚನೆಯನ್ನು ಮಾಡಲಾಗಿದೆ. ಹಳೆಯ ನವರಂಗದ ಬಾಗಿಲುವಾಡವು ಸಹ ಕಂಡುಬರುವುದಿಲ್ಲ.

ಶಾಸನೋಕ್ತವಾಗಿರುವ ಹಾಗೂ 500 ವರ್ಷಗಳಿಗೂ ಹಳೆಯದಾದ ತಿರುವೆಂಕಟನಾಥ (ತಿರುವೆಂಗಳನಾಥ) ದೇವಾಲಯವು ಹೆಸರಿಂದ ಮಾತ್ರವಲ್ಲದೆ, ಹಲವಾರು ವಿಷಯಗಳಲ್ಲಿ ಬದಲಾವಣೆ ಹೊಂದಿದೆ. **ಸರ್ವಕಾಲದಲ್ಲಿಯೂ ಪೂಜಾಕಾರ್ಯಗಳು ನಡೆಯಲಿ ಎಂದು ದಾನ ನೀಡಿರುವ ದೇವಾಲಯದಲ್ಲಿ ಇಂದು ವಾರಕ್ಕೊಮ್ಮೆ ಪೂಜಾಕಾರ್ಯಗಳು ಅಪರೂಪವಾಗಿ ನಡೆಯುತ್ತಿರುವುದು ಬಹಳ ಬೇಸರದ ಸಂಗತಿ**.



ಹಾರೋಹಳ್ಳಿಯ ಶಾಸನದಲ್ಲಿ
ಸಿಂಗಾಪುರದ ತಿರುವೆಂಗಳನಾತ

ರಾಮಾನುಜಕೂಟ

ಹಾರೋಹಳ್ಳಿ ಮತ್ತು ಚಿಕ್ಕಬೆಟ್ಟಹಳ್ಳಿಯ ಶಾಸನಗಳಲ್ಲಿ ಉಲ್ಲೇಖವಾಗಿರುವ ಸಿಂಗಾಪುರದ ರಾಮಾನುಜಕೂಟದ ಬಗ್ಗೆ ತಿಳಿಯುವುದಕ್ಕಿಂತ ಮುಂಚೆ, ಶ್ರೀ ವೈಷ್ಣವ ಪಂಥದ ಬಗ್ಗೆ ಕೆಲವು ಮಾಹಿತಿಯನ್ನು ತಿಳಿದುಕೊಳ್ಳುವುದು ಅವಶ್ಯಕವಾಗುತ್ತದೆ. ಭಾರತದಲ್ಲಿರುವ ಹಲವು ಮತಪಂಥಗಳಲ್ಲಿ ಶ್ರೀವೈಷ್ಣವ



ತಿರುಮಂಗೈ ಆಳ್ವಾರರ ಉಬ್ಬು ಶಿಲ್ಪ

ಪಂಥವು ಪ್ರಮುಖವಾದುದು. ಈ ಪಂಥವನ್ನು ಹೆಚ್ಚು ಪ್ರಚುರಪಡಿಸಿದ ಕೀರ್ತಿಯು ಶ್ರೀರಾಮಾನುಜಚಾರ್ಯರಿಗೆ (ಸಾ.ಶ. 1017-1137) ಸಲ್ಲುತ್ತದೆ. ಇವರು ಇಡೀ ದಕ್ಷಿಣ ಭಾರತದಾದ್ಯಂತ ಸಂಚರಿಸಿ ಅದರಲ್ಲೂ ಮುಖ್ಯವಾಗಿ ತಮಿಳುನಾಡಿನಿಂದ ಕರ್ನಾಟಕಕ್ಕೆ ಬಂದು ನೆಲೆಸಿ, ಸಹಸ್ರಾರು ಭಕ್ತರಿಗೆ ಶ್ರೀವೈಷ್ಣವ ದೀಕ್ಷೆಯನ್ನು ಕೊಡುತ್ತಾರೆ. ರಾಮಾನುಜಚಾರ್ಯರು ಶ್ರೀ ಮಹಾವಿಷ್ಣು ಅಥವಾ ಶ್ರೀ ಮನ್ನಾರಾಯಣನ ಪರಮ ಆರಾಧಕರಾಗಿದ್ದರಿಂದ ಇವರು ಪ್ರಚಾರ ಮಾಡಿದ ಪಂಥವು ಮುಂದೆ 'ಶ್ರೀವೈಷ್ಣವ ಪಂಥ'ವೆಂದೇ ಪ್ರಸಿದ್ಧವಾಯಿತು. ಈ ಪಂಥದ ವಿಶೇಷವೆಂದರೇ, ಶ್ರೀಮನ್ನಾರಾಯಣನ ಜೊತೆಗೆ ಆಳ್ವಾರರು ಹಾಗೂ ಆಚಾರ್ಯರನ್ನು ಆರಾಧಿಸುವುದು. **ತಮಿಳು ಭಾಷೆಯಲ್ಲಿ ಆಳ್ವಾರ್ ಎಂದರೆ ಮುಳುಗುವವರು ಎಂದರ್ಥ. ಅಂದರೆ ದೈವ ಭಕ್ತಿಯಲ್ಲಿ ಮುಳುಗಿದವರು ಅಥವಾ ತಲ್ಲೀನರಾದವರು ಎಂದು ಹೇಳಬಹುದು.** ಶ್ರೀ ಮಹಾವಿಷ್ಣುವಿನ ಪರಮ ಆರಾಧಕರಾದ ಈ ಆಳ್ವಾರರ ಒಟ್ಟು ಸಂಖ್ಯೆ 12. ಅದರಲ್ಲಿ 11 ಜನ ಪುರುಷರು ಹಾಗೂ ಅಂಡಾಳ್ ಅಥವಾ ಗೋದಾದೇವಿ ಎಂಬುವರು ಒಬ್ಬ ಮಹಿಳೆಯಾಗಿದ್ದರು. ಪ್ರಥಮವಾಗಿ ಆಳ್ವಾರರನ್ನು ಪೂಜಿಸುವ ಹಾಗೂ ಅವರಿಗೆ ದೇವಾಲಯಗಳನ್ನು ನಿರ್ಮಿಸುವ ಸಂಪ್ರದಾಯವು ರಾಮಾನುಜಚಾರ್ಯರ ಪ್ರಭಾವದಿಂದಾಗಿ ಪ್ರಾರಂಭವಾಯಿತು. ತಮಿಳುನಾಡಿನ ತಿರುಚಿನಪಳ್ಳಿ ಬಳಿ ಇರುವ 'ಶ್ರೀರಂಗಂ' ಸ್ಥಳವು ರಾಮಾನುಜಚಾರ್ಯರ ಪ್ರಮುಖ ಧಾರ್ಮಿಕ ಚಟುವಟಿಕೆಗಳ ಕೇಂದ್ರವಾಗಿತ್ತು. ಇತಿಹಾಸಕಾರರ ಅಭಿಪ್ರಾಯದಂತೆ ದಕ್ಷಿಣ ಭಾರತದಲ್ಲಿ ಕೋಯಿಲ್ (ಶ್ರೀರಂಗಂ), ತಿರುಮಲೈ ಮತ್ತು ಪೆರುಮಾಳ್

ಕೋಯಿಲ್ (ಕಂಚೀಪುರಂ) ಇವು ಮೂರು ಪ್ರಸಿದ್ಧ ಶ್ರೀವೈಷ್ಣವ ದೇವಾಲಯಗಳಾಗಿದ್ದವು.[47]



ಚಿಕ್ಕಬೆಟ್ಟಹಳ್ಳಿ ಶಾಸನದಲ್ಲಿ ರಾಮಾನುಜಕೂಟ್ಟ

ಮೊದಲೇ ಹೇಳಿದಂತೆ 12ನೇ ಶತಮಾನದಲ್ಲಿ ಶ್ರೀ ರಾಮಾನುಜಚಾರ್ಯರು ತಮಿಳುನಾಡಿನಿಂದ ಕರ್ನಾಟಕಕ್ಕೆ ಬಂದು ನೆಲೆಸಿದ ಸಂದರ್ಭದಲ್ಲಿ ಶ್ರೀವೈಷ್ಣವ ಧರ್ಮದ ತತ್ವಸಿದ್ಧಾಂತಗಳನ್ನು ಪ್ರತಿಪಾದಿಸಿ ಅನೇಕ ಕಡೆಗಳಲ್ಲಿ ಪ್ರಚಾರ ನಡೆಸಿದರು ಹಾಗೂ ದೀಕ್ಷೆಯನ್ನು ಸಹ ನೀಡಿದರು. ರಾಮಾನುಜರ ದೀಕ್ಷೆಯನ್ನು ಪಡೆದುಕೊಂಡ **ಈ ಜನರು ರಾಮಾನುಜರ ತತ್ವಸಿದ್ಧಾಂತಗಳು, ವ್ಯಾಖ್ಯಾನಗಳು, ಉಪದೇಶಗಳನ್ನು ಚರ್ಚಿಸಲು ಹಾಗೂ ದೇವರ ಕೀರ್ತನೆಗಳನ್ನು ಹಾಡಲು ಕೇಳಲು ಒಂದು ಕಡೆ ಸೇರುತ್ತಿದ್ದರು. ಈ ರೀತಿಯಾಗಿ ಸೇರುವಾಗ ತಮಗೆ ರಾತ್ರಿ ವೇಳೆಯಲ್ಲಿ ತಂಗಲು ಮತ್ತು ಒಟ್ಟಾಗಿ ಸೇರಿ ಚರ್ಚಿಸಲು ಮಾಡಿಕೊಂಡ ಒಂದು ವ್ಯವಸ್ಥೆಯೇ ಶ್ರೀ ರಾಮಾನುಜಕೂಟ.** ಶ್ರೀವೈಷ್ಣವರಿಗೆ ಉಚಿತವಾದ ಊಟ ಮತ್ತು ವಸತಿಯನ್ನು ಒದಗಿಸುವುದು ರಾಮಾನುಜಕೂಟಗಳ ಪ್ರಮುಖ ಉದ್ದೇಶವಾಗಿರುತ್ತಿತ್ತು. ಈ ರೀತಿ ಉಚಿತ ಊಟ ಮತ್ತು ವಸತಿಯನ್ನು ಒದಗಿಸುವುದು, ತಮ್ಮ ಗುರುಗಳಿಗೆ ಭಕ್ತಿಪೂರ್ವಕವಾಗಿ ಸಲ್ಲಿಸುವ ಸೇವೆಯೆಂದೇ ರಾಮಾನುಜರ ಶಿಷ್ಯರು ಅಥವಾ ಅನುಯಾಯಿಗಳು ನಂಬಿದ್ದರು. ಆದ್ದರಿಂದ ತಮ್ಮ ಗುರುಗಳಿಗೆ ಗೌರವಾರ್ಥವಾಗಿ **ರಾಮಾನುಜ ತ್ರಿವಿದಿ, ರಾಮಾನುಜಕೂಟಗಳನ್ನು ನಿರ್ಮಿಸುತ್ತಿದ್ದರು.** ಶ್ರೀವೈಷ್ಣವ ಕೇಂದ್ರಗಳಿಗೆ ಪ್ರಯಾಣಿಸುವ ಭಕ್ತರಿಗೆ ಹಾಗೂ ಯತಿಗಳಿಗೆ ಈ ರಾಮಾನುಜಕೂಟಗಳು ಬಹು ಉಪಕಾರಿಯಾಗಿದ್ದವು. **ಒಟ್ಟಾರೆಯಾಗಿ ಈ ರಾಮಾನುಜಕೂಟಗಳು ದೂರದ ಊರುಗಳಿಂದ ಹಾಗೂ ಪ್ರದೇಶಗಳಿಂದ ಬರುವ ಶ್ರೀವೈಷ್ಣವ ಭಕ್ತರಿಗಾಗಿ ತೆರೆಯಲಾದ ಪ್ರಸಾದ ನಿಲಯಗಳು ಅಥವಾ ಛತ್ರಗಳೇ ಆಗಿದ್ದವು ಎಂದು ಅಭಿಪ್ರಾಯಿಸಬಹುದು.** ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ, ಶ್ರೀ ವೈಷ್ಣವ ಯತಿಗಳು, ಶ್ರೀ ವೈಷ್ಣವ ಕೇಂದ್ರಗಳಿಗೆ ಪ್ರವಾಸ ಮಾಡುವಾಗ ಕೆಲವು ಸಂದರ್ಭಗಳಲ್ಲಿ ತಂಗುವ, ವಿಶ್ರಾಂತಿ ಪಡೆಯುವ ಪರಿಸ್ಥಿತಿ ಬರುತ್ತಿತ್ತು. ಆದರೆ ಅವರು ಎಲ್ಲೆಂದರಲ್ಲಿ ಉಳಿದುಕೊಳ್ಳುತ್ತಿರಲಿಲ್ಲ. ಆಗ ಅವರು ರಾಮಾನುಜಕೂಟಗಳಲ್ಲಿ ಉಳಿದುಕೊಳ್ಳುತ್ತಿದ್ದರು. ಈ ರಾಮಾನುಜಕೂಟದಲ್ಲಿ ಎಲ್ಲಾ ಶ್ರೀವೈಷ್ಣವರಿಗೆ ವಸತಿ ಮತ್ತು ದಾಸೋಹ ವ್ಯವಸ್ಥೆಯನ್ನು ಮಾಡಲಾಗುತ್ತಿತ್ತು ಹಾಗೂ ಇವು ಸಾಮಾನ್ಯವಾಗಿ ಶ್ರೀವೈಷ್ಣವ ದೇವಾಲಯಗಳ ಪಕ್ಕದಲ್ಲಿ ಅಥವಾ ಮಠಗಳಿಗೆ ಹೊಂದಿಕೊಂಡಂತೆ ಹಾಗೂ ದೊಡ್ಡ ದೊಡ್ಡ ಶ್ರೀವೈಷ್ಣವ ಧಾರ್ಮಿಕ ಕ್ಷೇತ್ರಗಳಲ್ಲಿ ಕಂಡು ಬರುತ್ತಿದ್ದವು.



ಚಿಕ್ಕಬೆಟ್ಟಹಳ್ಳಿಯ ಶಾಸನದಲ್ಲಿ ರಾಮಾನುಜಕೂಟ್ಟಕ್ಕೆ

ಹಾರೋಹಳ್ಳಿ ಮತ್ತು ಚಿಕ್ಕಬೆಟ್ಟಹಳ್ಳಿಯ ಶಾಸನಗಳಲ್ಲಿ ರಾಮಾನುಜಕೂಟಕ್ಕೆ ಈ ಎರಡೂ ಗ್ರಾಮಗಳನ್ನು ದಾನ ನೀಡಿರುವುದರಿಂದ, ಗ್ರಾಮಗಳ ನೂರಾರು ಎಕರೆಯ ಭೂಪ್ರದೇಶದ ಆದಾಯ ಮತ್ತು ತೆರಿಗೆಯು ರಾಮಾನುಜಕೂಟಕ್ಕೆ ಸೇರುತ್ತಿತ್ತು. ಇದರಿಂದ ಭಕ್ತಾದಿಗಳಿಗೆ ದಾಸೋಹದ ವ್ಯವಸ್ಥೆ ಮಾಡುತ್ತಿದ್ದರೆಂದು ಹೇಳಬಹುದಾಗಿದೆ.

ರಾಮಾನಜುಕೂಟಗಳು ವಿಶೇಷವಾಗಿ ಶ್ರೀವೈಷ್ಣವ ಭಕ್ತರು ತಂಗಲು ಹಾಗೂ ಉಟೋಪಚಾರಕ್ಕಾಗಿ ನಿರ್ಮಾಣವಾಗಿರುವಂತವು ಎಂದು ಈ ಮೊದಲೇ ತಿಳಿದಿದ್ದೇವೆ. ಶ್ರೀ ವೈಷ್ಣವರಲ್ಲಿ ಆಹಾರಕ್ಕೆ ಸಂಬಂಧಿಸಿದಂತೆ ಹಲವಾರು ಕಟ್ಟುನಿಟ್ಟಿನ ನಿಯಮಗಳಿವೆ. ಇವುಗಳನ್ನು ಸ್ವತಃ **ರಾಮಾನುಜರೇ ತಮ್ಮ 'ಶ್ರೀ ಭಾಷ್ಯಂ'** ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಯಾವ ಪದಾರ್ಥಗಳನ್ನು ತಿನ್ನಬಾರದು (ಈರುಳ್ಳಿ, ಬೆಳ್ಳುಳ್ಳಿ, ಅಣಬೆ, ಕತ್ತೆ ಹಾಲು, ಒಂಟೆ ಹಾಲು, ಮಾಂಸ ಮುಂತಾದವು), ಯಾವಾಗ ತಿನ್ನಬಾರದು (ಸ್ನಾನ, ಸಂಧ್ಯಾವಂದನೆಗೆ ಮೊದಲು), ಎಲ್ಲಿ ತಿನ್ನಬಾರದು (ಮುಖ್ಯ ದ್ವಾರದಿಂದ ಹೊರಗೆ), ಯಾವುದನ್ನು ತಿನ್ನಬೇಕು (ತಂದೆ, ತಾಯಿ, ಗುರುಹಿರಿಯರು ನೀಡಿದ ಆಹಾರ, ಹಣ್ಣು, ಹಾಲು, ಮೊಸರು ಮುಂತಾದವು), ಹೇಗೆ ಅವುಗಳನ್ನು ಸಿದ್ಧಪಡಿಸಬೇಕು, ಯಾರು ಸಿದ್ಧಪಡಿಸಬೇಕು ಎಂಬ ನಿಯಮಗಳು ಶ್ರೀ ವೈಷ್ಣವರಿಗೆ ಇರುವುದರಿಂದ ಸಾಮಾನ್ಯವಾಗಿ ಅವರು ಬೇರೆ ಬೇರೆ ಸ್ಥಳಗಳಿಗೆ ಭೇಟಿ ನೀಡಿದಾಗ ಹೊರಗಿನ ಆಹಾರವನ್ನು ಸೇವಿಸುತ್ತಿರಲಿಲ್ಲ. ಹಾಗಾಗಿ ರಾಮಾನುಜ ಕೂಟಗಳು ಅಂತವರಿಗಾಗಿ ಭೋಜನದ ವ್ಯವಸ್ಥೆಯನ್ನು ಮಾಡುತ್ತಿದ್ದವು. ಕೆಲವೊಮ್ಮೆ ಭಕ್ತಾಧಿಗಳೇ ತಮಗೆ ಬೇಕಾದ ಅಡುಗೆಗಳನ್ನು ಸ್ವತಃ ತಾವೇ ತಯಾರಿಸಿಕೊಂಡು ಸೇವಿಸುತ್ತಿದ್ದರು. ಶ್ರೀವೈಷ್ಣವರು ಯಾವ ನಿಯಮಗಳನ್ನು ಆಹಾರ ತಯಾರಿಕೆ ಮತ್ತು ಸೇವನೆಯಲ್ಲಿ ಪಾಲಿಸಬೇಕು ಎಂಬುದನ್ನು '**ಆಹಾರ ನಿಯಮಂ"** ಎಂಬ **ವೇದಾಂತ ದೇಶಿಕರ**

47 ಲಕ್ಷ್ಮಣ್ ತೆಲಗಾವಿ, "ವಿಜಯನಗರ ಕಾಲದ ರಾಮಾನುಜಕೂಟಗಳು", ವಿಜಯನಗರ ಅಧ್ಯಯನ, ಸಂಪುಟ - 14, ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಕರ್ನಾಟಕ ಸರ್ಕಾರ , 2013.



ಸಜ್ಜಿಗೆ



ಪುಳಿಯೋಗರೆ



ಲಾಡು



ದಧ್ಯಾನ್ನ

ಚಿತ್ರ ಕೃಪೆ - ಕೋಟೆ ವೆಂಕಟರಮಣ ಸ್ವಾಮಿ ದೇವಸ್ಥಾನ, ಬೆಂಗಳೂರು

ಗ್ರಂಥದಿಂದ ತಿಳಿಯಬಹುದು. ಇವರುಗಳಿಗೆ ಆಹಾರವನ್ನು ತಯಾರಿಸಲು ಬೇಕಾದ ಆಹಾರ ಪದಾರ್ಥಗಳನ್ನು ರಾಮಾನುಜ ಕೂಟಗಳಿಗೆ ದಾನ ನೀಡಿದ ಭೂಮಿಯಿಂದ ಬೆಳೆದ ಬೆಳೆಗಳನ್ನೆ ಹೆಚ್ಚಾಗಿ ಬಳಸಿಕೊಳ್ಳುತ್ತಿದ್ದರು. ಯಾವ ರೀತಿಯ ಅಡುಗೆಗಳನ್ನು ತಯಾರಿಸುತ್ತಿದ್ದರು ಎಂಬುದು ಕುತೂಹಲಕಾರಿ ಸಂಗತಿ. ಮುಖ್ಯವಾಗಿ ಇಂದು ನಾವುಗಳು ಅಡುಗೆಯಲ್ಲಿ ಬಳಸುವ ಟಮೋಟ, ಮೆಣಸಿನಕಾಯಿ ಮುಂತಾದವುಗಳು ೧೮ ಮತ್ತು ೧೯ನೇ ಶತಮಾನದಲ್ಲಿ ಪಾಶ್ಚಿಮಾತ್ಯರಿಂದ ಪರಿಚಯವಾದವು. ಇದಕ್ಕೂ ಮೊದಲಿಗೆ ಹುಳಿ ಮತ್ತು ಕಾರಕ್ಕೆ ಹೆಚ್ಚಾಗಿ ಹುಣಸೆ, ಮೆಣಸುಗಳನ್ನು ಬಳಸುತ್ತಿದ್ದರು. ಇನ್ನು ದೇವಾಲಯ, ಮಠ, ಕೂಟಗಳಲ್ಲಿ ತಯಾರಿಸುವ ಅಡುಗೆಗಳು ಜನಸಾಮಾನ್ಯರು ಮಾಡುವ ಅಡುಗೆಗಳಿಗಿಂತ ವಿಶೇಷವಾಗಿರುತ್ತಿದ್ದವು. ಗಂಧಶಾಲಿ (ಒಂದು ಜಾತಿಯ ಭತ್ತ), ಗೋಧಿ, ಶ್ಯಾಮಕ (ಸಾವೆ), ಕಂಗು (ನವಣೆ), ನೀವಾರ (ಕಾಡು ನವಣೆ), ಸೊಪ್ಪುಗಳು, ಕಡಲೆ, ಹೆಸರು, ತೊಗರಿ, ಉದ್ದು, ಶುಂಠಿ, ಸೈಂದವ ಲವಣ, ಹುಣಸೆ, ಮೆಣಸು, ಜೀರಿಗೆ, ಸಕ್ಕರೆ, ಹಾಲು, ಮೊಸರು, ತುಪ್ಪ ಮುಂತಾದ ಪದಾರ್ಥಗಳನ್ನು ಬಳಸಿ ವಿವಿಧ ಅಡುಗೆಗಳನ್ನು ತಯಾರಿಸುತ್ತಿದ್ದರು. ವಿಶೇಷವಾಗಿ ಶ್ರೀ ವೈಷ್ಣವರಿಗೆ ಅಡುಗೆಯಲ್ಲಿ ಯಾವ ಪದಾರ್ಥಗಳನ್ನು ಬಳಸಬೇಕು ಮತ್ತು ಬಳಸಬಾರದು ಎಂಬ ಕಟ್ಟುನಿಟ್ಟಿನ ನಿಯಮ ಇರುವುದರಿಂದ ಅವರಿಗೆ ತಯಾರಿಸುವ ಅಡುಗೆಗಳು ಸಹ ವಿಶೇಷತೆಯಿಂದ ಕೂಡಿರುತ್ತಿದ್ದವು. ಹೆಚ್ಚಾಗಿ ಪುಳಿಯೋಗರೆ, ದಧ್ಯಾನ, ಪಾಯಸ, ಕದಂಬ, ಅನ್ನ, ಬೇಳೆ ಸಾರು, ರಸಂ, ಮೊಸರು ಇವುಗಳನ್ನು ಬಳಸುತ್ತಿದ್ದರು (ಆಹಾರಗಳ ಬಗ್ಗೆ ಈ ಶಾಸನಗಳಲ್ಲಿ ಉಲ್ಲೇಖಿಸಿಲ್ಲವಾದರೂ ಸಮಕಾಲೀನ ಸಾಹಿತ್ಯ ಗ್ರಂಥಗಳ ಜೊತೆಗೆ ಮಾನಸೋಲ್ಲಾಸ, ಮಂಗರಸನ ಸೂಪಶಾಸ್ತ್ರಗಳ ಆಧಾರಗಳ ಮೇಲೆ ತಿಳಿಸಲಾಗಿದೆ). ದೇವರ ನೈವೇದ್ಯಕ್ಕೂ ಸಹ **ಪುಳಿಯೋಗರೆ**, **ದಧ್ಯಾನ್ನ**, **ಕದಂಬ** ಬಳಸುವುದನ್ನು ಕಾಣಬಹುದು. ಪ್ರಸ್ತುತ ನಾವು ಆಹಾರದಲ್ಲಿ ಬಳಸುವ ಸಾಮಾಗ್ರಿಗಳಲ್ಲಿ ವ್ಯತ್ಯಾಸವಾಗಿರಬಹುದೇ ಹೊರತು, ಬಹುತೇಕ ಅದೇ ಅಡುಗೆಗಳನ್ನೇ ಇಂದಿಗೂ ಸೇವಿಸುತ್ತಿದ್ದೇವೆ.

ಹಾರೋಹಳ್ಳಿ ಮತ್ತು ಚಿಕ್ಕಬೆಟ್ಟಹಳ್ಳಿಯ ಶಾಸನಗಳಲ್ಲಿ ಮಾತ್ರವಲ್ಲದೇ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ **ನೆಲಮಂಗಲ ತಾಲ್ಲೂಕಿನ ದಾಸನಪುರ ಗ್ರಾಮದ ಶಾಸನದಲ್ಲಿಯೂ** ರಾಮಾನುಜಕೂಟದ ದಾಸೋಹದ ಕಾರ್ಯಕ್ಕಾಗಿ ಗ್ರಾಮಗಳನ್ನು ಸರ್ವಮಾನ್ಯವಾಗಿ ದಾನ ನೀಡಿರುವ ಉಲ್ಲೇಖವಿದೆ[48].

48 Lewis Rice B, Epigraphia Carnatica Vol 09, Inscriptions of the Bangalore District, Supplementary, ಶಾಸನ ಸಂಖ್ಯೆ-185, 1905.

ಬೆಂಗಳೂರು ಜಿಲ್ಲೆಯಲ್ಲಿ ಮಾತ್ರವಲ್ಲದೇ **ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಮೇಲುಕೋಟೆಯಲ್ಲಿ ಕಂಡು ಬರುವ ಏಳು ಶಾಸನಗಳಲ್ಲಿ**[49] **ಮತ್ತು ಇದೇ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಬೆಳಗೊಳದ ಶಾಸನದಲ್ಲಿ**[50] **ಹಾಗೂ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ನಾಗೇನಹಳ್ಳಿಯ ಶಾಸನದಲ್ಲಿ**[51] ರಾಮಾನುಜಕೂಟದ ಉಲ್ಲೇಖವನ್ನು ನೋಡಬಹುದು.

ಕರ್ನಾಟಕದಲ್ಲಿ ಮಾತ್ರವಲ್ಲದೇ **ಆಂದ್ರಪ್ರದೇಶದ ತಿರುಪತಿ, ತಮಿಳುನಾಡಿನ ಶ್ರೀರಂಗಂ ಹಾಗೂ ಕಾಂಚಿಪುರಂಗಳು** ಪ್ರಸಿದ್ಧವಾದ ರಾಮಾನುಜಕೂಟಗಳಾಗಿದ್ದವು.

ಜಾಲಹಳ್ಳಿ ಸೂಕ್ಷ್ಮ ಶಿಲಾಯುಗದ ಶಿಲೋಪಕರಣದ ಕಾರ್ಖಾನೆ

ಈ ಮೊದಲು ತಿಳಿಸಿದಂತೆ, ಜಾಲಹಳ್ಳಿಯಲ್ಲಿ ಬೃಹತ್ ಬ್ರಿಟೀಷ್ ಮಿಲಿಟರಿ ಆಸ್ಪತ್ರೆಯು 1946ರಲ್ಲಿ ನಿರ್ಮಾಣಗೊಂಡಿತ್ತು. ಈ ಸಮಯದಲ್ಲಿ ಬ್ರಿಟೀಷ್ ಕಮಾಂಡರ್ **ಕೆ.ಆರ್.ಯು.ಟಾಡ್** ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಸೇರಿದ್ದರು. ಕೆ.ಆರ್.ಯು. ಟಾಡ್ ಅವರು ಸೈನಿಕರಲ್ಲದೆ ಪುರಾತತ್ವಶಾಸ್ತ್ರಜ್ಞರೂ ಆಗಿದ್ದರು. ಇವರು ಆಸ್ಪತ್ರೆಯ ಎದುರಿಗೆ ಎರಡು ಗುಡ್ಡಗಳನ್ನು ಗಮನಿಸಿ ಕುತೂಹಲಗೊಂಡು ಒಮ್ಮೆ ಹೋಗಿ ಪರಿಶೀಲಿಸಿದಾಗ ಅಲ್ಲಿ ಅವರಿಗೆ **ಸುಮಾರು 200 ಬಗೆಯ ಸೂಕ್ಷ್ಮ ಶಿಲಾಯುಗದ ಉಪಕರಣಗಳು ಸಿಕ್ಕವು**. ನಂತರ ಇದನ್ನು ಸೂಕ್ಷ್ಮವಾಗಿ

49 Epigraphia Carnatica Vol 06, 1977, (Mysore: University of Mysore), ಪಾಂಡವಪುರ ತಾಲ್ಲೂಕು, ಶಾಸನ ಸಂಖ್ಯೆ-128, 129, 132, 137, 162, 179, 182

50 Epigraphia Carnatica Vol 06, 1977, (Mysore: University of Mysore), ಶ್ರೀರಂಗಪಟ್ಟಣ ತಾಲ್ಲೂಕು ಶಾಸನ ಸಂಖ್ಯೆ- 71


51 Lewis Rice B, Epigraphia Carnatica Vol 11, Inscriptions of the Chitaldroog District, ಚಿತ್ರದುರ್ಗ ತಾಲ್ಲೂಕು ಶಾಸನ ಸಂಖ್ಯೆ-59, 1905.



ಜಾಲಹಳ್ಳಿಯಲ್ಲಿ ಶಿಲಾಯುಗದ ಉಪಕರಣಗಳು ದೊರೆತೆಡೆ ಇಂದು ಬಹುಮಹಡಿ ಕಟ್ಟಡವಿದೆ

ಪರಿಶೀಲಿಸಿ ಇದೊಂದು ಬೃಹತ್ ಉಪಕರಣ ತಯಾರಿಕಾ ಕಾರ್ಖಾನೆ ಎಂದು ದಾಖಲಿಸಿದರು.[52]

52 Todd K R U, "**A Microlithic Industry in Eastern Mysore**", Monthly Record of Anthropological Science (MAN), Vol XLVII, Article no 27, 1948



ಜಾಲಹಳ್ಳಿಯಲ್ಲಿ ದೊರಕಿದ ಶಿಲಾಯುಗದ ಉಪಕರಣಗಳು[42]

ಈ ಉಪಕರಣಗಳನ್ನು ಗಮನಿಸಿದ **ಡಾ.ಎಂ ಶೇಷಾದ್ರಿ**ಯವರು ಇದರ ಕಾಲ ಸುಮಾರು 2500-3000 ವರ್ಷಗಳ ಹಳೆಯದೆಂದು ಅಭಿಪ್ರಾಯಪಟ್ಟಿದ್ದಾರೆ.[53]

ಜಾಲಹಳ್ಳಿಯಲ್ಲಿ ದೊರೆತ ಉಪಕರಣಗಳನ್ನು ಬ್ರಿಟನ್ನಿನ ಬ್ಲೂಮ್ಸ್ ಬೆರಿ ವಸ್ತುಸಂಗ್ರಹಾಲಯದಲ್ಲಿ ಸಂರಕ್ಷಿಸಲಾಗಿದೆ.

ಯಶವಂತಪುರದಲ್ಲಿನ ರೋಮನ್ ನಾಣ್ಯಗಳು

1891-92ರಲ್ಲಿ ಯಶವಂತಪುರದಿಂದ ಹಿಂದೂಪುರಕ್ಕೆ ರೈಲ್ವೆ ಹಳಿ ಕಾರ್ಯ ಮಾಡುತ್ತಿದ್ದಾಗ ಕೆಲಸಗಾರರಿಗೆ ಭೂಮಿಯಲ್ಲಿ ಹೂತಿದ್ದ ನಾಣ್ಯ ತುಂಬಿದ ಮಡಕೆಯೊಂದು ಸಿಕ್ಕಿತು. ಅವನ್ನು **ಬಿ.ಎಲ್.ರೈಸ್** ಅವರು ಪರಿಶೀಲಿಸಿ ರೋಮನ್ ಸಾಮ್ರಾಜ್ಯದ ಚಕ್ರವರ್ತಿ ಅಗಸ್ಟಸ್, ಟೈಬಿರಿಯಸ್ ಮತ್ತು ಕ್ಲಾಡಿಯಸ್ ನ ಕಾಲದ ನಾಣ್ಯಗಳೆಂದು ಗುರುತಿಸಿ, ಇವು ಸುಮಾರು **ಸಾ.ಶ. ಪೂರ್ವ 21 ರಿಂದ ಸಾ.ಶ. 51ರ ಕಾಲಘಟ್ಟಕ್ಕೆ ಸೇರಿದವೆಂದು ದಾಖಲಿಸಿದರು**[54].

ಇದಾದ ನಂತರ ಇಲ್ಲಿ ದೊರೆತ ನಾಣ್ಯಗಳು ಏನಾದವು, ಎಲ್ಲಿವೆ ಎಂಬುದು ಯಕ್ಷಪ್ರಶ್ನೆಯಾಗಿದೆ.[55] ಇದರಿಂದ ಈ ಪ್ರದೇಶವು ಕ್ರಿಸ್ತ ಪೂರ್ವದಿಂದಲೂ(ಎರಡು ಸಾವಿರ ವರ್ಷಕ್ಕೂ ಹಿಂದಿನಿಂದಲೂ) ವಿದೇಶಿ ವ್ಯಾಪಾರ ವಿನಿಮಯ ಹೊಂದಿತ್ತು ಎಂದು ಹೇಳಬಹುದು.

53 Sheshadri M,,"*Microlithic Industries of Mysore*", **Seshachandrika (A compendium of Dr.M.Seshadri's works)**., Directorate of Archaeology and Museums, Mysore 1995, Page no 211-219

54 Rice Lewis , "Find of Roman Coins Near Bangalore.", **The Indian Magazine and Review** *no.* 258, 1892, p: 309-314.

55 Turner, Paula J, **Roman Coins from India** (UCL Institute of Archaeology Publications), Routledge, January 1989



ಅಗಸ್ಟಸ್ ಕಾಲದ (ಕ್ರಿ.ಪೂ. 18-16) ಚಿನ್ನದ ನಾಣ್ಯದ ಮಾದರಿ
ಚಿತ್ರ ಕೃಪೆ - ವಿಕಿಮೀಡಿಯ ಕಾಮನ್ಸ್ http://www.cngcoins.com

ಕೋಟೆಯ ಅವಶೇಷಗಳು

ಸಿಂಗಾಪುರದಲ್ಲಿ ಕೋಟೆ ಇದ್ದ ಬಗ್ಗೆ ಸ್ಥಳೀಯರು ಹೇಳುತ್ತಾರೆ. ಆದರೆ ಪ್ರಸ್ತುತ ಯಾವುದೇ ರೀತಿಯ ಕೋಟೆ ಅವಶೇಷಗಳು ಕಂಡುಬರುವುದಿಲ್ಲ.

ಸಿಂಗಾಪುರ ಕೆರೆ

ಸಿಂಗಾಪುರದ ಶಾಸನವು (ಸಾ.ಶ.1528) ಗದ್ದೆಯನ್ನು ತಿಪ್ಪಯ್ಯ ಎಂಬುವರಿಗೆ ದಾನ ನೀಡಿರುವುದನ್ನು ತಿಳಿಸುತ್ತದೆ. **ಇದರಿಂದ ನಮಗೆ ತಿಳಿದು ಬರುವುದೇನೆಂದರೆ ಸಿಂಗಾಪುರದ ಕೆರೆಯೂ ಸಹ ಈ ಶಾಸನದಷ್ಟೇ ಹಳೆಯದೆಂದು ಹೇಳಬಹದು**. ಅಲ್ಲದೇ ಈ ಕೆರೆಯು ಸಿಂಗಾಪುರದ ಅನೇಕ ತಲೆಮಾರುಗಳಿಗೆ ಜೀವನ ಕಟ್ಟಿಕೊಳ್ಳಲು ನೆರವಾಗಿದೆ ಎಂದರೆ ತಪ್ಪಾಗಲಾರದು. ಹಾಗೆಯೇ ಈ ಕೆರೆ ಅನೇಕ ಪ್ರಾಣಿ, ಪಕ್ಷಿ, ಜೀವ ಜಂತುಗಳ, ಜಲಚರಗಳಿಗೆ ಆವಾಸ ಸ್ಥಾನವಾಗಿದೆ ಹಾಗೂ ಈ ಕೆರೆಯಲ್ಲಿ ಸುಮಾರು ನೂರಕ್ಕೂ ಹೆಚ್ಚು ಪ್ರಭೇದದ ಪಕ್ಷಿಗಳು ಕಂಡುಬಂದಿದ್ದು ಅದರಲ್ಲಿ ಕೆಲವು ಪಕ್ಷಿ ಪ್ರಭೇದಗಳು ವಿದೇಶದಿಂದ ಬಂದು ಇಲ್ಲಿದ್ದು ಹೋಗುತ್ತವೆ ಎಂಬುದು ಗಮನಾರ್ಹ.[56]



ಚಂದ್ರಮುಕುಟ (Eurasian hoopoe)
ಚಿತ್ರ ಕೃಪೆ - Soumyadeep Chatterjee ವಿಕಿಮೀಡಿಯ ಕಾಮನ್ಸ್

56 https://ebird.org/hotspot/L13159248

ಸಿಂಗಾಪುರ ಕೆರೆ



ಕೊನೆಯ ಮಾತು

ಸ್ಥಳೀಯ ಇತಿಹಾಸಕ್ಕೆ ಸಿಂಗಾಪುರದಲ್ಲಿ ದೊರೆತಿರುವ ಶಾಸನಗಳು, ಪ್ರಾಚೀನ ಸ್ಮಾರಕಗಳು, ಪ್ರಾಗೈತಿಹಾಸಿಕ(ಇತಿಹಾಸ ಪೂರ್ವ) ಪಳೆಯುಳಿಕೆಗಳು ಬಹು ದೊಡ್ಡ ಕೊಡುಗೆ ಎಂದು ಹೇಳಬಹುದು. ಈ ಆಧಾರಗಳಿಂದ ಕೇವಲ ಸಿಂಗಾಪುದ ಇತಿಹಾಸ ಮಾತ್ರವಲ್ಲದೆ ಸುತ್ತಮುತ್ತಲ ಪ್ರದೇಶದ ಇತಿಹಾಸವು ಸಹ ಅನಾವರಣಗೊಳ್ಳುವುದರ ಜೊತೆಗೆ ಇನ್ನು ಹೆಚ್ಚಿನ ಸಂಶೋಧನೆ ಮತ್ತು ಅಧ್ಯಯನಕ್ಕೆ ಪ್ರೇರಣೆಯನ್ನು ಒದಗಿಸುತ್ತದೆ.

ಪ್ರಸ್ತುತ ದೇವಾಲಯದ ಹೆಸರು ಬಹು ಗೊಂದಲವನ್ನು ಉಂಟುಮಾಡಿದರು ಶಾಸನ ಆಧಾರಗಳು ಈ ದೇವಾಲಯವನ್ನು ತಿರುವೆಂಗಳನಾಥ ಎಂದು ನಿರೂಪಿಸುತ್ತವೆ. ಸಿಂಗಪ್ಪನಾಯಕ ಈ ದೇವಾಲಯದ ನಿರ್ಮಾತೃ ಇರಬಹುದು ಎಂದು ದೇವಾಲಯದಲ್ಲಿನ ಶಿಲ್ಪ ಮತ್ತು ಚಿಕ್ಕಬೆಟ್ಟಹಳ್ಳಿಯನ್ನು ದೇವಾಲಯಕ್ಕೆ ಇವನು ದಾನ ನೀಡಿರುವುದರಿಂದ ತಿಳಿಯಬಹುದು. ಇಂತಹ ಭವ್ಯ ಪರಂಪರೆಯುಳ್ಳ ಗ್ರಾಮದ ಐತಿಹಾಸಿಕ ಆಧಾರಗಳನ್ನು ಸ್ಥಳೀಯರು ನಿರ್ಲಕ್ಷಿಸದೆ ಜೋಪಾನವಾಗಿ ಕಾಪಾಡಿಕೊಂಡು ಹೋಗಬೇಕಾಗಿರುವುದು ಅತ್ಯವಶ್ಯಕವಾಗಿದೆ.

ಈ ಬಡಾವಣೆಗೆ ಐತಿಹಾಸಿಕ ಹಿನ್ನೆಲೆಯನ್ನು ಒದಗಿಸಿದ ಶಾಸನ ಹಾಕಿಸಿದ ದಿನ **ನವಂಬರ್ 26ರನ್ನು "ಸಿಂಗಾಪುರ ದಿನ"** ಎಂದು ವರ್ಷಕ್ಕೊಮ್ಮೆ ಆಚರಿಸುವುದರ ಮೂಲಕ ತಮ್ಮ ಊರಿನ ಗತ ವೈಭವವನ್ನು ನೆನಪು ಮಾಡಿಕೊಳ್ಳಬೇಕಾಗಿದೆ.

ಈ ಸಂಚಿಕೆಯು ಸಿಂಗಾಪುರದ ಐತಿಹಾಸಿಕ ನೈಜ ಇತಿಹಾಸವನ್ನು ತಿಳಿಯುವ ಪ್ರಯತ್ನವಾಗಿದ್ದು ಅಂದಿನ ಜನರ ಆಚರಣೆ, ನಂಬಿಕೆ, ಸಂಪ್ರದಾಯಗಳನ್ನು ಸರ್ವ ಕಾಲದಲ್ಲಿಯೂ ಮುಂದುವರೆಯಬೇಕು ಎಂಬ ಆಶಯವನ್ನು ಹೊಂದಿದೆ. ಶಾಸನಗಳನ್ನು ಭೌತಿಕ ಸಂರಕ್ಷಣೆ ಮಾಡುವುದರ ಜೊತೆಗೆ ಡಿಜಿಟಲ್ ಸಂರಕ್ಷಣೆ ಮಾಡಿರುವುದರಿಂದ ಮುಂದಿನ ಪೀಳಿಗೆಗೆ ಶಾಸನವನ್ನು ಶಾಶ್ವತವಾಗಿ ಉಳಿಸುವುದರ ಜೊತೆಗೆ ಸ್ಥಳೀಯ ಇತಿಹಾಸಕ್ಕೆ ಮಹತ್ವದ ಕೊಡುಗೆಯನ್ನು ನೀಡಿದೆ.

ಶಾಸನಗಳಲ್ಲಿ ಉಲ್ಲೇಖವಾಗಿರುವ ಅಕ್ಷರಗಳನ್ನು ಪ್ರತ್ಯೇಕಿಸಿ ನೀಡಿರುವುದರಿಂದ ಕಾಲದಿಂದ ಕಾಲಕ್ಕೆ ಕನ್ನಡ ಲಿಪಿ ಬೆಳವಣಿಗೆಯನ್ನು ತಿಳಿಯುವುದರ ಜೊತೆಗೆ ಅಭ್ಯಾಸ ಮಾಡಲು ಹೆಚ್ಚು ಸಹಾಯಕವಾಗಿದೆ.

ಒಟ್ಟಾರೆಯಾಗಿ ಸ್ಥಳೀಯ ಇತಿಹಾಸವನ್ನು ಬೇರೆಯದೆ ರೀತಿಯಲ್ಲಿ ಬರೆಯುವ ಪ್ರಯತ್ನ ಇದಾಗಿದ್ದು, ಎಲ್ಲಾ ವಯೋಮಾನದವರು, ವಿದ್ವಾಂಸರು ಹಾಗೂ ಸಂಶೋಧಕರನ್ನು ಗಮನದಲ್ಲಿರಿಸಿಕೊಂಡು ರಚಿಸಲಾಗಿದೆ. ಸ್ಥಳೀಯ ಇತಿಹಾಸದ ತಿಳುವಳಿಕೆ, ನಮ್ಮ ಪೂರ್ವಜರ ಸಂಸ್ಕೃತಿ ಮತ್ತು ಅಚರಣೆಯ ಅರಿವು, ಪ್ರಾಚೀನ ಸ್ಮಾರಕಗಳ ಸಂರಕ್ಷಣೆಗಳ ಜವಬ್ದಾರಿಗಳ ಬಗ್ಗೆ ತಿಳಿಸುವ ನಮ್ಮ ಪ್ರಯತ್ನ ಕೇವಲ ಒಂದು ಗ್ರಾಮ ಅಥವಾ ಬಡಾವಣೆಗೆ ಸೀಮಿತವಾಗಿರದೆ, ಪ್ರತಿಯೊಂದು ಗ್ರಾಮವು ತಮ್ಮ ಪರಂಪರೆಯನ್ನು ಮೂಲಸ್ಥಿತಿಯಲ್ಲಿ ಉಳಿಸಿ ಬೆಳೆಸಿಕೊಂಡು ಹೋಗುವುದರ ಮೂಲಕ ನಮ್ಮ ಪರಂಪರೆಯ ವೈಭವವನ್ನು ಮರಳಿ ಪಡೆಯಬೇಕೆಂಬ ಆಶಯವಾಗಿದೆ.

ಈ ಸಂಚಿಕೆಯು ನಿಮಗೆ ಸಂತೋಷವನ್ನು ನೀಡಿದೆ ಎಂದು ನಾವು ಬಾವಿಸುತ್ತೇವೆ. ನಿಮ್ಮ ಅನಿಸಿಕೆಗಳು ಹಾಗೂ ಸಲಹೆಗಳನ್ನು ಈ ಮೂಲಕ - https://bit.ly/singapura_kan ನಮಗೆ ಕಳಿಸಿ ಕೊಡಿ ಎಂದು ಕೇಳಿಕೊಳ್ಳುತ್ತೇವೆ , ಧನ್ಯವಾದಗಳು.

ಅನುಬಂಧ

ಶಾಸನದಲ್ಲಿರುವ ಅಕ್ಷರಗಳು

ಶಾಸನದಲ್ಲಿ ಕೊರೆದಿರುವ ಪ್ರತಿಯೊಂದು ಪದಗಳ ಅಕ್ಷರಗಳನ್ನು ಬೇರ್ಪಡಿಸುವ ಕೆಲಸವನ್ನು ಇಲ್ಲಿ ಮಾಡಲಾಗಿದೆ. ಹಾಗೆ ಅಕ್ಷರಗಳನ್ನು ಕತ್ತರಿಸುವ ಸಮಯದಲ್ಲಿ ಅಕ್ಷರಗಳ ಗಾತ್ರದ ಆಧಾರದ ಮೇಲೆ ಚಿತ್ರವು ದೊಡ್ಡ ಮತ್ತು ಸಣ್ಣ ಆಗುತ್ತದೆ. ಆದರೆ ಕೆಳಗೆ ಚಿತ್ರಗಳನ್ನು ನೀಡುವಾಗ ಟೇಬಲ್ ಗೆ ಸರಿ ಹೊಂದುವಂತೆ ಕಲ್ಲಿನ ಹಿನ್ನಲೆಯನ್ನು (Background) ಇಟ್ಟುಕೊಂಡು ಚಿತ್ರಗಳನ್ನು ಹಾಕಲಾಗಿದೆ. ಆದರೆ ಮೂಲ ಶಾಸನದಲ್ಲಿ ಈ ರೀತಿಯಾಗಿ ನೋಡಲು ಸಾಧ್ಯವಿಲ್ಲ. ಶಾಸನದ 3ಡಿ ಸ್ಕ್ಯಾನಿಂಗ್ ನ ಉಪಯೋಗವನ್ನು ಇಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಹಾರೋಹಳ್ಳಿಯ ಕ್ರಿಷ್ಣಪ್ಪನಾಯಕನ ರಾಮಾನುಜಕೂಟದ ಶಾಸನದ ಅಕ್ಷರಗಳು (ಸಾ.ಶ. 1530)

1ನೇ ಸಾಲು

೦	ಸ್ವ/sva	ಸ್ತಿ/sti	ಶ್ರೀ/śrī	ಜೆ/je	ಯ/ya	ಭ್ಯು/bhyu	ದ/da




ಯ/ya	ಶಾ/śā	ಲಿ/li	ವಾ/vā	ಹ/ha	ನ/na	ಶ/śa	ಕ/ka



2ನೇ ಸಾಲು

೦	ವ/va	ರು/ru	ಷ/ṣa	೧/1	೪/4	೫/5	೨/2



ನೆ/ne	ವಿ/vi	ಕೃ/kṛ	ತಿ/ti	ಷಂ/ṣaṃ	ವ/va	ದ/da	ರ/ra




3ನೇ ಸಾಲು

೦	ದ/da	ಖಾ/khā	ರ್ತಿ/rti	ಕ/ka	ಶು/śu	ಧ/dha	೧೨/12



ಪು/pu	ಣ್ಯ/ṇya	ಕಾ/kā	ಲ/la	ದ/da	ಲಿ/li	ಆ/ā



4ನೇ ಸಾಲು






ಚು/cu	ತ/ta	ರಾ/rā	ಯ/ya	ಮ/ma	ಹಾ/hā	ರಾ/rā	ಯ/ya








ರಿ/ri	ಗೆ/ge	ನಂ/naṃ	ಮ/ma	ತಂ/taṃ	ದೆ/de	ಬ/ba












5ನೇ ಸಾಲು

ಸ/sa	ವ/va	ಪ್ಪ/ppa	ನಾ/nā	ಯ/ya	ಕ/ka	ರಿ/ri	ಗೆ/ge
							

ಪುಂ/puṃ	ಣ್ಯ/ṇya	ವಾ/vā	ಗಿ/gi	ಆ/ā	ಚು/cu	ತ/ta	ರಾ/rā
							

6ನೇ ಸಾಲು


ಯ/ya	ರು/ru	ಸೋ/so	ಲೂ/lū	ರ/ra	ಬ/ba	ಸ/sa	ವ/va
							

ಪ್ಪ/ppa	ನಾ/nā	ಯ/ya	ಕ/ka	ರ/ra	ಮಂ/maṃ	ಕ/ka	ಳು/ḷu
							


ಕ್ರಿ/kri


7ನೇ ಸಾಲು


ಷ್ಟ್ಪ್ಣ/ṣtpṇa	ಪ್ಪ/ppa	ನಾ/nā	ಯ/ya	ಕ/ka	ರಿ/ri	ಗೆ/ge	ನಾ/nā



ಯ/ya	ಕ/ka	ತ/ta	ನ/na	ಕೆ/ke	ಪಾ/pā	ಲಿ/li	ಸಿ/si




ದ/da	ಸಿ/si	ವ/va	ನ/na




8ನೇ ಸಾಲು

ಸ/sa	ಮು/mu	ದ್ರ/dra	ದ/da	ಸ್ತ/sta	ಲ/la	ಕೆ/ke	ಸ/sa











ಲು/lu	ವ/va	ಹಾ/hā	ರು/ru	ಹ/ha	ಳಿ/ḷi	ಗ್ರ/gra	ಮ/ma



ವ/va


9ನೇ ಸಾಲು


ನು/nu	ಸಿಂ/siṃ	ಗಾ/gā	ಪು/pu	ರ/ra	ದ/da	ತಿ/ti	ರು/ru
							

ವೆಂ/veṃ	ಗ/ga	ಳ/ḷa	ನಾ/nā	ತ/ta	ಆಂ/āṃ	ಗ/ga	ರಂ/raṃ
							


ಗ/ga


10ನೇ ಸಾಲು

ವೈ/vai	ಬೋ/bo	ಗ/ga	ಆ/ā	ಮ್ರು/mru	ತ/ta	ಪ/pa	ಡಿ/ḍi



ನೈ/nai	ವೆ/ve	ದ್ಯ/dya	ಕೆ/ke	ರಾ/rā	ಮಾ/mā	ನು/nu	ಜ/ja




ಕೂ/kū




11ನೇ ಸಾಲು

ಟ/ṭa	ಕೆ/ke	ಸ/sa	ಲ/la	ಬೇ/be	ಕೆಂ/keṃ	ದು/du	ಕೊ/ko




ಟ್ಟ/ṭṭa	ಸಿ/si	ಲ/la	ಶ/śa	ದ/da	ನ/na



ಚಿಕ್ಕಬೆಟ್ಟಹಳ್ಳಿಯ ಸಿಂಗಪ್ಪನಾಯಕನ ರಾಮಾನುಜಕೂಟದ ಶಾಸನದ ಅಕ್ಷರಗಳು (ಸಾ.ಶ. 1524)


1ನೇ ಸಾಲು

ಶು/śu	ಭ/bha	ಮ/ma	ಸ್ತು/stu




2ನೇ ಸಾಲು

ತಾ/tā	ರ/ra	ಣ/ṇa	ಸಂ/sa0	ವ/va	ತ್ಸ/tsa	ರ/ra	ದ/da




ಮಾ/mā	ರ್ಗ/rga	ಷಿ/ṣi




3ನೇ ಸಾಲು

ರ/ra	ಶು/śu	೧/1	ಲು/lu	ಕ್ರಿ/kri	ಷ್ಣ/ṣṇa	ರಾ/rā	ಯ/ya




ರ/ra	ಕಾ/kā	ಲ/la	ದ/da	ಲಿ/li




4ನೇ ಸಾಲು

ಸಿಂ/siṃ	ಗ/ga	ಪ/pa	ನಾ/nā	ಯ/ya	ಕ/ka	ರು/ru	ಸಿಂ/siṃ




ಗಾ/gā	ಪು/pu	ರ/ra	ದ/da	ತಿ/ti	ರು/ru



5ನೇ ಸಾಲು

ಮ/ma	ಲೆ/le	ದೆ/de	ವ/va	ರ/ra	ಅ/a	ಮ್ರು/mru	ತ/ta




ಪ/pa	ಡಿ/ḍi	ಯ/ya	ನೈ/nai	ವೆ/ve	ದ್ಯ/dya	ಕ್ಕೆ/kke




6ನೇ ಸಾಲು

ರಾ/rā	ಮಾ/mā	ನು/nu	ಜ/ja	ಕೂ/kū	ಟ್ಟ/ṭṭa	ಕ್ಕೆ/kke	ಪ/pa




ಟ್ಟ/ṭṭa	ಣ/ṇa	ತಿಂ/tiṃ	ಮ್ಮ/mma	ಣ/ṇa	ಯ್ಯ/yya




7ನೇ ಸಾಲು

ನ/na	ವ/va	ರ/ra	ಮ/ma	ಕ್ಕ/kka	ಳು/ḷu	ಹಿ/hi	ರಿ/ri




ಆ/ā	ಯ/ya	ವ/va	ರ/ra	ದ/da	ರಾ/rā	ಜ/ja




8ನೇ ಸಾಲು






ಯ/ya	ನ/na	ವ/va	ರಿ/ri	ಗೆ/ge	ಚಿ/ci	ಗ/ga	ಬೆ/be












ಠ/ṭha	ಹ/ha	ಳಿ/ḷi	ಯ/ya	ನು/nu	ಬಿ/bi



9ನೇ ಸಾಲು


ಟೆ/ṭe	ವ/va	ಗಿ/gi	ಯಿ/yi	ದ್ರ/dra	ಮ/ma	ಕ್ಕೆ/kke	ಆ/ā
							
ರು/ru	ಆ/ā	ಳಿ/ḷi					
							

10ನೇ ಸಾಲು


ಪಿ/pi	ದ/da	ವ/va	ರು/ru	ಗಂ/gaṃ	ಗೆ/ge	ಯ/ya	ತ/ta
							
ಡಿ/ḍi							
							

11ನೇ ಸಾಲು

ಯ/ya	ಲ್ಲಿ/lli	ಕ/ka	ಪಿ/pi	ಲೆ/le	ಯ/ya	ವ/va	ದಿ/di




ಸಿ/si	ದ/da	ಪ/pa	ಪ/pa




12ನೇ ಸಾಲು

ಕ್ಕೆ/kke	ಹೊ/ho	ಹ/ha	ರು/ru	ಯಿ/yi	ತಿ/ti	ರು/ru	ವೆಂ/veṃ




ಗ/ga	ಳ/ḷa	ನಾ/nā




13ನೇ ಸಾಲು

ತ/ta	ದಾ/dā	ನ/na	ದ/da	ಯಿ/yi	ದ್ರ/dra	ಮ/ma	ಕ್ಕೆ/kke




ತ/ta	ಪಿ/pi	ದೊ/do	ರು/ru




14ನೇ ಸಾಲು

ಥಂ/thaṃ	ಮ/ma	ತಂ/taṃ	ದೆ/de	ತಾ/tā	ಯ/ya	ಕಾ/kā	ಶಿ/śi




ಯ/ya



15ನೇ ಸಾಲು

ಲಿ/li	ಕೊಂ/koṃ	ದ/da	ವ/va	ರು/ru






ಸಿಂಗಾಪುರದ ನಲಪನಾಯ್ಕನ ಶಾಸನದ ಅಕ್ಷರಗಳು (ಸಾ.ಶ 1528)

ಡಿಜಿಟಲ್ ಮಾಡಲನ್ನು ಕಂಪ್ಯೂಟರಿನಲ್ಲಿ ವಿವಿಧ ವಿಧಾನಗಳಿಂದ ನಾವು ನೋಡುವುದರಿಂದ ಕೆಲವು ಅಕ್ಷರಗಳು ಕಾಣುತ್ತವೆ ಆದರೆ ಆ ಅಕ್ಷರಗಳನ್ನು ಪ್ರತ್ಯೇಕವಾಗಿ ತೆಗೆದರೆ ಸರಿಯಾಗಿ ಕಾಣುವುದಿಲ್ಲ ಆದ್ದರಿಂದ ಅಂತಹ ಜಾಗದಲ್ಲಿ ಖಾಲಿ ಬಿಡಲಾಗಿದೆ.



1ನೇ ಸಾಲು

ಮ/ma	ರ್ವ/rva	ದಾ/dā	ರಿ/ri

2ನೇ ಸಾಲು


ಸ/sa	ರ್ವ/rva	ದಾ/dā	ರಿ/ri	ಶಂ/śaṃ	ವ/va	ತ್ಸ/tsa	[ರ]/[ra]
							

3ನೇ ಸಾಲು

ದ/ā	ಆ/ā	ಷ/ṣa	ಡ/ḍa	ಶು/śu	೧/1
					


4ನೇ ಸಾಲು

ಲು/lu	ನ/na	ಲ/la	ಪ/pa	ನಾ/nā	ಯ್ಕ/yka




5ನೇ ಸಾಲು

ಸಿಂ/siṃ	ಗಾ/gā	ಪು/pu	ರ/ra	ದ/da	ಭೆ/bhe




6ನೇ ಸಾಲು

ಟೆ/ṭe	ಯ/ya	ರಾ/rā	ಯ/ya	ಗೆ/ge	ಸಿಂ/siṃ








7ನೇ ಸಾಲು





ಗ/ga	ಪ್ಪ/ppa	ನಾ/nā	ಯ್ಕ/yka	ರಿ/ri	ಗೆ/ge






8ನೇ ಸಾಲು

ದ/da	ರ್ಮ/rma	ವಾ/vā	ಗ/ga	ಭೆ/bhe	ಕೆಂ/keṃ
					

9ನೇ ಸಾಲು

ದು/du	ಪಾ/pā	ತ್ರ/tra	ಬೊ/bo	ಗ/ga	ಕೆ/ke
					

10ನೇ ಸಾಲು

ತಿ/ti	ಪ/pa	ಯ/ya	ಗೆ/ge	ಕೊ/ko
				

11ನೇ ಸಾಲು

ವ/va	ಗ/ga	ದೆ(ದ್ದೆ)/ de(dde)	ಗೆ/ge	ಅ(ಆ)/a(ā)

12ನೇ ಸಾಲು




ವ/va	ನಾ/nā	ದ/da	ರು/ru

ಬೆಂಗಳೂರು ಪ್ರದೇಶದ ಶಾಸನ ಆಧಾರಿತ ಕನ್ನಡ ಲಿಪಿ ಬೆಳವಣಿಗೆ




ಬೆಂಗಳೂರು ಪ್ರದೇಶದಲ್ಲಿ 8ನೇ ಶತಮಾನದಿಂದ 17ನೇ ಶತಮಾನದವರೆಗೆ ದೊರೆಯುವ ಶಾಸನಗಳಲ್ಲಿ ಲಿಪಿಯು ಹೇಗೆ ಕಾಲದಿಂದ ಕಾಲಕ್ಕೆ ಬದಲಾವಣೆಯಾಗುತ್ತಾ ಬಂದಿದೆ ಎಂಬುದನ್ನು ಈ ಕೆಳಕಂಡಂತೆ ನೀಡಿರುವ ಕೆಲವು ಅಕ್ಷರಗಳ ಲಿಪಿ ಪಟ್ಟಿಕೆಗಳ ಮೂಲಕ ತೋರಿಸಲಾಗಿದೆ. ಹಾಗೂ ಈ ಲಿಪಿಪಟ್ಟಿಕೆಯಲ್ಲಿ ಚಿಕ್ಕಬೆಟ್ಟಹಳ್ಳಿ ಹಾಗೂ ಹಾರೋಹಳ್ಳಿ ಶಾಸನಗಳ ಕೆಲವು ಅಕ್ಷರಗಳನ್ನೂ ಸಹ ತೋರಿಸಲಾಗಿದೆ.ಈ ಲಿಪಿ ಬೆಳವಣಿಗೆಯನ್ನು ಉತ್ತಮ ಗುಣಮಟ್ಟದ ಶಾಸನಗಳ 3D ಮಾಡೆಲ್ ಗಳ ಅಕ್ಷರಗಳನ್ನು ಬಳಸಿಕೊಳ್ಳುವ ಮೂಲಕ ಉದಾಹರಿಸಲಾಗಿದೆ.



ಉದಾಹರಣೆಯಾಗಿ ಶ್ರೀ, ಕ, ಮ, ಜ, ವ, ತ, ಯ ಅಕ್ಷರಗಳ ಲಿಪಿ ಬೆಳವಣಿಗೆಯನ್ನು ಕೆಳಗೆ ತೋರಿಸಲಾಗಿದೆ.

ಶ್ರೀ ಅಕ್ಷರ ಸಾ.ಶ. 750 ರಿಂದ 1530 ರವರೆಗೆ





ಸಾ. ಶ. 750	ಸಾ. ಶ. 750	ಸಾ. ಶ. 890	ಸಾ. ಶ. 1029	ಸಾ. ಶ. 1440	ಸಾ. ಶ. 1530
ಮಾರೆಯನ ವೀರಗಲ್ಲು (**ಕೆ. ಆರ್ ಪುರಂ**)	ಪಳ್ಳತೆಜೆಯಮ್ಮನ ವೀರಗಲ್ಲು (**ಶ್ರೀನಿವಾಗಿಲು**)	ನಾಗತ್ತರನ ವೀರಗಲ್ಲು (**ಬೇಗೂರು**)	ಮೌನಿಭಟ್ಟಾರಕನ ಶಾಸನ (**ಸೋಲದೇವನಹಳ್ಳಿ**)	ಮಲ್ಲರಸನ ಚೊಕ್ಕನಾಥ ದೇವಾಲಯದ ಶಾಸನ (**ದೊಮ್ಮಲೂರು**)	ಕ್ರಿಷ್ಣಪ್ಪನಾಯಕನ ಶಾಸನ (**ಹಾರೋಹಳ್ಳಿ**)
					


ಕ ಅಕ್ಷರ ಸಾ.ಶ. 750 ರಿಂದ 1530 ರವರೆಗೆ

ಸಾ. ಶ. 750	ಸಾ. ಶ. 890	ಸಾ. ಶ. 950	ಸಾ. ಶ. 1336	ಸಾ. ಶ. 1342	ಸಾ. ಶ. 1376
ಮಾರೆಯನ ವೀರಗಲ್ಲು (**ಕೆ. ಆರ್ ಪುರಂ**)	ನಾಗತ್ತರನ ವೀರಗಲ್ಲು (**ಬೇಗೂರು**)	**ಜಕ್ಕೂರು** ಪ್ರಶಸ್ತಿ ಶಾಸನ	ಹೊನ್ನಗೌಡನ ಮಕ್ಕಳ ಶಾಸನ (**ಬ್ಯಾಡರಹಳ್ಳಿ**)	ಚೋಳೆಯನಾಯಕನ ಶಾಸನ (**ಗಾಣಿಗರಹಳ್ಳಿ**)	ಚೊಕ್ಕಾಬಕ್ತನ ಶಾಸನ (**ದೊಡ್ಡಗುಬ್ಬಿ**)
					





ಸಾ. ಶ. 1433	ಸಾ. ಶ. 1524	ಸಾ. ಶ. 1530
ದೇವಿಜೀಯನ ಗರುಡಗಂಬ ಶಾಸನ (**ಬೆಳತೂರು**)	ಸಿಂಗಪ್ಪನಾಯಕನ ರಾಮಾನುಜ ಕೂಟದ ಶಾಸನ (**ಚಿಕ್ಕಬೆಟ್ಟಹಳ್ಳಿ**)	ಕ್ರಿಷ್ಣಪ್ಪನಾಯಕನ ರಾಮಾನುಜ ಕೂಟದ ಶಾಸನ (**ಹಾರೋಹಳ್ಳಿ**)
		


ಮ ಅಕ್ಷರ ಸಾ.ಶ. 750 ರಿಂದ 1530 ರವರೆಗೆ

ಸಾ. ಶ. 750	ಸಾ. ಶ. 850	ಸಾ. ಶ. 890	ಸಾ. ಶ. 950	ಸಾ. ಶ. 1029	ಸಾ. ಶ. 1342
ಕಿತ್ತಯ್ಯ ವೀರಗಲ್ಲು (**ಹೆಬ್ಬಾಳ**)	ಸಂಬಯ್ಯ ವೀರಗಲ್ಲು (**ಮೇಡಹಳ್ಳಿ**)	**ಬೇಗೂರು** ನಾಗತ್ತರನ ವೀರಗಲ್ಲು	**ಜಕ್ಕೂರ** ಪ್ರಶಸ್ತಿ ಶಾಸನ	ಮೌನಿಭಟ್ಟಾರಕನ ಶಾಸನ (**ಸೋಲದೇವನಹಳ್ಳಿ**)	ಚೋಳೆಯನಾಯಕನ ಶಾಸನ (**ಗಾಣಿಗರಹಳ್ಳಿ**)
					




ಸಾ. ಶ. 1433	ಸಾ. ಶ. 1530
ದೇವಿಜೀಯನ ಗರುಡಗಂಬ ಶಾಸನ (**ಬೆಳತೂರು**)	ಕ್ರಿಷ್ಣಪ್ಪನಾಯಕನ ರಾಮಾನುಜ ಕೂಟದ ಶಾಸನ (**ಹಾರೋಹಳ್ಳಿ**)
	




ಜ ಅಕ್ಷರ ಸಾ.ಶ. 750 ರಿಂದ 1530 ರವರೆಗೆ

ಸಾ. ಶ. 750	ಸಾ. ಶ. 890	ಸಾ. ಶ. 890	ಸಾ. ಶ. 1029	ಸಾ. ಶ. 1433	ಸಾ. ಶ. 1524
ಮಾರೆಯನ ವೀರಗಲ್ಲು (**ಕೆ. ಆರ್ ಪುರಂ**)	**ಬೇಗೂರು** ನಾಗತ್ತರನ ವೀರಗಲ್ಲು	**ಬೇಗೂರು** ನಾಗತ್ತರನ ವೀರಗಲ್ಲು	ಮೌನಿಭಟ್ಟಾರಕನ ಶಾಸನ (**ಸೋಲದೇವನಹಳ್ಳಿ**)	ದೇವಿಜೀಯನ ಗರುಡಗಂಬ ಶಾಸನ (**ಬೆಳತೂರು**)	ಸಿಂಗಪ್ಪನಾಯಕನ ರಾಮಾನುಜ ಕೂಟದ ಶಾಸನ (**ಚಿಕ್ಕಬೆಟ್ಟಹಳ್ಳಿ**)
					





ಸಾ. ಶ. 1530
ಕ್ರಿಷ್ಣಪ್ಪನಾಯಕನ ರಾಮಾನುಜ ಕೂಟದ ಶಾಸನ (**ಹಾರೋಹಳ್ಳಿ**)


ವ ಅಕ್ಷರ ಸಾ.ಶ. 750 ರಿಂದ 1705 ರವರೆಗೆ

ಸಾ. ಶ. 750	ಸಾ. ಶ. 850	ಸಾ. ಶ. 890	ಸಾ. ಶ. 950	ಸಾ. ಶ. 1029	ಸಾ. ಶ. 1433
ಕಿತ್ತಯ್ಯ ವೀರಗಲ್ಲು (**ಹೆಬ್ಬಾಳ**)	ಸಂಬಯ್ಯ ವೀರಗಲ್ಲು (**ಮೇಡಹಳ್ಳಿ**)	**ಬೇಗೂರು** ನಾಗತ್ತರನ ವೀರಗಲ್ಲು	**ಜಕ್ಕೂರ** ಪ್ರಶಸ್ತಿ ಶಾಸನ	ಮೌನಿಭಟ್ಟಾರಕನ ಶಾಸನ (**ಸೋಲದೇವನಹಳ್ಳಿ**)	ದೇವಿಜೀಯನ ಗರುಡಗಂಬ ಶಾಸನ (**ಬೆಳತೂರು**)
					




ಸಾ. ಶ. 1524	ಸಾ. ಶ. 1528	ಸಾ. ಶ. 1705
ಸಿಂಗಪ್ಪನಾಯಕನ ರಾಮಾನುಜ ಕೂಟದ ಶಾಸನ (**ಚಿಕ್ಕಬೆಟ್ಟಹಳ್ಳಿ**)	ನಲಪ್ಪನಾಯ್ಕನ ಶಾಸನ (**ಸಿಂಗಾಪುರ**)	ಕಂಠೀರವ ನರಸರಾಜ ಒಡೆಯರ ಶಾಸನ (**ಕೊತ್ತನೂರು**)
		


ತ ಅಕ್ಷರ ಸಾ.ಶ. 750 ರಿಂದ 1530ರವರೆಗೆ

ಸಾ. ಶ. 750	ಸಾ. ಶ. 850	ಸಾ. ಶ. 890	ಸಾ. ಶ. 1029	ಸಾ. ಶ. 1342	ಸಾ. ಶ. 1433
ಕಿತ್ತಯ್ಯ ವೀರಗಲ್ಲು (**ಹೆಬ್ಬಾಳ**)	ಸಂಬಯ್ಯ ವೀರಗಲ್ಲು (**ಮೇಡಹಳ್ಳಿ**)	**ಬೇಗೂರು** ನಾಗತ್ತರನ ವೀರಗಲ್ಲು	ಮೌನಿಭಟ್ಟಾರಕನ ಶಾಸನ (**ಸೋಲದೇವನಹಳ್ಳಿ**)	ಚೋಳೆಯನಾಯಕನ ಶಾಸನ (**ಗಾಣಿಗರಹಳ್ಳಿ**)	ದೇವಿಜೀಯನ ಗರುಡಗಂಬ ಶಾಸನ (**ಬೆಳತೂರು**)
					

ಸಾ. ಶ. 1530
ಕ್ರಿಷ್ಣಪ್ಪನಾಯಕನ ರಾಮಾನುಜ ಕೂಟದ ಶಾಸನ (**ಹಾರೋಹಳ್ಳಿ**)


ಯ ಅಕ್ಷರ ಸಾ.ಶ. 750 ರಿಂದ 1530ರವರೆಗೆ

ಸಾ. ಶ. 750	ಸಾ. ಶ. 850	ಸಾ. ಶ. 890	ಸಾ. ಶ. 1029	ಸಾ. ಶ. 1342	ಸಾ. ಶ. 1528
ಪಳ್ಚತೆಱೆಯಮ್ಮನ ವೀರಗಲ್ಲು (**ಶ್ರೀನಿವಾಗಿಲು**)	ಸಂಬಯ್ಯ ವೀರಗಲ್ಲು (**ಮೇಡಹಳ್ಳಿ**)	**ಬೇಗೂರು** ನಾಗತ್ತರನ ವೀರಗಲ್ಲು	ಮೌನಿಭಟ್ಟಾರಕನ ಶಾಸನ (**ಸೋಲದೇವನಹಳ್ಳಿ**)	ಚೋಳೆಯನಾಯಕನ ಶಾಸನ (**ಗಾಣಿಗರಹಳ್ಳಿ**)	ನಲಪ್ಪನಾಯ್ಕನ ಶಾಸನ (**ಸಿಂಗಾಪುರ**)
					

ಸಾ. ಶ. 1530
ಕ್ರಿಷ್ಣಪ್ಪನಾಯಕನ ರಾಮಾನುಜ ಕೂಟದ ಶಾಸನ (**ಹಾರೋಹಳ್ಳಿ**)




ದಿ ಮಿಥಿಕ್ ಸೊಸೈಟಿ

ಭಾರತೀಯ ಸಾಂಸ್ಕೃತಿಕ ಅಧ್ಯಯನಕ್ಕೆ ಅರ್ಪಿಸಿಕೊಂಡ ಅಭಿಜಾತ ಸಂಸ್ಥೆಗಳ ಪೈಕಿ 'ದಿ ಮಿಥಿಕ್ ಸೊಸೈಟಿ'ಯು ಹೆಮ್ಮೆಪಡುವಂಥ ಸ್ಥಾನವನ್ನು ಪಡೆದುಕೊಂಡಿದೆ. 1909ರಲ್ಲಿ ಪ್ರಾರಂಭವಾದ ಸಂಸ್ಥೆಯು ಸತತ 112 ವರ್ಷಗಳಿಂದ ಭಾರತೀಯ ಅಧ್ಯಯನ ಶಾಸ್ತ್ರಗಳಾದ ಇತಿಹಾಸ, ಪುರಾತತ್ವ ಶಾಸ್ತ್ರ, ಭಾಷಾಶಾಸ್ತ್ರ, ನಾಣ್ಯಶಾಸ್ತ್ರ, ಶಾಸನಶಾಸ್ತ್ರ, ಜಾನಪದ, ಪುರಾಣ, ಧರ್ಮ, ಕಲೆ ಮತ್ತು ವಾಸ್ತುಶಿಲ್ಪದ ಕ್ಷೇತ್ರಗಳಲ್ಲಿ ಸಂಶೋಧನೆ, ಪ್ರಚಾರ, ಉಪನ್ಯಾಸ, ಸಂರಕ್ಷಣೆ ಹಾಗೂ ಅವುಗಳ ಮೇಲೆ ಬೆಳಕು ಚೆಲ್ಲುವ ಕೆಲಸವನ್ನು ನಿರಂತರ ಮಾಡುತ್ತಾ ಬರುತ್ತಿದೆ. ಸುಮಾರು 40 ಸಾವಿರಕ್ಕೂ ಹೆಚ್ಚು ಪುಸ್ತಕ ಸಂಗ್ರಹವಿರುವ ಗ್ರಂಥಾಲಯವು ಆಸಕ್ತರು ಮತ್ತು ಸಂಶೋಧಕರಿಗೆ ವರದಾನವಾಗಿದೆ. ಬಿ.ಎಲ್.ರೈಸ್, ಸರ್ ಸಿ.ವಿ.ರಾಮನ್, ಆರ್.ಶಾಮಶಾಸ್ತ್ರಿ, ಸರ್ ಮಿರ್ಜಾ ಇಸ್ಮಾಯಿಲ್, ಡಾ. ಎಸ್.ಆರ್.ರಾವ್ , ಎಸ್. ಶ್ರೀಕಂಠಯ್ಯ, ರಾವ್ ಬಹದ್ದೂರ್ ಆರ್.ನರಸಿಂಹಾಚಾರ್, ಸಿ.ಹಯವದನ ರಾವ್, ಸರ್. ಎಂ.ವಿಶ್ವೇಶ್ವರಯ್ಯ ಮತ್ತು ಇತರರು ಸಂಸ್ಥೆಯ ಸುದೀರ್ಘ ಮತ್ತು ಶ್ರೀಮಂತ ಇತಿಹಾಸದೊಂದಿಗೆ ಸಂಬಂಧವನ್ನು ಹೊಂದಿದ್ದರು.



ದಿ ಮಿಥಿಕ್ ಸೊಸೈಟಿಯ ಶಾಸನಗಳ ಡಿಜಿಟಲ್ ಸಂರಕ್ಷಣಾ ಯೋಜನೆಯ ತಂಡವು ಶಾಸನಗಳನ್ನು 3ಡಿ ಸ್ಕ್ಯಾನ್ ಮಾಡುತ್ತಿರುವುದು